

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 29 ಭಾನುವಾರ 2022

ಸಂಪುಟ: 43 | ಸಂಚಿಕೆ: 43 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




ರಾಷ್ಟ್ರಪತಿ, ಉಪರಾಷ್ಟ್ರಪತಿ ಆಯ್ಕೆ ಚರ್ಚೆ ಆರಂಭ; ಈ ಬಾರಿ ಅಲ್ಪಸಂಖ್ಯಾತರು, ಮಹಿಳೆಗೆ ಪ್ರಾತಿನಿಧ್ಯ ಕಲ್ಪಿಸುವ ಉದ್ದೇಶ


ಡಾ.ಸುಧಾಮೂರ್ತಿ, ಹಾಲಿ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು, ನಿರ್ಮಲಾ ಸೀತಾರಾಮನ್, ಕಾಂಗ್ರೆಸ್ ಹಿರಿಯ ಮುಖಂಡ ಗುಲಾಂ ನಬಿ ಆಜಾದ್, ಕೇರಳ ರಾಜ್ಯಪಾಲ ಆರಿಫ್ ಮೊಹಮದ್ ಖಾನ್ ಹೆಸರು ಚಲಾವಣೆಗೆ

- ಒಂದೊಮ್ಮೆ ರಾಷ್ಟ್ರಪತಿ ಸ್ಥಾನ ಮಹಿಳೆಗೆ ದೊರೆತರೆ, ಉಪರಾಷ್ಟ್ರಪತಿ ಸ್ಥಾನ ಪುರುಷರಿಗೆ: ಇದು ಅದಲು ಬದಲಾದರೂ ಅಚ್ಚರಿ ಇಲ್ಲ
- ದಕ್ಷಿಣದತ್ತ ಬಿಜೆಪಿ ನಾಯಕರ ಒಲವು


ಡಾ.ಸುಧಾಮೂರ್ತಿ


ವೆಂಕಯ್ಯನಾಯ್ಡು


ನಿರ್ಮಲಾ ಸೀತಾರಾಮನ್


ಗುಲಾಮ್ ನಬಿ ಆಜಾದ್


ಆರಿಫ್ ಮೊಹಮದ್ ಖಾನ್

ನವದೆಹಲಿ, ಮೇ 28– ದೇಶದ ಅತ್ಯುನ್ನತ ಹುದ್ದೆ ಗಳಾದ ರಾಷ್ಟ್ರಪತಿ ಹಾಗೂ ಉಪ ರಾಷ್ಟ್ರಪತಿಗಳ ಅಧಿಕಾರಾ ವಧಿ ಸದ್ಯದಲ್ಲೇ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಆ ಸ್ಥಾನಗಳಿಗೆ ಸೂಕ್ತ ಅಭ್ಯರ್ಥಿಗಳ ಹುಡುಕಾಟಕ್ಕೆ ಮುಂದಾಗಿದೆ. ಕಳೆದ ಬಾರಿ ಚುನಾವಣೆಯಲ್ಲಿ ದಲಿತ ಹಾಗೂ ಹಿಂದುಳಿದ ವರ್ಗಗಳಿಗೆ ಅವಕಾಶ ನೀಡಿದ್ದ ಕೇಂದ್ರ ಸರ್ಕಾರ ಈ ಬಾರಿ ಅಲ್ಪಸಂಖ್ಯಾತ ಹಾಗೂ ಮಹಿಳೆಗೆ ಪ್ರಾತಿನಿಧ್ಯ ನೀಡಲು ಉದ್ದೇಶಿಸಿದೆ. ಅದರಲ್ಲೂ ಒಂದು ಸ್ಥಾನ ಮೇಲ್ವರ್ಗಕ್ಕೆ ಮತ್ತೊಂದು ಸ್ಥಾನ ಅಲ್ಪಸಂಖ್ಯಾತರಿಗೆ ನೀಡುವ ಬಗ್ಗೆ ಗಂಭೀರ ಚಿಂತನೆ ನಡೆಸಿದೆ. ರಾಷ್ಟ್ರಪತಿ ಸ್ಥಾನಕ್ಕೆ ರಾಜ್ಯಪಾಲರು, ಪ್ರಖ್ಯಾತ ಉದ್ಯಮಿ, ಕೇಂದ್ರ ಸಚಿವರು ಹಾಗೂ ರಾಷ್ಟ್ರಮಟ್ಟದ ರಾಜಕಾರಣಿಯೊಬ್ಬರ ಹೆಸರು ಪ್ರಮುಖವಾಗಿ ಕೇಳಿಬರುತ್ತಿದೆ.

ಇನ್ಫೋಸಿಸ್ ಪ್ರತಿಷ್ಠಾನದ ಡಾ.ಸುಧಾಮೂರ್ತಿ ಅವರ ಹೆಸರು ಮುಂಚೂಣಿಯಲ್ಲಿದೆ. ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು, ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತರಾಮನ್, ಕೇರಳದ ರಾಜ್ಯಪಾಲರಾದ ಆರೀಫ್ ಮೊಹಮದ್ ಖಾನ್, ಕಾಂಗ್ರೆಸ್ ರಾಷ್ಟ್ರೀಯ ನಾಯಕ ಗುಲಾಮ್ ನಬಿ ಅಜಾದ್ ಅವರ ಹೆಸರುಗಳು ಚಲಾವಣೆಯಲ್ಲಿವೆ. ಕಳೆದ ಬಾರಿ ರಾಷ್ಟ್ರಪತಿ ಚುನಾವಣೆ ಸಂದರ್ಭದಲ್ಲಿ ಇನ್ಫೋಸಿಸ್ ನಾರಾಯಣ ಮೂರ್ತಿ ಹೆಸರು ಪ್ರಸ್ತಾಪವಾಗಿತ್ತಾದರೂ ಅವಕಾಶ ಸಿಕ್ಕಿರಲಿಲ್ಲ. ಈಗ ಅವರ ಶ್ರೀಮತಿ ಡಾ.ಸುಧಾಮೂರ್ತಿ ▶ 8ನೇ ಪುಟಕ್ಕೆ

ನೀತಿ ಸಂಹಿತೆ ಉಲ್ಲಂಘನೆ

ಸಚಿವ ಡಾ.ಅಶ್ವತ್ಥ್ ನಾರಾಯಣ್, ಮೈ.ವಿ.ರವಿಶಂಕರ್ ವಿರುದ್ಧ ಎಫ್ಐಆರ್






ಮಂಡ್ಯ,ಮೇ 28(ಮೋಹನ್ ರಾಜ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಪ್ರಚಾರದ ವೇಳೆ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದ ಮೇರೆಗೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ್ ಹಾಗೂ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ವಿರುದ್ಧ ಮಂಡ್ಯ ಪೂರ್ವ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ಸಚಿವ ಅಶ್ವತ್ಥ್ ನಾರಾಯಣ್ ಎ1 ಹಾಗೂ ಬಿಜೆಪಿ ಅಭ್ಯರ್ಥಿ ರವಿಶಂಕರ್ ಎ2 ಆರೋಪಿ ಯಾಗಿದ್ದಾರೆ. ಐಪಿಸಿ ಸಕ್ಷನ್ 1860 ಮತ್ತು ಪ್ರಜಾ ಪ್ರತಿನಿಧಿ ಕಾಯ್ದೆ 1950, 1951, 1989ರ ಅಡಿ ಪ್ರಕರಣ ದಾಖಲಾಗಿದೆ. ಮಂಡ್ಯದ ಮಹಿಳಾ ಸರ್ಕಾರಿ ಕಾಲೇಜು, ವೈದ್ಯಕೀಯ ಶಿಕ್ಷಣ ಕಾಲೇಜಲ್ಲಿ ಪ್ರಚಾರ ನಡೆಸಿ, ನಾನಾ ಆಶ್ವಾಸನೆ ನೀಡಿದ್ದಾರೆ ಎಂಬ ಆರೋಪವಿದೆ.

ಸಿದ್ದರಾಮಯ್ಯ ಮತ್ತೆ ಸಿಎಂ ಆಗಲೇಬೇಕು

- ತುಮಕೂರು ಕುರುಬ ಸಮುದಾಯ ಜಾಗೃತಿ ಸಮಾವೇಶದಲ್ಲಿ ಕೇಳಿಬಂದ ಬಲವಾದ ಕೂಗು
- ದಾವಣಗೆರೆಯಲ್ಲಿ 10 ಲಕ್ಷ ಜನ ಸೇರಿಸಿ ಸಿದ್ದರಾಮಯ್ಯರ ಹುಟ್ಟುಹಬ್ಬ ಆಚರಣೆಗೆ ನಿರ್ಧಾರ
- ಸಿದ್ದರಾಮಯ್ಯ ರಾಜ್ಯದ ಎಲ್ಲಾ ಜಾತಿ-ಜನಾಂಗದ ನಾಯಕ; ಅವರಿಂದಲೇ ರಾಜ್ಯದ ಏಳ್ಗೆ ಸಾಧ್ಯ



ತುಮಕೂರು, ಮೇ 28–ರಾಜ್ಯ ವಿಧಾನಸಭಾ ಚುನಾವಣೆ ಮುಂದಿನ ವರ್ಷ ನಡೆಯಲಿದ್ದು, ಎಲ್ಲಾ ರಾಜಕೀಯ ಪಕ್ಷಗಳೂ ಚುನಾವಣೆ ಎದುರಿಸಲು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುತ್ತಿವೆ. ಈ ಮಧ್ಯೆ ಮತ್ತೆ ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಗಾದಿಗೇರಿಸುವ ಪ್ರಯತ್ನಕ್ಕೆ ಇಂದು ತುಮಕೂರಿನಲ್ಲಿ ಅವರ ಬೆಂಬಲಿಗರು ಚಾಲನೆ ನೀಡಿದ್ದಾರೆ.

ತುಮಕೂರಿನಲ್ಲಿ ನಡೆದ ಕುರುಬ ಸಮುದಾಯದ ಜಾಗೃತಿ ಸಮಾವೇಶದಲ್ಲಿ ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ ಎಂಬ ಕಹಳೆ ಮೊಳಗಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಬಹುತೇಕ ಎಲ್ಲಾ ಮುಖಂಡರು ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಆಗಬೇಕು ಎಂದು ಬಲವಾಗಿಯೇ ಪ್ರತಿಪಾದಿಸಿದರು. ಹೆಬ್ಬಾಳು ಶಾಸಕ ಭೈರತಿ ಸುರೇಶ್ ಅವರಂತೂ ಮತ್ತೆ ಮುಖ್ಯಮಂತ್ರಿ ಆಗಲು ಸಿದ್ದರಾಮಯ್ಯ ಮತ್ತು ಅವರ ಜೊತೆಗಿರುವವರ ಕೈ ಬಲಪಡಿಸಬೇಕು ಎಂಬ ಸಂದೇಶ ಸಾರಿದರು. ಸಿದ್ದರಾಮಯ್ಯ ಪರ ಬಲ ಪ್ರದರ್ಶನಕ್ಕಿಳಿದಿರುವ ಅವರ ಬೆಂಬಲಿಗರು ಹಾಗೂ ಕುರುಬ ಸಮುದಾಯದವರು ಆ.3 ರಂದು ದಾವಣಗೆರೆಯಲ್ಲಿ 10 ಲಕ್ಷ ಮಂದಿ ಸೇರಿಸಿ ಸಿದ್ದರಾಮಯ್ಯ ಹುಟ್ಟುಹಬ್ಬವನ್ನು ಭರ್ಜರಿಯಾಗಿ ಆಚರಿಸಲು ಈಗಿನಿಂದಲೇ ರೂಪು–ರೇಷೆ ನಿರ್ಧರಿಸಿದ್ದಾರೆ ಎಂಬುದು ಈ ಸಮಾವೇಶದಲ್ಲಿ ಕಂಡು ಬಂತು. ▶ 8ನೇ ಪುಟಕ್ಕೆ

ಮಿಸ್ಟರ್ ಈಶ್ವರಪ್ಪ, ಕುರುಬರ ಬಗ್ಗೆ ಕಾಳಜಿ ಇದ್ರೆ ಎಸ್‌ಟಿ ಸರ್ಟಿಫಿಕೇಟ್ ಕೊಡಿಸು...

ತುಮಕೂರು: ಮಿಸ್ಟರ್ ಈಶ್ವರಪ್ಪ ಕುರುಬರ ಬಗ್ಗೆ ಕಾಳಜಿ ಇದ್ರೆ ಕೇಂದ್ರ ಸರ್ಕಾರದಿಂದ ಎಸ್‌ಟಿ ಸರ್ಟಿಫಿಕೇಟ್ ಕೊಡಿಸು ಎಂದು ವಿಪಕ್ಷ ನಾಯಕ ಸಿದ್ಧರಾಮಯ್ಯ ಸವಾಲು ಹಾಕಿದರು.

ತುಮಕೂರಲ್ಲಿ ನಡೆದ ಕುರುಬ ಸಮುದಾಯದ ಸಮಾವೇಶದಲ್ಲಿ ಮಾತನಾಡಿದ ಅವರು, ನಿಮಗೆ ಕುರುಬರ ಬಗ್ಗೆ ಕಾಳಜಿ ಇದ್ರೆ ಎಸ್.ಟಿ ಸರ್ಟಿಫಿಕೇಟ್ ಮಾಡಿಸು ನೋಡೋಣಾ. ಈಗ ನಿಮ್ಮದೇ ಸರ್ಕಾರ ಇದೆ. ಸುಮ್ನೆ ಪಾದಯಾತ್ರೆ ಮಾಡ್ತೀರಾ ಈ ಬೂಟಾಟಿಕೆ ಬಿಡಬೇಕು. ಸಭೆಗೆ ಬಂದಿಲ್ಲ ಎಂದು ನನ್ನ ಮೇಲೆ ಗೂಬೆ ಕೂರಿಸ್ತೀಯಾ ನಾನು ಬಿಜೆಪಿ ಈಶ್ವರಪ್ಪ ನಾಯಕತ್ವದಲ್ಲಿ ಹೋಗಬೇಕಿತ್ತಾ..? ಎಂದು ಗುಡುಗಿದರು. ಅಧಿಕಾರಕ್ಕಾಗಿ ಪಕ್ಷದ ಬಾಲ ಹಿಡಿದು ಹೋದವನಲ್ಲ. ಸಾಮಾಜಿಕ ಬದ್ಧತೆಗಾಗಿ ಇರೋನು. ನಾನು ಹಿಂದುಳಿದ ಜಾತಿ ಬಡವರಿಗೆ ನ್ಯಾಯ ಕೊಡಿಸಿದ್ದೇನೆ. ಅದರಲ್ಲಿ ಯಾವತ್ತು ಹಿಂದೆ ಬಿದ್ದಿಲ್ಲ ಮುಂದೆ ಬೀಳಲ್ಲ. ಅಧಿಕಾರ ಇರಲಿ ಬಿಡಲಿ ಎಂದರು.

ಸಿದ್ದರಾಮಯ್ಯ ಆರ್ಯರೇ..., ದ್ರಾವಿಡರೇ: ಸಿಎಂ ಪ್ರಶ್ನೆ

ಪ್ರಧಾನಿ ನರೇಂದ್ರ ಮೋದಿ ಭಾರತದ ಅಖಂಡತೆ ರಕ್ಷಿಸಿದವರು; ನೆಹರುಗೆ ಹೋಲಿಸಲು ಸಾಧ್ಯವೇ ಇಲ್ಲ

ಬೆಂಗಳೂರು, ಮೇ 28(ಕೆಎಂಶಿ)–ವಿರೋಧಪಕ್ಷದ ನಾಯಕರಾದ ಸಿದ್ದರಾಮಯ್ಯ ಅವರು ದ್ರಾವಿಡರೇ ಅಥವಾ ಆರ್ಯರೇ ಎಂಬುದಕ್ಕೆ ಮೊದಲು ಉತ್ತರ ನೀಡಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ನವರು ಹೊರಗಿನಿಂದ ಬಂದವರು, ನೆಹರೂ ಅವರಿಗೆ ಹೋಲಿಕೆ ಮಾಡಬಾರದು ಎಂಬ ವಿರೋಧಪಕ್ಷದ ನಾಯಕರಾದ ಸಿದ್ಧರಾಮಯ್ಯ ಅವರ ಹೇಳಿಕೆಗೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿ, ನೆಹರೂ ಅವರಿಗೆ ಹೋಲಿಕೆ ಮಾಡಲು ಸಾಧ್ಯವಿಲ್ಲ, ಏಕೆಂದರೆ ಚೀನಾ ದೇಶ ಭಾರತ ಗಡಿಯನ್ನು ಆಕ್ರಮಿಸಿದಾಗ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ನೆಹರೂ ಅವರು ಗಡಿಭಾಗವನ್ನು ಬಿಟ್ಟುಕೊಟ್ಟರು.

ಆದರೆ ಪ್ರಧಾನಿ ಮೋದಿಯವರು ಚೀನಾ ದೇಶ ಗಡಿಪ್ರದೇಶ ಆಕ್ರಮಿಸಿಕೊಳ್ಳಲು ಬಂದಾಗ ಗಟ್ಟಿಯಾಗಿ ನಿಂತು ಆ ಪ್ರದೇಶವನ್ನು ಉಳಿಸಿಕೊಂಡವರು. ಪಾಕಿಸ್ತಾನದ ಜೊತೆಗೆ ರಾಜಿ ಮಾಡಿಕೊಳ್ಳಲಿಲ್ಲ. ಭಾರತದ ಅಖಂಡತೆ ಹಾಗೂ ಏಕತೆಗೆ ಸಾಧನೆಯನ್ನು ಮಾಡಿದ್ದಾರೆ. ಮೋದಿಯವರು ಭಾರತವನ್ನು ಶಕ್ತಿಶಾಲಿಯಾಗಿ ಮಾಡಿದ್ದಾರೆ. ಹೀಗಾಗಿ ನೆಹರೂ ಅವರೊಂದಿಗೆ ಹೋಲಿಕೆ ಸಾಧ್ಯವೇ ಇಲ್ಲ ಎಂದು ತಿಳಿಸಿದರು.


ಹುಲಿಯನ್ನು ಹಿಡಿದು ಬೋನಿಗೆ ಹಾಕಿದ್ರೂ ಅದು ಹುಲ್ಲು ತಿನ್ನಲ್ಲ, ಬೇಟೆ ಆಡೋದನ್ನೂ ಮರೆಯಲ್ಲ!



ಹಾಸನ: ಹುಲಿಯನ್ನು ಹಿಡಿದು ಬೋನಿಗೆ ಹಾಕಿದ್ರೆ ಅದು ಹುಲ್ಲು ತಿನ್ನಲ್ಲ, ಬೇಟೆ ಆಡೋದನ್ನೂ ಮರೆಯಲ್ಲ ಎಂದು ಹೇಳುವ ಮೂಲಕ ಯಡಿಯೂರಪ್ಪ ಅವರ ಶಕ್ತಿ ಇನ್ನೂ ಕುಂದಿಲ್ಲ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಪರೋಕ್ಷವಾಗಿ ವಿರೋಧಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಹಾಸನದ ಹೊಳೆನರಸೀಪುರದಲ್ಲಿ ಮಾತನಾಡಿದ ಬಿ.ವೈ. ವಿಜಯೇಂದ್ರ, ಬಿಎಸ್‌ವೈ ದೊಡ್ಡ ನಾಯಕನಾಗಿ ಬೆಳೆದು ಬಿಡ್ತಾನೆ ಅಂತಾ ಕಾರಿಗೆ ಕಲ್ಲು ▶ 8ನೇ ಪುಟಕ್ಕೆ

ಜೂನ್ 5ಕ್ಕೆ ರಾಜ್ಯಕ್ಕೆ ಮುಂಗಾರು ಪ್ರವೇಶ



ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಜೂನ್ 5ಕ್ಕೆ ಆರಂಭವಾಗಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಇನ್ನೆರಡು ದಿನಗಳಲ್ಲಿ ಕೇರಳಕ್ಕೆ ಮಾನ್ಸೂನ್ ಪ್ರವೇಶವಾಗುವ ಸಾಧ್ಯತೆಯಿದ್ದು, ತದನಂತರ ರಾಜ್ಯದಲ್ಲೂ ಮುಂಗಾರು ಆರಂಭವಾಗಲಿದೆ ಎಂದು ತಿಳಿಸಿದೆ. ಮುಂದಿನ 48 ಗಂಟೆಗಳಲ್ಲಿ ದಕ್ಷಿಣ ಅರೇಬಿಯನ್ ಸಮುದ್ರದ ಕೆಲವು ಭಾಗಗಳು, ಇಡೀ ಮಾಲ್ಡೀವ್ಸ್, ಲಕ್ಷದ್ವೀಪದ ಪಕ್ಕದ ಪ್ರದೇಶಗಳು ಹಾಗೂ ಕೊಮೊರಿನ್‌ನ ಕೆಲವೆಡೆ ನೈರುತ್ಯ ಮುಂಗಾರು ಪ್ರವೇಶ ನಿರೀಕ್ಷೆ ಇದೆ. ಈ ವಾರದಲ್ಲಿ ಕೇರಳದಲ್ಲಿ ಮಾನ್ಸೂನ್ ಆರಂಭವಾಗಲು ಪೂರಕವಾದ ವಾತಾವರಣವಿದೆ ಎಂದು ಹೇಳಿದೆ.

ಅಸನಿ ಚಂಡಮಾರುತದ ಪ್ರಭಾವದಿಂದಾಗಿ ಈ ಬಾರಿ ವಾಡಿಕೆಗಿಂತ ಮೊದಲೇ ಅಂದರೆ ಮೇ 16ಕ್ಕೆ ಅಂಡಮಾನ್ ಅನ್ನು ಮುಂಗಾರು ತಲುಪಿತ್ತು. ಆದರೆ, 6 ದಿನಗಳ ಬಳಿಕ ಈಗ ಶ್ರೀಲಂಕಾದಿಂದ ಕೇರಳದ ಕಡೆಗೆ ಚಲಿಸಲು ಪ್ರಾರಂಭಿಸಿದೆ. ಮಾನ್ಸೂನ್ ಜೂ.1ರಂದು ಕೇರಳ ಪ್ರವೇಶಿಸಿದರೆ, ಜೂ.5ರಂದು ಕರಾವಳಿ ಕರ್ನಾಟಕ ಮತ್ತು ದಕ್ಷಿಣ ಒಳನಾಡಿನ ಕೆಲ ಭಾಗಗಳನ್ನು ಮುಟ್ಟಲಿದೆ. ಜೂ.10ರ ವೇಳೆಗೆ ಇಡೀ ರಾಜ್ಯವನ್ನು ಆವರಿಸುತ್ತದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಅಮೃತ ಭಾರತಿಗೆ ಕನ್ನಡದಾರತಿ ಅಭಿಯಾನಕ್ಕೆ ಚಾಲನೆ

- ರಾಜ್ಯಾದ್ಯಂತ 75 ಕಡೆ ಆಯೋಜನೆ; ಮೊದಲ ಹಂತದಲ್ಲಿ 45 ಕಡೆ ಅಭಿಯಾನ
- ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ; ದೇಶಭಕ್ತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮ


ಅಮೃತ ಭಾರತಿಗೆ–ಕನ್ನಡದಾರತಿ ವಿಶೇಷ ಅಭಿಯಾನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು.

ಬೆಂಗಳೂರು: ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಅಮೃತ ಭಾರತಿಗೆ–ಕನ್ನಡದಾರತಿ ವಿಶೇಷ ಅಭಿಯಾನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಅಭಿಯಾನದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ಸಾವರ್ಕರ್ ಮತ್ತು ತಿಲಕರು ಮೊದಲ ಸ್ವಾತಂತ್ರ್ಯ ಹೋರಾಟಗಾರರು. ಅವರಿಗೆ ಸ್ವಾತಂತ್ರ್ಯ ಪಡೆಯಬೇಕೆಂಬ ಮೊದಲ ಆಲೋಚನೆ ಇತ್ತು. ಇವರ ಆಲೋಚನೆಗೆ ಲಾಹೋರ್‌ನಲ್ಲಿ ವೇಗ ಸಿಕ್ಕಿತು ಎಂದರು.

ಲಾಹೋರ್ ಚಳವಳಿ ವೇಳೆ ಬ್ರಿಟಿಷರು ಲಾಠಿ ಪ್ರಹಾರ ನಡೆಸಿದರು. ಲಾಲಾ ಲಜಪತ್ ರಾಯ್ ನೇತೃತ್ವದಲ್ಲಿ ಚಳವಳಿ ನಡೆದಿತ್ತು. ಇದರ ನಂತರ ಸ್ವಾತಂತ್ರ್ಯದ ಕಿಚ್ಚು ಹೆಚ್ಚಿಸಿದರು. ಗಾಂಧಿ ನೇತೃತ್ವದಲ್ಲಿ ಅನೇಕರು ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸುಲಭವಾಗಿ ಸಿಕ್ಕಿಲ್ಲ. ಬಾರ್ಡೋಲಿಯಲ್ಲಿ ಪಟೇಲರು ಸತ್ಯಾಗ್ರಹದ ನೇತೃತ್ವ ವಹಿಸಿದರು. ಆಗ ನಮಗೆ ಉಳಿಗಾಲವಿಲ್ಲ ಎಂದು ಬ್ರಿಟಿಷರಿಗೆ ಮನವರಿಕೆಯಾಯಿತು. ಚಂಪಾರಣ್ಯದಲ್ಲೂ ದುಡಿಯುವ ▶ 8ನೇ ಪುಟಕ್ಕೆ

ಅವಧೂತ ದತ್ತ ಪೀಠದ ಸಂಸ್ಥಾಪಕ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತಿ

ಪಂಚಲೋಹದ 750 ಕೆಜಿ ತೂಕದ ಪಲ್ಲಕ್ಕಿಯಲ್ಲಿ ಶ್ರೀಗಳ ಉತ್ಸವ

ಭಕ್ತರ ಅಭಿಲಾಷೆಯಂತೆ ಸೇವಾ ಕಾರ್ಯ; ವರ್ಧಂತಿಯ 7ನೇ ದಿನ ವೈವಿಧ್ಯ ಕಾರ್ಯಕ್ರಮ

ಮೈಸೂರು,ಮೇ 28(ಪಿಎಂ)– ಭಕ್ತರ ಇಚ್ಛೆಯಂತೆ 750 ಕೆಜಿ ತೂಕದ ಪಂಚಲೋಹದ ಪಲ್ಲಕ್ಕಿಯಲ್ಲಿ ಆಸೀನರಾಗಿದ್ದ ಮೈಸೂರಿನ ಅವಧೂತ ದತ್ತಪೀಠದ ಸಂಸ್ಥಾಪಕರಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಪಲ್ಲಕ್ಕಿ ಉತ್ಸವದ ಗೌರವ ಸ್ವೀಕರಿಸಿ, ತಮ್ಮ ಅಪಾರ ಸಂಖ್ಯೆಯ ಭಕ್ತ ಸಮೂಹಕ್ಕೆ ಆಶೀರ್ವದಿಸಿದರು. ಅಲ್ಲದೆ, ಆಶ್ರಮದ ವತಿಯಿಂದ ವಿಶೇಷಚೇತರಿಗೆ ಅಗತ್ಯ ಉಪಕರಣಗಳು ಹಾಗೂ ಹಿಂದುಳಿದವರಿಗೆ ಸಹಾಯಕ ಸಲಕರಣೆಗಳನ್ನು ಕೊಡುಗೆಯಾಗಿ ನೀಡಿ, ಆಶೀರ್ವದಿಸಿದರು.

ಮೈಸೂರಿನ ಆಶ್ರಮದ ಆವರಣ ಇಂತಹ ವೈಭವ ಮತ್ತು ಸಾರ್ಥ ಕತೆಗೆ ಶನಿವಾರ ಸಾಕ್ಷಿಯಾಯಿತು. ಮೇ 22ರಿಂದ ನಡೆಯುತ್ತಿರುವ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತಿ ಉತ್ಸವದ 7ನೇ ದಿನವಾದ ಇಂದೂ ವೈವಿಧ್ಯಮಯ ಕಾರ್ಯಕ್ರಮಗಳು ಶ್ರೀಗಳ ಸಮ್ಮುಖದಲ್ಲಿ ಜರುಗಿದವು.

ತಮಿಳುನಾಡಿನ ಭಕ್ತರು ಸಮರ್ಪಿಸಿದ ಪಂಚಲೋಹದ ಪಲ್ಲಕ್ಕಿಯಲ್ಲಿ ಸ್ವಾಮೀಜಿಯವರ ಮೆರವಣಿಗೆಯು ಮಂಗಳವಾದ್ಯದ ನಾದ, ಭಕ್ತರ ಜೈಕಾರದೊಂದಿಗೆ ವಿಜೃಂಭಣೆಯಿಂದ ನೆರವೇರಿತು. ಶ್ರೀ ದತ್ತ ದೇವಸ್ಥಾನ ಆವರಣದಲ್ಲಿ ಶ್ರೀಗಳ ಪಲ್ಲಕ್ಕಿ ಉತ್ಸವ ಆರಂಭಗೊಂಡು, ನಾದ ಮಂಟಪದವರೆಗೆ ಜರುಗಿತು. ಶ್ರೀಗಳ ವರ್ಧಂತಿಯಲ್ಲಿ ಇದೇ ಮೊದಲ ಬಾರಿಗೆ ನಡೆದ ಈ ಪಲ್ಲಕ್ಕಿ ಉತ್ಸವದಲ್ಲಿ ಮಕ್ಕಳ ಕೋಲಾಟದ ಸಾಂಸ್ಕೃತಿಕ ಮೆರಗು, ಕೃಷ್ಣನ ವೇಷಧಾರಿ ಮಕ್ಕಳ ಸೊಬಗು ಮೆರವಣಿಗೆಯ ವೈಭವ ಇಮ್ಮಡಿಕೊಳ್ಳುವಂತೆ ಮಾಡಿತು.

ಭಕ್ತರ ಒತ್ತಾಯಕ್ಕೆ ಶ್ರೀಗಳ ಸಮ್ಮತಿ: ಪಂಚಲೋಹದ ಪಲ್ಲಕ್ಕಿಯಲ್ಲಿ ಆಸೀನರಾಗಲು ಶ್ರೀಗಳು ಮೊದಲಿಗೆ ಸಮ್ಮತಿಸಿರಲಿಲ್ಲ. ಆದರೆ ಭಕ್ತರ ಒತ್ತಾಯಕ್ಕೆ ಕಟ್ಟು ಬಿದ್ದು ಶ್ರೀಗಳು ಕೊನೆಗೆ ಪಲ್ಲಕ್ಕಿ ಏರಲೇಬೇಕಾಯಿತು. ತಮಿಳುನಾಡಿನ ಕುಂಬಕೋಣಂನ ಭಕ್ತರೊಬ್ಬರು ಆಶ್ರಮಕ್ಕೆ ಈ ಪಂಚಲೋಹದ ಪಲ್ಲಕ್ಕಿ ನೀಡುವ ಮೂಲಕ ತಮ್ಮ ಹರಿಕೆ ತೀರಿಸಿದ್ದಾರೆ. ಕೋವಿಡ್ ತೀವ್ರವಾಗಿದ್ದ ಸಂದರ್ಭದಲ್ಲಿ ಕುಂಬಕೋಣಂನ ಈ ಭಕ್ತರ ಇಡೀ ಕುಟುಂಬ ಸೋಂಕಿಗೆ ▶ 8ನೇ ಪುಟಕ್ಕೆ

ಸಂಸ್ಕೃತ ವಿಶ್ವ ಭಾಷೆ: ಸುಗುಣೇಂದ್ರ ತೀರ್ಥ ಶ್ರೀಗಳು

ಆಧ್ಯಾತ್ಮದಂತಹ ಶ್ರೇಷ್ಠ ವಿದ್ಯೆ ಉಸಿರಾಗಿಸಿಕೊಂಡ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮೈಸೂರು: ಅತ್ಯಂತ ಸರಳ, ಸುಂದರವೂ ಆದ ಸಂಸ್ಕೃತವು ವಿಶ್ವ ಭಾಷೆಯಾಗಿದ್ದು, ಆಂಗ್ಲ ಭಾಷೆಗೂ ಮೂಲವಾಗಿದೆ ಎಂದು ಉಡುಪಿಯ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹೇಳಿದರು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತಿ ಉತ್ಸವದ ಅಂಗವಾಗಿ ಶನಿವಾರ ನಡೆದ 7ನೇ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗಣಪತಿ ಸಚ್ಚಿದಾನಂದ ಶ್ರೀಗಳಿಗೆ ಶುಭಕೋರಿ ಶತಾಯುಷಿಗಳಾಗುವಂತೆ ಹಾರೈಸಿ, ನಂತರ ಭಕ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಸಕಲ ಭಾಷೆಗಳಿಗೂ ಸಂಸ್ಕೃತವೇ ಮೂಲ. ಇದು ತಾಯಿ ಭಾಷೆ. ಅತ್ಯಂತ ಸರಳವಾಗಿರುವ ಈ ಭಾಷೆಯನ್ನು ಕಲಿಯುವುದು ಸುಲಭ ಎಂದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ವಿಶ್ವ ಸ್ವಾಮೀಜಿಯಾಗಿದ್ದಾರೆ. ಅವರು ಆಧ್ಯಾತ್ಮಿಕ ಜೀವನ ಅಳವಡಿಸಿಕೊಂಡಿದ್ದು, ಅದನ್ನೇ ಉಸಿರಾಗಿಸಿಕೊಂಡು ಸಾರ್ಥಕತೆ ಪಡೆದಿದ್ದಾರೆ. ಆಧ್ಯಾತ್ಮ ಒಂದು ಶ್ರೇಷ್ಠ ವಿದ್ಯೆ. ಹಾಗೆಯೇ ಶ್ರೀಗಳ ಜೀವನವೂ ಶ್ರೇಷ್ಠವಾದುದು. ಅವರು ಗೀತೆಯನ್ನು ಪ್ರಚಾರ ಮಾಡುತ್ತಿದ್ದಾರೆ. ಇದು ಅತ್ಯಂತ ಶ್ರೇಷ್ಠ ಎಂದರು. ಇದೇ ವೇಳೆ ಉಡುಪಿಯಲ್ಲಿ ನಡೆಯಲಿರುವ 4ನೇಯ ಪರ್ಯಾಯ ಹಾಗೂ ಕೋಟಿ ಗೀತಾ ಯಜ್ಞ ಕಾರ್ಯಕ್ರಮಕ್ಕೆ ಗಣಪತಿ ಶ್ರೀಗಳಿಗೆ ಆಹ್ವಾನ ನೀಡಿದರು.



ಶನಿವಾರ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಪಲ್ಲಕ್ಕಿ ಉತ್ಸವ ವೈಭವದಿಂದ ನಡೆಯಿತು.


ಕೋವಿಡ್ ಕಾಲದಲ್ಲಿ ಜನಸೇವೆಗೆ ಶ್ರೀಗಳ ಪ್ರೇರಣೆ

ಮೈಸೂರು: ಕೋವಿಡ್ ತೀವ್ರವಾಗಿದ್ದ ಕಾಲದಲ್ಲಿ ಸೋಂಕಿತರು, ನೊಂದವರಿಗೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಧೈರ್ಯ ಹೇಳಿ ತಾಯಿಯಂತೆ ಸಲುಹಿದರು. ಅಲ್ಲದೆ, ಸಂಕಷ್ಟದಲ್ಲಿದ್ದವರ ಸೇವೆ ಮಾಡುವಂತೆ ಭಕ್ತರಿಗೆ ಪ್ರೇರಣೆ ನೀಡಿದರು ಎಂದು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಹೇಳಿದರು.

ಕೋವಿಡ್ ತೀವ್ರವಾಗಿದ್ದ ಸಂದರ್ಭದಲ್ಲಿ ಜನ ಸಂಕಷ್ಟಕ್ಕೀಡಾದರು. ಆಗ ಆಶ್ರಮವಾಸಿಗಳು, ಟ್ರಸ್ಟಿಗಳು, ಮಾತೃಮಂಡಳಿಯವರು 1 ನಿಮಿಷವೂ ಬಿಡುವಿಲ್ಲದೆ ಕಷ್ಟದಲ್ಲಿರುವವರ ಸೇವೆ ಮಾಡುವಂತೆ ಹಿರಿಯ ಶ್ರೀಗಳಾದ ಅಪ್ಪಾಜಿಯವರು ಪ್ರೇರಣೆ ನೀಡಿದರು. ಹಾಗಾಗಿ ನಾವೆಲ್ಲಾ ಸೈನ್ಯದಂತೆ ಕೆಲಸ ಮಾಡಿದೆವು. ಶ್ರೀಗಳ ಆಶೀರ್ವಾದದಿಂದ ಕೋವಿಡ್ ಕಷ್ಟಕಾಲ ಮುಗಿದಿದೆ. ಈ ಬಾರಿ ಭಕ್ತರು ನೆಮ್ಮದಿ ಹಾಗೂ ಸಡಗರದಿಂದ ಅಪ್ಪಾಜಿಯವರ 80ನೇ ಜನ್ಮದಿನೋತ್ಸವ ಆಚರಿಸುವಂತೆ ಆಗಿದೆ. ಇದು ನಮ್ಮೆಲ್ಲರ ಪುಣ್ಯ. ಅಪ್ಪಾಜಿಯವರು ಸದಾ ಸೇವೆಯಲ್ಲೇ ಆನಂದ ಕಾಣುತ್ತಾರೆ. ಯಾವುದೇ ಅಹಂ ಇಲ್ಲದೆ ಒಳ್ಳೆಯ ಮನಸ್ಸಿನಿಂದ ಸಮಾಜ ಸೇವೆ ಮಾಡಬೇಕು, ಸದಾ ಚಟುವಟಿಕೆಯಿಂದ ಇರಬೇಕೆಂದು ಅಪ್ಪಾಜಿ ಆಶಿಸುತ್ತಾರೆ ಎಂದರು.

ಜೂನ್ 5ರಂದು ಗೀತ್ ಗಾತಾ ಚಲ್: ವೈದ್ಯರ ಸಂಗೀತ ಸಂಜೆ


ಡಾ.ಜಗನ್ನಾಥ್ ಶೆಣೈ ಪ್ರಾಯೋಜಕರು


ಡಾ.ಉಮೇಶ್‌ಕಾಮತ್ ಪೋಷಕರು


ಡಾ.ಪಿ.ಎ.ಕುಶಾಲಪ್ಪ ಸಂಘಟನಾ ಮುಖ್ಯಸ್ಥರು

ಮೈಸೂರು, ಮೇ 28–ಮೈಸೂರಿನ ವೈದ್ಯರ ಜನಪ್ರಿಯ ಕಾರ್ಯಕ್ರಮ ಗೀತ್ ಗಾತಾ ಚಲ್: ವೈದ್ಯರ ಸಂಗೀತ ಸಂಜೆಯ 20ನೇ ವರ್ಷದ ಅಂಗವಾಗಿ ವಾರ್ಷಿಕ ಕಾರ್ಯಕ್ರಮವನ್ನು ಜೂನ್ 5ರಂದು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ (ಕರಾಮುವಿ) ಘಟಿಕೋತ್ಸವ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ನಗರದ ಹೆಸರಾಂತ ಉದ್ಯಮಿ ಡಾ. ಎಂ. ಜಗನ್ನಾಥ್ ಶೆಣೈ ಮತ್ತು ಸಂಘಟನಾ ಚತುರತೆ ಸಿ. ಉಮೇಶ್ ಕಾಮತ್ ಅವರ ನಿರಂತರ ಪ್ರೋತ್ಸಾಹದಿಂದ ಇಷ್ಟೂ ವರ್ಷ ನಿರಂತರ ಕಾರ್ಯಕ್ರಮ ಯಶಸ್ವಿಯಾಗಿ ನಡೆದುಕೊಂಡು ಬಂದಿದ್ದು, ಮೈಸೂರಿನ ಸಂಗೀತಾಸಕ್ತರು ಪ್ರೀತಿಯಿಂದಲೇ ಸ್ವೀಕರಿಸಿದ್ದಾರೆ.

ಡಾ.ಉಮೇಶ್‌ಕಾಮತ್ ಅವರಿಂದ ಕಾರ್ಯಕ್ರಮ ಸಂಘಟನಾ ಮುಖ್ಯಸ್ಥ ಸ್ಥಾನವನ್ನು ವಹಿಸಿಕೊಂಡು 3 ವರ್ಷಗಳಿಂದ ಡಾ.ಪಿ.ಎ.ಕುಶಾಲಪ್ಪ ಯಶಸ್ವಿಯಾಗಿ ನಿರ್ವಹಣೆ ಮಾಡುತ್ತಿದ್ದಾರೆ. ಈ ವರ್ಷದ ಕಾರ್ಯಕ್ರಮ, ಜನಪ್ರಿಯ ಹಿಂದಿ ಮತ್ತು ಕನ್ನಡ ಚಲನಚಿತ್ರಗಳಲ್ಲದೆ, ಕೆಲವು ನೃತ್ಯ ಪ್ರದರ್ಶನಗಳನ್ನು ಒಳಗೊಂಡಿದೆ. ಒಟ್ಟಿನಲ್ಲಿ ಮೈಸೂರಿನ ಜನತೆ ಸಾಂಸ್ಕೃತಿಕ ಹಬ್ಬಕ್ಕೆ ಕಾತರದಿಂದ ಕಾದಿದೆ ಎನ್ನುತ್ತಾರೆ ಸಂಘಟಕರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ. ಕರ್ನಲ್ ಎಂ.ದಯಾನಂದ ಭಾಗವಹಿಸಲಿದ್ದಾರೆ. ಗೌರವ ಅತಿಥಿಗಳಾಗಿ ಸ್ನೇವರನ್ ಲ್ಯಾಬೋರೇಟರಿಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ಯಾಮ್ ಚೆರಿಯನ್ ಭಾಗವಹಿಸುವರು. ಇದೇ ವೇಳೆ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಉಪ ಕುಲಪತಿ ಡಾ.ಎಂ.ಎ.ಶೇಖರ್ ಅವರನ್ನು ಸನ್ಮಾನಿಸಲಾಗುವುದು. ಕಾರ್ಯಕ್ರಮಕ್ಕೆ ಪ್ರವೇಶ ಉಚಿತವಾಗಿದ್ದು, ಸಂಜೆ 4.45ರೊಳಗೆ ಆಸೀನರಾಗಬೇಕೆಂದು ಕೋರಲಾಗಿದೆ. ಕಾರ್ಯಕ್ರಮವು ಸಂಜೆ 5 ಗಂಟೆಗೆ ಸರಿಯಾಗಿ ಆರಂಭವಾಗಲಿದೆ. ಪ್ರೇಕ್ಷಕರು ಕೋವಿಡ್ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವಂತೆ ಸಂಘಟಕರು ಕೋರಿದ್ದಾರೆ.

ಯೋಗ ಸ್ವಯಂ ಶಿಸ್ತಿನ ಅಭ್ಯಾಸಗಳನ್ನು ಹೊಂದಿದೆ

ಮೈಸೂರು,ಮೇ 28(ಜಿಎ)–ಯೋಗದ ಸಂಪೂರ್ಣತೆಯು ಧ್ಯಾನ, ಪಠಣ, ಮಂತ್ರ, ಪ್ರಾರ್ಥನೆ, ಉಸಿರಾಟದ ಕೆಲಸ, ಆಚರಣೆಗಳು ಮತ್ತು ಸಹ ವ್ಯಾಪಕವಾದ ಚಿಂತನಶೀಲ ಮತ್ತು ಸ್ವಯಂ–ಶಿಸ್ತಿನ ಅಭ್ಯಾಸಗಳನ್ನು ಒಳಗೊಂಡಿದೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ತಿಳಿಸಿದರು.


ಪ್ರೊ.ಹೇಮಂತ್ ಕುಮಾರ್

ಮೈಸೂರು ವಿಶ್ವವಿದ್ಯಾನಿಲಯ, ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಸೈನ್ಸಸ್ ಮತ್ತು ಎಸ್‌ಕೆಆರ್‌ಎಸ್‌ಪಿಎಂ ಶ್ರೀ ವೇದವ್ಯಾಸ ಯೋಗ ಫೌಂಡೇಶನ್ ಸಹಯೋಗದೊಂದಿಗೆ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಮೈಸೂರು ತ್ರಿಯೋಗ' ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

"ಯೋಗ" ಎಂಬ ಪದವು "ಯುಜ್" ಎಂಬ ಪದದಿಂದ ಬಂದಿದೆ, "ನೊಗಕ್ಕೆ" ಅಥವಾ "ಬಂಧಿಸಲು" ಎಂಬ ಅರ್ಥವನ್ನು ನೀಡುತ್ತದೆ ಹಾಗೂ ಈ ಪದವು ಹಲವಾರು ಅರ್ಥಗಳನ್ನು ಹೊಂದಿದೆ. ಯೋಗದ ಪ್ರಯೋಜನಗಳ ಕುರಿತಾದ ವೈಜ್ಞಾನಿಕ ಸಂಶೋಧನೆಯು ನಡೆಯುತ್ತಿವೆ. ಯೋಗವು ಒಟ್ಟಾರೆ ಯೋಗಕ್ಷೇಮಕ್ಕೆ ನಂಬಲಾಗದಷ್ಟು ಪ್ರಯೋಜನಕಾರಿಯಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ತ್ರಿಯೋಗ ಅಂತಾರಾಷ್ಟ್ರೀಯ ಕೇಂದ್ರ ಸಂಸ್ಥಾಪಕಿ ಪೂಜ್ಯ ಯೋಗಿನಿ ಕಾಳಿಜೀ, ಮನೋವೈದ್ಯ ಡಾ.ಮಿಗುಯೆಲ್ ರಿವೇರಾ, ಬೆಂಗಳೂರಿನ ಯೋಗಿಧಾಮದ ಡಾ.ಎಂ.ವಿ. ಶ್ರೀಧರ, ಬೆಂಗಳೂರಿನ ಜಲಯೋಗಿ ಡಾ.ಚಂದ್ರ ಆಚಾರ್ಯ, ಶ್ರೀ ವೇದವ್ಯಾಸ ಯೋಗ ಫೌಂಡೇಶನ್ ಕಾರ್ಯದರ್ಶಿ ರಾಘವೇಂದ್ರ ಪೈ ಸೇರಿದಂತೆ ಮತ್ತಿತರರಿದ್ದರು.

ಸಾಂಸ್ಕೃತಿಕ ಪ್ರಚಾರಾಂದೋಲನ ಕಾರ್ಯಕ್ರಮ

ಮೈಸೂರು,ಮೇ 28(ಜಿಎ)– ರಂಗಭೂಮಿಯ ಮೂಲಕ ವಿಚಾರಗಳನ್ನು ಪ್ರತಿಯೊಬ್ಬರಿಗೂ ತಲುಪಿಸಬೇಕು ಎಂಬುದು ನಮ್ಮ ಉದ್ದೇಶವಾಗಿದೆ ಎಂದು ಹಿರಿಯ ರಂಗಕರ್ಮಿ ಪ್ರಸನ್ನ ಹೇಳಿದರು.



ನಗರದ ದೇವರಾಜ ಮಾರುಕಟ್ಟೆಯಲ್ಲಿ ನವೋದಯ ರಂಗ ತಂಡವು ಏರ್ಪಡಿಸಿದ್ದ ಸಾಂಸ್ಕೃತಿಕ ಪ್ರಚಾರಾಂದೋಲನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಮ ರಾಜಕಾರಣ, ರಾಮ ವಿರೋಧ ರಾಜ ಕಾರಣ ಇವೆರಡೂ ರಾಜಕಾರಣವಷ್ಟೇ. ರಾಮನನ್ನು ಅಥವಾ ರಾಮಾಯಾಣವನ್ನು ಅರ್ಥಮಾಡಿಕೊಳ್ಳಲು ರಾಜಕಾರಣದಿಂದ ಸಾಧ್ಯವಿಲ್ಲ. ರಾಮನನ್ನು, ರಾಮಾಯಾಣವನ್ನು ಸಾಂಸ್ಕೃತಿಕ ಚಳವಳಿಯ ಮೂಲಕ ತಿಳಿಸುವ ಉದ್ದೇಶದಿಂದ 'ಅಯೋಧ್ಯಾ ಕಾಂಡ' ನಾಟಕವನ್ನು ರೂಪಿಸಲಾಗಿದೆ. ಜೂನ್ 5ರಿಂದ ಪ್ರತಿ ಭಾನುವಾರ ಗಾನ ಭಾರತೀ ಸಭಾಂಗಣದಲ್ಲಿ ನಾಟಕ ಪ್ರದರ್ಶನವಾಗಲಿದೆ ಎಂದರು. ದೇವರಾಜ ಮಾರುಕಟ್ಟೆಯಿಂದ ಆರಂಭವಾದ ಪ್ರಚಾರಾಂದೋಲನ ನಗರದ ವಿವಿಧ ಸ್ಥಳಗಳಲ್ಲಿ ಸಾರ್ವಜನಿಕರನ್ನು ಭೇಟಿ ಮಾಡಿ ರಂಗಭೂಮಿಗೆ ಮರಳಿ ಬನ್ನಿ ಎಂದು ಆಹ್ವಾನಿಸಲಾಯಿತು. ಪ್ರಚಾರಾಂದೋಲನದಲ್ಲಿ ನವೋದಯ ತಂಡ, ದಿಲ್ಲಿ, ಮುಂಬೈ, ಮಹಾರಾಷ್ಟ್ರದ ಕಲಾವಿದರು ಭಾಗವಹಿಸಿದ್ದರು.

ಗ್ರಾಮೀಣ ಪ್ರತಿಭಾನ್ವಿತೆಗೆ ಸನ್ಮಾನ



ಮೈಸೂರು, ಮೇ 28– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 617 ಅಂಕಗಳನ್ನು ಪಡೆದ ಮೈಸೂರು ತಾಲೂಕು ವಲಯದ ಸರ್ಕಾರಿ ಪ್ರೌಢಶಾಲೆ ಗುಂಗ್ರಾಲ್ ಛತ್ರ ವಿದ್ಯಾರ್ಥಿನಿ ಕುಮಾರಿ ಮಹಾದೇವಮ್ಮರನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸು ಸನ್ಮಾನಿಸಿದರು.

ವಿದ್ಯಾರ್ಥಿ ತಂದೆ ಕೂಲಿಕಾರ್ಮಿಕರಾಗಿದ್ದು, ಮಗಳ ಸಾಧನೆಗೆ ಪ್ರೋತ್ಸಾಹ ನೀಡಿರುವುದು ಶ್ಲಾಘನೀಯ ಎಂದು ಡಿಡಿಪಿಐ ಶ್ಲಾಘಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಮಲ್ಲೇಶ್ವರಿ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಮಹಾದೇವ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಡಾ. ಗಣೇಶಕುಮಾರ್, ಮೈಸೂರು ಜಿಲ್ಲಾ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಮಂಜುನಾಥನ್, ಉಪಾಧ್ಯಕ್ಷೆ ಇಂದ್ರಾಣಿ, ಪ್ರೌಢಶಾಲೆ ಸಹ ಶಿಕ್ಷಕರ ಸಂಘದ ಅಧ್ಯಕ್ಷ ರಮೇಶ್, ಗುಂಗ್ರಾಲ್ ಛತ್ರ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಉಮಾ ಶಂಕರ್‌ಇತರರು ಉಪಸ್ಥಿತರಿದ್ದರು.

ನಿಧನ



ಕಮಲಾಕ್ಷಿ

ಮೈಸೂರು, ಮೇ 28– ಸಿಎಫ್‌ಟಿಆರ್‌ಐ ಮಾಜಿ ಉದ್ಯೋಗಿ ಮತ್ತು ಗೋಕುಲಂ ಬಡಾವಣೆಯ ನಿವಾಸಿಯೂ ಆದ ಕಮಲಾಕ್ಷಿ(86) ಅವರು ಇಂದು ಸಂಜೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ದಿವಂಗತರು ಸಹೋದರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ (ಮೇ 29) ಸಂಜೆ 4 ಗಂಟೆಗೆ ಮಹದೇವಪುರದಲ್ಲಿರುವ ಸಿಎಸ್‌ಐ ಸಿಮೆಟ್ರಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುನಿರಾಜು



ಮೈಸೂರಿನ ರಾಘವೇಂದ್ರ ನಿವಾಸಿ, ಶಾಲಿನಿ ಕಾನ್ವೆಂಟ್ ಸಂಸ್ಥಾಪಕ ಎಂ.ಮುನಿರಾಜು(92) ಅವರು ಶನಿವಾರ ನಿಧನರಾದರು.

ಮೃತರು ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಭಾನುವಾರ ಬೆಳಗ್ಗೆ 10.30ಕ್ಕೆ ಮೃತರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಕೆಎಸ್‌ಟಿಡಿಸಿ ತಿರುಪತಿ ಟೂರ್ ಪ್ಯಾಕೇಜ್‌ಗೆ ಭಾರೀ ಬೇಡಿಕೆ

ಎಸಿ ಬಸ್ಸಲ್ಲಿ ವಾರಕ್ಕೆ ಮೂರು ದಿನ ಟ್ರಿಪ್; ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ಶೇ.20 ರಿಯಾಯಿತಿ





ಮೈಸೂರು, ಮೇ 28(ಆರ್‌ಕೆ)– ಕೆಎಸ್‌ಟಿಡಿಸಿ ಆಯೋಜಿಸಿರುವ ತಿರುಪತಿ ಟೂರ್ ಪ್ಯಾಕೇಜ್‌ಗೆ ಮೈಸೂರಲ್ಲಿ ಭಾರೀ ಬೇಡಿಕೆ ಇದೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಯೂರ ಹೊಯ್ಸಳ ಹೋಟೆಲ್ ಆವರಣದಿಂದ ವಾರದಲ್ಲಿ 3 ದಿನ (ಮಂಗಳವಾರ, ಬುಧವಾರ, ಗುರುವಾರ) ಹೊರಡುವ ಹವಾನಿಯಂತ್ರಿತ ಬಸ್‌ನಲ್ಲಿ ತಿರುಪತಿ ಪ್ರವಾಸ ಮಾಡಿ ತಿರುಮಲದ ಶ್ರೀ ವೆಂಕಟೇಶ್ವರ ಸ್ವಾಮಿ ದೇವರ ದರ್ಶನ ಮಾಡಿ ಕರೆತರುವ ಟೂರ್ ಪ್ಯಾಕೇಜ್ ಯಶಸ್ವಿಯಾಗಿ ನಡೆಯುತ್ತಿದೆ.

ಮಧ್ಯಾಹ್ನ 3 ಗಂಟೆಗೆ ಮೈಸೂರಿನಿಂದ ಹೊರಡುವ ಬಸ್ಸು, ಮರುದಿನ ಮುಂಜಾನೆ ತಿರುಪತಿ ತಲುಪಲಿದ್ದು, ಅಲ್ಲಿ ಇಬ್ಬರಿಗೆ 1 ಕೊಠಡಿಯನ್ನು ಸ್ನಾನ ಮಾಡಲು ನೀಡಲಾಗುತ್ತದೆ. 4ರಿಂದ 5ರವರೆಗೆ ಪದ್ಮಾವತಿ ದರ್ಶನ, ನಂತರ ತಿರುಮಲಕ್ಕೆ ತೆರಳಿ ಬೆಳಗ್ಗೆ 8ಕ್ಕೆ ಶ್ರೀ ವೆಂಕಟೇಶ್ವರನ ದರ್ಶನ ಸಾಲಿನಲ್ಲಿ ನಿಲ್ಲಿಸಿ 11 ಗಂಟೆಯೊಳಗೆ ದರ್ಶನ ಮುಗಿಸಿ ಹೊರಬಂದವರನ್ನು ಒಗ್ಗೂಡಿಸಿ ಪ್ರಸಾದ ಭೋಜನ ಮುಗಿದ ಬಳಿಕ ಮಧ್ಯಾಹ್ನ 12.30 ಗಂಟೆಗೆ ತಿರುಪತಿಯಿಂದ ಹೊರಡುವ ಬಸ್ಸು ಅದೇ ದಿನ ರಾತ್ರಿ 11.30 ಗಂಟೆಗೆ ಮೈಸೂರು ತಲುಪಲಿದೆ. ಈ ಟೂರ್ ಪ್ಯಾಕೇಜ್‌ಗೆ ಊಟ–ತಿಂಡಿ ಹೊರತುಪಡಿಸಿ ಒಬ್ಬರಿಗೆ 2,585 ರೂ. ನಿಗದಿಪಡಿಸಲಾಗಿದೆ. ಅದರಲ್ಲಿ ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ಶೇ.20ರಷ್ಟು (312 ರೂ.) ರಿಯಾಯಿತಿ ಸೌಲಭ್ಯವಿದೆ ಎಂದು ಕೆಎಸ್ ಟಿಡಿಸಿ ಅಧಿಕಾರಿಗಳು ತಿಳಿಸಿದ್ದಾರೆ. 35 ಆಸನಗಳ ಎಸಿ ಬಸ್‌ನಲ್ಲಿ ತಿರುಪತಿ ಟೂರ್ ಪ್ಯಾಕೇಜ್‌ಗೆ ಆನ್‌ಲೈನ್ ಮೂಲಕವೂ ಬುಕ್ ಮಾಡಬಹುದಾಗಿದ್ದು, ಮಾಹಿತಿಗೆ ಕೆಎಸ್‌ಟಿಡಿಸಿ ಕಚೇರಿ 0821–2423652 ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ.

ತಂಬಾಕುಮುಕ್ತಗೊಳಿಸಿ ಪರ್ಯಾಯ ಬೆಳೆ ಯೋಜನೆ

ಮೈಸೂರು, ಮೇ 28(ಆರ್‌ಕೆ)– ಕ್ಯಾನ್ಸರ್ ಹಾಗೂ ಕ್ಷಯ ರೋಗ ತಂದೊಡ್ಡುವ ತಂಬಾಕಿಗೆ ಬದಲಾಗಿ ಹುಣಸೂರು ಬಳಿ ಪರ್ಯಾಯ ಕೃಷಿ ಯೋಜನೆ ರೂಪಿಸಲಾಗಿದೆ ಎಂದು ಭಾರತ್ ಕ್ಯಾನ್ಸರ್ ಆಸ್ಪತ್ರೆ ಮುಖ್ಯಸ್ಥ ಡಾ. ಅಜಯ್ ಕುಮಾರ್ ತಿಳಿಸಿದ್ದಾರೆ.



ಮೈಸೂರಿನ ಹೆಬ್ಬಾಳ್‌ನಲ್ಲಿರುವ ಹೆಚ್‌ಸಿಜಿ ಭಾರತ್ ಆಸ್ಪತ್ರೆ ಮತ್ತು ಆಂಕಾಲಜಿ ಸಂಸ್ಥೆಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 50ಕ್ಕೂ ಹೆಚ್ಚು ರೈತರು ಆಸ್ಪತ್ರೆಯಿಂದ ಉಚಿತವಾಗಿ ನೀಡಿರುವ ಶ್ರೀಗಂಧ, ವಿವಿಧ ಹಣ್ಣುಗಳು ಹಾಗೂ ಸೀಜನಲ್ ಗಿಡಗಳನ್ನು ತಮ್ಮ ಜಮೀನುಗಳಲ್ಲಿ ತಂಬಾಕಿಗೆ ಪರ್ಯಾಯವಾಗಿ ಬೆಳೆಯುತ್ತಿದ್ದಾರೆ ಎಂದರು.


ಪರ್ಯಾಯ ಕೃಷಿ ಯೋಜನೆಗೆ ಕೃಷಿ ವಿಜ್ಞಾನಿಗಳು, ತಜ್ಞರು ರೈತರಿಗೆ ಸಲಹೆ, ಮಾರ್ಗದರ್ಶನ ನೀಡುತ್ತಿದ್ದು, ಲಾಭದಾಯಕ ಬೆಳೆಗೆ ಸಹಾಯ ಮಾಡುತ್ತಿದ್ದಾರೆ. ಒಂದು ಕೆಜಿ ಶ್ರೀಗಂಧದ ಬೆಲೆ 28ರಿಂದ 30 ಸಾವಿರ ರೂ.ಗಳಾಗಿದ್ದು, ರೈತರಿಗೆ ಅತೀ ಹೆಚ್ಚು ಆದಾಯ ತಂದುಕೊಡುತ್ತದೆ. ಭಾರತದಲ್ಲಿ ಪ್ರತೀ ವರ್ಷ 1.3 ಮಿಲಿಯನ್ ಜನರು ತಂಬಾಕು ಸೇವನೆಯಿಂದ ಬರುವ ಕ್ಯಾನ್ಸರ್‌ನಿಂದ ಸಾವನ್ನಪ್ಪುತ್ತಿದ್ದಾರೆ. ತಂಬಾಕು ಬೆಳೆಯನ್ನೇ ಸ್ಥಗಿತಗೊಳಿಸಿ ಆರೋಗ್ಯಕ್ಕೆ ಪೂರಕವಾಗುವ ಬೆಳೆಗೆ ಪ್ರೋತ್ಸಾಹ ನೀಡುವುದು ಈ ಕೃಷಿ ಯೋಜನೆಯ ಉದ್ದೇಶವಾಗಿದೆ ಎಂದರು.

ತಂಬಾಕಿಗೆ ತಿಲಾಂಜಲಿ ಇಟ್ಟು, ಸೀಜನಲ್ ಹಣ್ಣು ಹಾಗೂ ಇತರ ಬೆಳೆ ಬೆಳೆದು ಲಾಭ ಗಳಿಸುತ್ತಿರುವ ಹುಣಸೂರು ಭಾಗದ ತಿಪ್ಲೂರಿನ ಕೆಂಚೇಗೌಡ, ರವೀಂದ್ರಗೌಡ ಗೋಷ್ಠಿಯಲ್ಲಿ ಪರ್ಯಾಯ ಬೆಳೆ ಬಗ್ಗೆ ತಿಳಿಸಿದರು. ಭಾರತ್ ಕ್ಯಾನ್ಸರ್ ಆಸ್ಪತ್ರೆ ಡಾ.ವಿಶ್ವೇಶ್ವರ ಈ ಸಂದರ್ಭ ಉಪಸ್ಥಿತರಿದ್ದರು.

ಇಂದು ರಾಮಾನುಜಾಚಾರ್ಯರ ತಿರುನಕ್ಷತ್ರ ವಾರ್ಷಿಕ ಸಭೆ

ಮೈಸೂರು,ಮೇ 28–ಮೈಸೂರು ಜಿಲ್ಲಾ ಶಾತ್ತಾದ ಶ್ರೀ ವೈಷ್ಣವ ಸಂಘದ ವತಿಯಿಂದ ಭಗವದ್ ರಾಮಾನುಜಾಚಾರ್ಯರ ತಿರುನಕ್ಷತ್ರ 11, 12 ಮತ್ತು 13ನೇ ವಾರ್ಷಿಕ ಮಹಾಸಭೆ, ವಧು ವರರ ಪರಿಚಯ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ರೋಟರಿ ಪಶ್ಚಿಮ ವಿದ್ಯಾಸಂಸ್ಥೆ ಸಭಾಂಗಣ (ಕಾಮಾಕ್ಷಿ ಆಸ್ಪತ್ರೆ ಹತ್ತಿರ) ಮೇ 29ರ ಬೆಳಗ್ಗೆ 9 ಗಂಟೆಯಿಂದ ನಡೆಸಲಾಗುವುದು. ಕುಲಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಭಗವದ್ ರಾಮಾನುಜಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಅಧ್ಯಕ್ಷ ನರಸಿಂಹಯ್ಯನವರು ಕೋರಿರುತ್ತಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: ಮೊಬೈಲ್ ಸಂಖ್ಯೆ: 9448945550 ಮತ್ತು 9986687207.

ಇಂದು ಬಸವ ಜಯಂತಿ ಆಚರಣೆ



ಮೈಸೂರು, ಮೇ 27– ಮೈಸೂರಿನ ಬಸವೇಶ್ವರ ಬಳಗ (ಜಯಲಕ್ಷ್ಮೀಪುರಂ, ವಿ.ವಿ.ಮೊಹಲ್ಲಾ, ಗೋಕುಲಂ, ಬೃಂದಾವನ, ಯಾದವಗಿರಿ, ಮೇಟಗಳ್ಳಿ) ವತಿಯಿಂದ ಬಸವ ಜಯಂತಿ ಕಾರ್ಯಕ್ರಮವನ್ನು ಮೇ 29ರ ಭಾನುವಾರದಂದು ಬೆಳಗ್ಗೆ 11 ಗಂಟೆಗೆ ಜಯಲಕ್ಷ್ಮೀಪುರಂನಲ್ಲಿರುವ ಭಗವಾನ್ ಶ್ರೀ ಸತ್ಯ ಸಾಯಿಬಾಬಾ ಮಹಿಳಾ ಮತು ಮಕ್ಕಳ ಕೂಟ ಟ್ರಸ್ಟ್‌ನಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಉಪನಿರ್ದೇಶಕರು ಮತ್ತು ಮೈಸೂರು ನಗರ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಮ.ಗು.ಸದಾನಂದಯ್ಯ ಅವರು ಉಪನ್ಯಾಸ ನೀಡಲಿದ್ದಾರೆ.

ಅಂತರರಾಷ್ಟ್ರೀಯ ಲೈಂಗಿಕ ಮತ್ತು ಗರ್ಭಧಾರಣಾ ತಜ್ಞವೈದ್ಯ, ಹಾಗೂ ಮೆಡಿವೇವ್ ಗರ್ಭಧಾರಣಾ ಮತ್ತು ಸಂಶೋಧನಾ ಆಸ್ಪತ್ರೆಯ ನಿರ್ದೇಶಕರೂ ಮತ್ತು ಬಳಗದ ಅಧ್ಯಕ್ಷರೂ ಆದ ಡಾ.ಸಿ.ಶರತ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ನಿವೃತ್ತ ಪ್ರಾಂಶುಪಾಲರು ಹಾಗೂ ಬಳಗದ ಗೌರವ ಅಧ್ಯಕ್ಷ ಕೆ.ಬಿ.ಪ್ರಭುಪ್ರಸಾದ್ ಅವರನ್ನು ಸನ್ಮಾನಿಸಲಾಗುವುದು. ಮೈಸೂರಿನ ರಾಜರಾಜೇಶ್ವರಿನಗರದ ರಾಜರಾಜೇಶ್ವರಿ ಅಕ್ಕನ ಬಳಗ ವತಿಯಿಂದ ವಚನ ಗಾಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಬಳಗದ ಉಪಾಧ್ಯಕ್ಷರಾದ ಲೋಕೇಶ ಸಿ.ಕೆ., ಭಾಗ್ಯ ಪ್ರಭಾಕರ್, ಪ್ರಧಾನ ಕಾರ್ಯದರ್ಶಿಗಳಾದ ಪ್ರೇಮಾಸ್ವಾಮಿ, ಪಿ.ಎನ್.ಬಸವರಾಜು, ಕೋಶಾಧ್ಯಕ್ಷರಾದ ಸೋಮಶೇಖರಸ್ವಾಮಿ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಬಿ.ಡಿ.ಪಂಚಾಕ್ಷರಿ ಶೆಟ್ಟಿ, ಸಿ.ಎಲ್. ಶ್ರೀಕಂಠಯ್ಯ, ಜಯಪಾಲ್, ಚೆನ್ನಮಲ್ಲಶೆಟ್ಟರು, ಯಡೂರಯ್ಯ, ವೈ.ಬಿ. ಪ್ರಭುಸ್ವಾಮಿ, ಶ್ರೀಮತಿ ಮಂಜುಳಾ, ಶ್ರೀಮತಿ ಇಂದಿರಮ್ಮ ಅವರುಗಳು ಉಪಸ್ಥಿತರಿರುವರು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9900852166 (ಪಿ.ಎನ್.ಬಸವರಾಜು).

ರೋಹಿತ್ ಚಕ್ರತೀರ್ಥ, ಲಕ್ಷ್ಮಣ ಆಕಾಶೆ ಕಾರ್ಕಳ ವಿರುದ್ಧ ಪೊಲೀಸ್ ಆಯುಕ್ತರಿಗೆ ದೂರು

ಮೈಸೂರು,ಮೇ 28(ಎಂಟಿವೈ)– ಸಾಮಾಜಿಕ ಜಾಲತಾಣದಲ್ಲಿ ರಾಷ್ಟ್ರಕವಿ ಕುವೆಂಪು ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ಅಪ್‌ಲೋಡ್ ಮಾಡಿರುವ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಹಾಗೂ ಲಕ್ಷ್ಮಣ ಆಕಾಶೆ ಕಾರ್ಕಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡುವುದಾಗಿ ದಲಿತ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರಕವಿ ಕುವೆಂಪು ಕುರಿತು ಗೌರವ ಹೊಂದಿಲ್ಲದ ವ್ಯಕ್ತಿಯನ್ನು ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದು ದುರಂತ. ಆ ವ್ಯಕ್ತಿಯ ಅಧ್ಯಕ್ಷತೆಯಲ್ಲಿ ಪರಿಷ್ಕರಣೆಯಾಗಿರುವ ಪಠ್ಯವನ್ನು ಯಾವುದೇ ಕಾರಣಕ್ಕೂ ಮಕ್ಕಳಿಗೆ ನೀಡಬಾರದು. ಕೂಡಲೇ ಹೊಸ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ರಚಿಸಿ ಪಠ್ಯವನ್ನು ಪರಿಷ್ಕರಿಸಬೇಕು. ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಮತ್ತೆ ಪಠ್ಯ ಪರಿಷ್ಕರಣೆ ಮಾಡುವಂತೆ ಆಗ್ರಹಿಸಿದರು.

ಸಾಹಿತಿ ಪ್ರೊ.ಕೆ.ಎಸ್. ಭಗವಾನ್ ಮಾತನಾಡಿ, ಪಠ್ಯ ಪುಸ್ತಕ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನ, ವೈಚಾರಿಕ ಚಿಂತನೆಗಳನ್ನು ಬೆಳೆಸ ಬೇಕು. ಆದರೆ, ರಾಜ್ಯ ಸರ್ಕಾರ ಇದೀಗ ಮಕ್ಕಳಲ್ಲಿ ಪಠ್ಯ ಪುಸ್ತಕದ ಮೂಲಕ ಹಿಂದುತ್ವವನ್ನು ಬಿತ್ತುವ ಕಾರ್ಯ ಮಾಡುತ್ತಿದ್ದಾರೆ ಎಂದು ದೂರಿದ್ದಾರೆ.

ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡಲು ಸಾವರ್ಕರ್ ಹೋರಾಟ ಅನನ್ಯ

ವೀರ ಸಾವರ್ಕರ್ ಜನ್ಮ ಜಯಂತಿಯಲ್ಲಿ ಪ್ರಮೋದ್ ಮುತಾಲಿಕ್ ಸ್ಮರಣೆ



ಮೈಸೂರು,ಮೇ 28(ಎಂಟಿವೈ)–ಇಂದಿನ ಹೋರಾಟಗಾರರು ಒಂದು ವಾರ ಜೈಲಿನಲ್ಲಿದ್ದರೇ ಕುಟುಂಬದ ಸದಸ್ಯರನ್ನೆಲ್ಲಾ ನೆನೆದು ಕಂಬನಿ ಮಿಡಿಯುತ್ತಾರೆ. ಆದರೆ ಸ್ವಾತಂತ್ರ್ಯಕ್ಕಾಗಿ ಸಾವರ್ಕರ್ 23 ವರ್ಷಗಳ ಜೈಲಿನಲ್ಲಿದ್ದರು ಎಂದು ಶ್ರೀರಾಮ ಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ತಿಳಿಸಿದ್ದಾರೆ.

ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ತ್ರಿಪುರ ಭೈರವಿ ಮಠದ ಆಂಜನೇಯಸ್ವಾಮಿ ದೇಗುಲದ ಆವರಣದಲ್ಲಿ ಶನಿವಾರ ನಡೆದ ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ 139ನೇ ಜನ್ಮ ಜಯಂತಿ ಹಾಗೂ ವೀರ ಸಾವರ್ಕರ್ ಯುವ ಬಳಗದ 18ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಾವರ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಬಳಿಕ ಮಾತನಾಡುತ್ತಿದ್ದರು.

ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡಲು ಸಾವರ್ಕರ್ ಮಾಡಿದ ಹೋರಾಟ ಅನನ್ಯ. ನಮ್ಮಲ್ಲಿ ಇಂದಿನ ಹೋರಾಟಗಾರರಲ್ಲಿ ಯಾರಾದರೂ ಒಂದು ವಾರ ಜೈಲಿಗೆ ಹೋದರೆ ಅಪ್ಪ, ಅಮ್ಮ, ಅಣ್ಣ, ತಮ್ಮ, ಹೆಂಡತಿ, ಮಕ್ಕಳನ್ನು ನೆನೆಯುತ್ತಾರೆ. ಆದರೆ ಸಾವರ್ಕರ್ 23 ವರ್ಷ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸಿದರು. ಅವರ ಸ್ಥಿತಿ ಹೇಗಿರಬೇಕು ಎಂದು ಊಹಿಸಿಕೊಳ್ಳಲು ಅಸಾಧ್ಯ. ಕೇವಲ ಕಾರಾಗೃಹದಲ್ಲಿರದೇ ಕಠಿಣ ಶಿಕ್ಷೆಯನ್ನು ಅನುಭವಿಸುತ್ತಿದ್ದರು. ಇದನ್ನು ಅವಲೋಕಿಸಿದರೆ ಸಾವರ್ಕರ್ ಕೊಡುಗೆ ಏನೆಂಬುದು ತಿಳಿಯುತ್ತದೆ ಎಂದರು.

ಇತ್ತೀಚಿನ ದಿನಗಳಲ್ಲಿ ವಿರೋಧ ಪಕ್ಷಗಳು ಸಾವರ್ಕರ್ ಬಗ್ಗೆ ಸುಳ್ಳು ಹೇಳಲಾರಂಭಿಸಿವೆ. ಯಾರೂ ಜೈಲಿಗೆ ಹೋಗದೇ, ಹೋರಾಟ ಮಾಡದೆ ಇಂದಿನ ಸಂಘಟನೆಗಳು, ಪಕ್ಷಗಳು ದೇಶ ಭಕ್ತರು ಎಂದು ಬಿಂಬಿಸಿಕೊಳ್ಳಲು ಮುಂದಾಗಿದ್ದಾರೆ. ನಾನು ಕಾಂಗ್ರೆಸ್ ನಾಯಕರಿಗೆ ಪ್ರಶ್ನೆಯೊಂದನ್ನು ಕೇಳಬೇಕು. 1947ರ ಮೊದಲು ಇದ್ದ ಕಾಂಗ್ರೆಸ್‌ಗೂ ಈಗ ಇರುವ ಕಾಂಗ್ರೆಸ್‌ಗೂ ಅಜಗಜಾಂತರ ವ್ಯತ್ಯಾಸವಿದೆ. ಈಗ ಇರುವ ಕಾಂಗ್ರೆಸ್‌ನಲ್ಲಿ ದೇಶ ಭಕ್ತರು ಯಾರು ಇಲ್ಲ ಎಂದು ಕಿಡಿಕಾರಿದರು.

ಹಿಜಾಬ್, ಆಜ್ಞಾನ್ ವಿಚಾರದಲ್ಲಿ ಹಠ ಧೋರಣೆ ಬಿಟ್ಟು ನ್ಯಾಯಾಲಯದ ಆದೇಶ ಪಾಲಿಸಬೇಕು. ಮೋದಿ ಆಜಾನ್ ವಿಚಾರದಲ್ಲಿ ಎರಡನೇ ಹಂತದ ಹೋರಾಟವನ್ನು ಮತ್ತಷ್ಟು ತೀವ್ರವಾಗಿ ಸದ್ಯದಲ್ಲೇ ಆರಂಭಿಸಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ತ್ರಿಪುರ ಭೈರವಿ ಮಠದ ಶ್ರೀ ಕೃಷ್ಣಮೋಹನಾನಂದಗಿರಿ ಗೋಸ್ವಾಮೀಜಿ ವಹಿಸಿದ್ದರು. ಈ ಸಂದರ್ಭದಲ್ಲಿ ವೀರ ಸಾವರ್ಕರ್ ಯುವ ಬಳಗದ ಅಧ್ಯಕ್ಷ ರಾಕೇಶ್ ಭಟ್, ನಗರ ಪಾಲಿಕೆ ಸದಸ್ಯರಾದ ಪ್ರಮಿಳಾ ಭರತ್, ಎಲ್.ಜಗದೀಶ್, ಶ್ರೀರಾಮ ಸೇನೆಯ ನಗರಾಧ್ಯಕ್ಷ ಸಂಜಯ್, ಸಾವರ್ಕರ್ ಬಳಗದ ಸಂದೇಶ್ ಪವಾರ್, ಅನುಜ್ ಸಾರಸ್ವತ್, ದೀಪಕ್, ವಿಕ್ರಮ್ ಅಯ್ಯಂಗಾರ್, ಜಯಸಿಂಹ, ಅಜಯ್ ಶಾಸ್ತ್ರಿ, ಟಿ.ಎಸ್. ಅರುಣ್, ಪ್ರದೀಪ್, ರವಿ ಕುಂಚಿಟಿಗ, ಮಹೇಶ್ ಕುದೇರು, ಗುರುರಾಜ್ ಶೆಟ್ಟಿ, ಪ್ರಮೋದ್‌ಗೌಡ, ಬಿಜೆಪಿ ಮುಖಂಡರಾದ ಬಿ.ಎಂ.ರಘು, ಸಚಿನ್, ಬಿ.ಸಿ.ಶಶಿಕಾಂತ್, ಪ್ರತಾಪ್ ದಟ್ಟಗಳ್ಳಿ, ಬೇಗೂರು ಘಟಕದ ಶ್ರೀರಾಮಸೇನೆ ಸದಸ್ಯರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.05.2022 ಭಾನುವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 07.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ಚತುರ್ದಶಿ, ನಕ್ಷತ್ರ : ಕೃತ್ತಿಕಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 80ನೇ ಜನ್ಮದಿನೋತ್ಸವ, ಬೆಳಗ್ಗೆ 9ಕ್ಕೆ ಶ್ರೀಚಕ್ರಪೂಜೆ, ಮಹಾ ಸೌರಹೋಮ, ಬೆಳಗ್ಗೆ 10ಕ್ಕೆ ಪಾದಪೂಜೆ, ಭಕ್ತಾದಿಗಳಿಗೆ ದತ್ತಪಾದುಕಾ ದರ್ಶನ, ಸಂಜೆ 6.30ಕ್ಕೆ ರಾಮಕಥಾ ವಿಸ್ಮಯ, ಶುಕ ಸ್ವರಾಂಜಲಿ ನೃತ್ಯರೂಪಕ–ನಿರುಪಮ ರಾಜೇಂದ್ರರವರ ಅಭಿನವ ನೃತ್ಯಶಾಲೆ, ಬೆಂಗಳೂರು. ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಮೈಸೂರು ಜಿಲ್ಲಾ ಶಾತ್ತಾದ ಶ್ರೀ ವೈಷ್ಣವ ಸಂಘ:** ಭಗವದ್ ಶ್ರೀ ರಾಮಾನುಜಾಚಾರ್ಯರ 1005ನೇ ತಿರುನಕ್ಷತ್ರ ಹಾಗೂ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ನರಸಿಂಹಯ್ಯ, ಸನ್ಮಾನಿತರು: ಹೆಚ್.ಬಿ.ವೆಂಕಟೇಶಯ್ಯ, ಜಿ.ಪಿ.ನಾರಾಯಣ ಜೀಯರ್, ಮುಖ್ಯ ಅತಿಥಿಗಳು: ಅಖಿಲ ಕರ್ನಾಟಕ ಶ್ರೀ ವೈಷ್ಣವ ಸಭಾ ಅಧ್ಯಕ್ಷ ಎನ್.ಎಲ್.ನಾರಾಯಣಸ್ವಾಮಿ, ಶ್ರೀ ದೊಡ್ಡಯ್ಯಾಚಾರ್ ಮಠಂ ಅಧ್ಯಕ್ಷ ಬಿ.ಎನ್. ವೆಂಕಟಾಚಲಪತಿ, ಶ್ರೀ ವೈಷ್ಣವ ಸಂಘದ ಅಧ್ಯಕ್ಷ ಜಿ.ಟಿ.ಜಗನ್ನಾಥಕುಮಾರ್, ಸ್ಥಳ: ರೋಟರಿ ಪಶ್ಚಿಮ ವಿದ್ಯಾಸಂಸ್ಥೆ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9ಕ್ಕೆ.

■ **ಚುಟುಕು ಸಾಹಿತ್ಯ ಪರಿಷತ್, ಮೈಸೂರು ಜಿಲ್ಲಾ ಘಟಕ:** ಉದ್ಘಾಟನೆ: ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ರಾಜ್ಯಾಧ್ಯಕ್ಷ ತೋಂಟದಾರ್ಯ, ಅಧ್ಯಕ್ಷತೆ: ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷೆ ಡಾ. ರತ್ನಹಾಲಪ್ಪಗೌಡ, ಪ್ರಶಸ್ತಿ ಪತ್ರ ವಿತರಣೆ: ಡಾ.ಅರಸ್, ಪುಸ್ತಕ ತಾಂಬೂಲ ವಿತರಣೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಯಜ್ಞಪುರುಷ್ ಭಟ್, ಡಾ.ಮಧುಸೂದನ್, ಎಂ.ಬಿ. ಸಂತೋಷ್, ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಎಐಟಿಯುಸಿ, ಕರ್ನಾಟಕ ರಾಜ್ಯ ಸಮಿತಿ:** 11ನೇ ರಾಜ್ಯ ಸಮ್ಮೇಳನ, ಬೆಳಗ್ಗೆ 10.30ಕ್ಕೆ ಬೃಹತ್ ರ್‍ಯಾಲಿ, ಮಧ್ಯಾಹ್ನ 12ಕ್ಕೆ ಬಹಿರಂಗ ಅಧಿವೇಶನ, ಅಧ್ಯಕ್ಷತೆ: ಎಐಟಿಯುಸಿ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಹೆಚ್.ವಿ. ಅನಂತಸುಬ್ಬರಾವ್, ಉದ್ಘಾಟನೆ: ಪ್ರಧಾನ ಕಾರ್ಯದರ್ಶಿ ಅಮರ್‌ಜೀತ್ ಕೌರ್, ಸ್ಥಳ: ಕಾಮ್ರೇಡ್ ಎಂ.ಸಿ.ನರಸಿಂಹನ್ ಸಭಾಂಗಣ, ಗೋವಿಂದರಾವ್ ಮೆಮೋರಿಯಲ್ ಹಾಲ್.

■ **ವೀರಶೈವ ಲಿಂಗಾಯತ ವಿವಿಧ ಬಡಾವಣೆಗಳ ಒಕ್ಕೂಟ:** ಬಸವ ಜಯಂತಿ ಹಾಗೂ ಒಕ್ಕೂಟದ ಉದ್ಘಾಟನೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಪಸ್ಥಿತರು: ಒಕ್ಕೂಟದ ಗೌರವ ಅಧ್ಯಕ್ಷ ಡಾ.ಸೋಮಶೇಖರಸ್ವಾಮಿಗಳು, ಉದ್ಘಾಟನೆ: ಶಾಸಕ ಸಿ.ಎಸ್.ನಿರಂಜನಕುಮಾರ್, ಮುಖ್ಯ ಭಾಷಣಕಾರರು: ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಲ್.ಮಲ್ಲೇಶಗೌಡ, ಮುಖ್ಯ ಅತಿಥಿಗಳು: ತಹಸೀಲ್ದಾರ್ ಬಿ.ಎನ್. ಗಿರೀಶ್, ಅಧ್ಯಕ್ಷತೆ : ಒಕ್ಕೂಟದ ಅಧ್ಯಕ್ಷ ಕೆ.ಸಿ. ಬಸವರಾಜಸ್ವಾಮಿ, ಸ್ಥಳ: ಶಿಕ್ಷಕರ ಬಡಾವಣೆ ಉದ್ಯಾನವನ, ಶ್ರೀ ಬಸವೇಶ್ವರ ದೇವಸ್ಥಾನದ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಸೇನಾ ಪಡೆ:** ಶ್ರೀ ಶಂಕರ ಜಯಂತಿ–ತತ್ವಜ್ಞಾನಿಗಳ ದಿನಾಚರಣೆ, ಸಾನ್ನಿಧ್ಯ: ಡಾ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶ್ರೀ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಜಿಎಸ್‌ಎಸ್ ಮುಖ್ಯಸ್ಥ ಶ್ರೀಹರಿ, ಸಾಧಕರಿಗೆ ಸನ್ಮಾನ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಶ್ರೀ ಶೃಂಗೇರಿ ಶಂಕರ ಮಠ, ಬೆಳಗ್ಗೆ 11.30ಕ್ಕೆ.

■ **ಶ್ರೀದೇವಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆ :** ಸಾಧಕರಿಗೆ ಹಾಗೂ ಸಂಸ್ಕೃತಿ ಸಂಪನ್ನರಿಗೆ ಗೌರವ ಸಮರ್ಪಣೆ, ಅಧ್ಯಕ್ಷತೆ : ಸಂಸ್ಥೆ ಅಧ್ಯಕ್ಷ ಹೆಚ್.ಕೆ. ಸೋಮಶೇಖರ್, ಅಭಿನಂದನಾ ನುಡಿ : ನಿವೃತ್ತ ಶಿಕ್ಷಕ ಕೆ.ಎನ್.ಜಯರಾಮೇಗೌಡ, ಅತಿಥಿಗಳು : ಪ್ರೊ. ನೀ. ಗಿರಿಗೌಡ, ಡಾ. ಕೆ. ರಘುರಾಂ, ಅಂಶಿ ಪ್ರಸನ್ನಕುಮಾರ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಅಖಿಲ ಕರ್ನಾಟಕ ಶ್ರಮಜೀವಿ ಕಟ್ಟಡ ಕಾರ್ಮಿಕ ಮಹಾಸಭಾ:** ಕಾರ್ಮಿಕರ ದಿನಾಚರಣೆ, ಡಾ. ಅಂಬೇಡ್ಕರ್ ಜನ್ಮ ದಿನಾಚರಣೆ, ಉದ್ಘಾಟನೆ: ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಪಾಲಿಕೆ ಸದಸ್ಯ ಪ್ರದೀಪ್‌ಚಂದ್ರು, ಅಧ್ಯಕ್ಷತೆ: ಮಹಾಸಭಾ ಸಂಸ್ಥಾಪಕ ರಾಜ್ಯಾಧ್ಯಕ್ಷ ನರಸಿಂಹಮೂರ್ತಿ, ಸ್ಥಳ: ಶ್ರೀ ಗಣೇಶ್ ಪ್ಯಾರಡೈಸ್ ಕಲ್ಯಾಣ ಮಂಟಪ, ರಾಜೇಂದ್ರನಗರ, ಬೆಳಗ್ಗೆ 11.30ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ವೇಣುಮಾಂತ್ರಿಕ ಟಿ.ಆರ್. ಮಹಾಲಿಂಗಂ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಅಮಿತ್ ನಾಡಿಗ್ ಅವರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ, ವಿದ್ವಾನ್ ಆರ್. ದಯಾಕರ್–ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಮೈಸೂರು ಉತ್ಸವ:** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

■ **ನಟನ ರಂಗ ಶಾಲೆ :** ನಟನದ ರೆಪರ್ಟರಿ ಕಲಾವಿದರಿಂದ ಪಿ. ಲಂಕೇಶ್ ಅವರ ಗೃಹಸ್ಥಾಶ್ರಮ ನಾಟಕ ಪ್ರದರ್ಶನ, ನಿರ್ದೇಶನ: ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಬದುಕು ಬದಲಿಸಿದ ಶೋಧ, ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಪಿ. ಸುರಭಿ, ವ್ಯಾಖ್ಯಾನ– ಡಾ. ಸಿ. ನಾಗಣ್ಣ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ', ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಈಸಿ ಇಂಗ್ಲಿಷ್–ಕನ್ನಡದ ಮೂಲಕ ಇಂಗ್ಲಿಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ– ಸಿ.ಕೆ.ವಿಜಯನಾರಸಿಂಹ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿ ಪಯಣ, 9.40 ನಮ್ಮ ಆರೋಗ್ಯ, 'ಆರೋಗ್ಯ ಮತ್ತು ಔಷಧ' ಕುರಿತು ಡಾ.ಹನುಮಂತಾಚಾರ್ ಜೋಷಿ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ವಿ.ವಿ.ಎಸ್. ಬಿ.ಎಂ.ಶ್ರೀ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು ನಂತರ ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 12.35 ದೇವರನಾಮ–ವೃಂದಗಾನ, ಶಂಕರ್, 12.45 ಜನಪದ ಸಂಗೀತ–ಪುಟ್ಟಸಿದ್ದಯ್ಯ ಮತ್ತು ತಂಡ, 1.20 ಭಾವಗೀತೆ–ಪುರುಷೋತ್ತಮ, 2.35 ಚಲನಚಿತ್ರ ಧ್ವನಿವಾಹಿನಿ 'ಅರುಣರಾಗ', 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ 'ಕರ್ಣ ಪಟ್ಟಾಭಿಷೇಕ', ಪ್ರಸ್ತುತಿ–ಕಾಸರಗೊಡಿನ ಕೆ.ಎ.ಪದ್ಮನಾಭ ಪೂಜಾರಿ ಮತ್ತು ಬಳಗದವರು, 8.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಮನದ ಮಾತಿನ ಕನ್ನಡ ಅನುವಾದದ ಮರು ಪ್ರಸಾರ, 9.05 ಚಿಣ್ಣರ ಸುದ್ದಿಲೋಕ, ಪ್ರಚಲಿತ ವಿದ್ಯಮಾನಗಳ ವಾರ್ತಾ ಸಂಚಿಕೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಪಂ.ಬೋಲಾನಾಥ್ ಮಿಶ್ರ–ಗಾಯನ, 11.00 ಸವಿನೆನಪು

ಮೈಸೂರು ಜೈಲಿಗೆ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ವೀರಪ್ಪ ದಿಢೀರ್ ಭೇಟಿ



ಕೈದಿಗಳನ್ನು ಉದ್ದೇಶಿಸಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಿ.ವೀರಪ್ಪ ಮಾತನಾಡಿದರು. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹೆಚ್.ಶಶಿಧರ ಶೆಟ್ಟಿ, ಮೈಸೂರು ಪ್ರಧಾನ ಮತ್ತು ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಎಲ್. ರಘುನಾಥ್ ಮತ್ತಿತರರಿದ್ದಾರೆ.

● ಜೈಲಿನ ಎಲ್ಲಾ ವಿಭಾಗಗಳ ಪರಿಶೀಲನೆ ● ಕೈದಿಗಳ ಅಹವಾಲು ಸ್ವೀಕಾರ

ಮೈಸೂರು,ಮೇ 28(ಎಸ್‌ಬಿಡಿ)– ಹೈಕೋರ್ಟ್ ನ್ಯಾಯಾಧೀಶರೂ ಆದ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಿ.ವೀರಪ್ಪ ಮೈಸೂರು ಕೇಂದ್ರ ಕಾರಾಗೃಹಕ್ಕೆ ಶನಿವಾರ ಸಂಜೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮಹಿಳಾ ಕೈದಿಗಳ ವಿಭಾಗ, ಆಸ್ಪತ್ರೆ ವಿಭಾಗ, ಟವರ್ ವಿಭಾಗ, ಅಡುಗೆ ಮನೆ, ದಾಸ್ತಾನು ಕೊಠಡಿ, ಸಿಸಿಟಿವಿ ನಿಯಂತ್ರಣ ಕೊಠಡಿ ಸೇರಿದಂತೆ ಕಾರಾಗೃಹದೆಲ್ಲೆಡೆ ಸುಮಾರು ಒಂದೂವರೆ ಗಂಟೆ ಕಾಲ ಪರಿಶೀಲನೆ ನಡೆಸಿದರು. ಈ ನಡುವೆ ಟವರ್ ವಿಭಾಗದ ಆವರಣದ ಕಲ್ಲು ಕಟ್ಟೆ ಮೇಲೆಯೇ ಕುಳಿತು, ಕಾರಾಗೃಹ ವಾಸಿಗಳು ನೀಡಿದ ಮನವಿ ಸ್ವೀಕರಿಸಿ ಅವರಿಗೆ ಅಗತ್ಯ ಮಾರ್ಗದರ್ಶನ ನೀಡಿದರು.

ಸ್ವಲ್ಪ ಹುಳಿ ಕಡಿಮೆ ಮಾಡಿ: ಅಡುಗೆ ಮನೆಯ ಸ್ವಚ್ಛತೆ, ಊಟ ತಯಾರಿಸುವುದನ್ನು ಪರಿಶೀಲಿಸಿದ ನ್ಯಾಯಾಧೀಶರು, ಅಲಸಂದೆ ಸಾಂಬಾರ್‌ನ ರುಚಿ ನೋಡಿದರು. ಒಂದು ಚಮಚದಲ್ಲಿ ಕಾಳು ಸಹಿತ ಸ್ವಲ್ಪ ಸಾಂಬಾರ್ ಸೇವಿಸಿ, ಚೆನ್ನಾಗಿದೆ. ಆದರೆ ಸ್ವಲ್ಪ ಹುಳಿ ಕಡಿಮೆ ಮಾಡು ಎಂದು ಅಲ್ಲಿ ಅಡುಗೆ ತಯಾರಿಸುತ್ತಿದ್ದವರಿಗೆ ತಿಳಿಸಿದರು. ಬಳಿಕ ಸಿಸಿಟಿವಿ ನಿಯಂತ್ರಣ ಕೊಠಡಿ ಬಳಿಯ ಮತ್ತೊಂದು ಕೊಠಡಿಯಲ್ಲಿದ್ದ ಮೈಕ್ ಸೆಟ್‌ನಲ್ಲಿ 'ಗಂಧದ ಗುಡಿ' ಚಿತ್ರದ ಹಾಡನ್ನು ಪ್ಲೇ ಮಾಡಿಸಿದರು.

ಕರ್ಣಿ ಹಿಡಿದ ನ್ಯಾಯಾಧೀಶರು: ಆಸ್ಪತ್ರೆ ವಿಭಾಗದ ಪರಿಶೀಲನೆ ಸಂದರ್ಭದಲ್ಲಿ ನ್ಯಾಯಾಧೀಶರಾದ ವೀರಪ್ಪನವರು, ಅಲ್ಲಿಯೇ ಮಳೆ ನೀರು ಚರಂಡಿ ದುರಸ್ತಿ ಮಾಡುತ್ತಿರುವುದನ್ನು ಗಮನಿಸಿ, ಅದರ ಬಗ್ಗೆ ವಿಚಾರಿಸಿದರು. ಈ ವೇಳೆ ಕರ್ಣಿಯಲ್ಲಿ ಬಾಂಡಲಿಯಲ್ಲಿದ್ದ ಒಂದಿಷ್ಟು ಸಿಮೆಂಟ್ ತೆಗೆದುಕೊಂಡು ಇಳಿಜಾರಾಗಿ ಪ್ಲಾಸ್ಟರಿಂಗ್ ಮಾಡುವುದನ್ನು ಸ್ವತಃ ತೋರಿಸಿಕೊಟ್ಟರು. ನಮ್ಮಜ್ಜಿ ಸಗಣಿ ಸಾರಿಸುವ ರೀತಿಯಲ್ಲಿ ಮಾಡಬೇಡಿ, ಯಾವುದೇ ಕೆಲಸವನ್ನು ನಿಷ್ಠೆಯಿಂದ ಮನಸ್ಸಿಗೆ ಖುಷಿಯಾಗುವ ರೀತಿಯಲ್ಲಿ ಮಾಡಬೇಕೆಂದು ಕಿವಿಮಾತು ಹೇಳಿದರು.

ಅವಲತ್ತುಕೊಂಡ ಕೈದಿಗಳು: ಪರಿಶೀಲನೆ ಸಂದರ್ಭದಲ್ಲಿ ನ್ಯಾಯಾಧೀಶರು, ಕಾರಾಗೃಹ ವಾಸಿಗಳನ್ನು ಮಾತನಾಡಿಸಿ, ಪ್ರಕರಣ ಹಾಗೂ ಶಿಕ್ಷೆ ಪ್ರಮಾಣದ ಬಗ್ಗೆ ವಿಚಾರಿಸಿದರು. ಅನಾರೋಗ್ಯದ ಕಾರಣ ಆಸ್ಪತ್ರೆ ವಿಭಾಗದ ಕೊಠಡಿಯಲ್ಲಿದ್ದ ಕೈದಿಯೊಬ್ಬರು, ಪತ್ನಿ ಪ್ರತ್ಯೇಕವಾಗಿ 40 ವರ್ಷದ ನಂತರ ಜೀವನಾಂಶ ಕೇಳಿದ್ದಾರೆ. ಇಲ್ಲಿಗೆ ಬಂದು ನಾಲ್ಕೈದು ತಿಂಗಳಾಗಿದೆ, ನನ್ನ ಬಳಿ ಹಣವೂ ಇಲ್ಲ ಎಂದು ನ್ಯಾಯಾಧೀಶರಿಗೆ ತಿಳಿಸಿದರು.

ಕಾರಾಗೃಹ ವಾಸಿಗಳು ಒಂದೆಡೆ ಸೇರಿದ್ದ ಟವರ್ ವಿಭಾಗದ ಆವರಣದಲ್ಲೂ ಸಾಕಷ್ಟು ಮಂದಿ ಮನವಿ ನೀಡಿದರು. ಪ್ರಕರಣವೊಂದರಲ್ಲಿ ಶಿಕ್ಷೆ ಅನುಭವಿಸುತ್ತಿರುವ ವಕೀಲರೊಬ್ಬರು, 5 ವರ್ಷದಿಂದ ಪೆರೋಲ್ ನೀಡುತ್ತಿಲ್ಲ ಎಂದು ಹೇಳಿದರು. ವಿಚಾರಣಾಧೀನ ಕೈದಿಯೊಬ್ಬ, ವಾರಕ್ಕೊಮ್ಮೆ ನಮ್ಮ ತಾಯಿ ತಂದು ಕೊಡುವ ಊಟವನ್ನು ಸ್ವೀಕರಿಸಲು ಅವಕಾಶ ಮಾಡಿಕೊಡುವಂತೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಒಬ್ಬರಿಗೆ ಅನುಮತಿ ನೀಡಿದರೆ ಇಲ್ಲಿರುವ 800ಕ್ಕೂ ಹೆಚ್ಚು ವಾಸಿಗಳಿಗೂ ಅವಕಾಶ ಮಾಡಿಕೊಡಬೇಕಾಗುತ್ತದೆ. ಹಾಗಾದರೆ ಇಲ್ಲಿನ ವ್ಯವಸ್ಥೆ ಹಾಳಾಗುತ್ತದೆ ಎಂದು ಮನದಟ್ಟು ಮಾಡಿದರು. 23 ವರ್ಷದ ಮತ್ತೋರ್ವ ವಿಚಾರಣಾಧೀನ ಕೈದಿ, ಡಕಾಯಿತಿ ಪ್ರಕರಣದಲ್ಲಿ ಜೈಲಿಗೆ ಹಾಕಿ ಎರಡೂವರೆ ವರ್ಷವಾಯ್ತು, ಇನ್ನೂ ಜಾಮೀನು ಸಿಕ್ಕಿಲ್ಲ ಎಂದು ತಿಳಿಸಿದರು.

ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ. ದಿವ್ಯಶ್ರೀ, ಆರೇಳು ವರ್ಷಗಳಿಂದ ಪೆರೋಲ್‌ನಡಿ ಕೈದಿಗಳನ್ನು ಹೊರಗೆ ಕಳುಹಿಸಲು ಆಗುತ್ತಿಲ್ಲ. ಕೈದಿಗಳ ಬಗ್ಗೆ ಪೊಲೀಸ್ ವರದಿ ಸಕಾರಾತ್ಮಕವಾಗಿಲ್ಲ ಎನ್ನುವುದು ಇದಕ್ಕೆ ಕಾರಣ. 50ಕ್ಕೂ ಹೆಚ್ಚು ಕೈದಿಗಳ ಮನವಿಯನ್ನು ಮೂರ್‍ನಾಲ್ಕು ಬಾರಿ ತಿರಸ್ಕರಿಸಲಾಗಿದೆ ಎಂದು ವಿವರಣೆ ನೀಡಿದರು.

ಸರ್ ನಿಮ್ಮ ಐಡೆಂಟಿಫಿಕೇಷನ್?: ಆಸ್ಪತ್ರೆ ವಿಭಾಗದ ಪರಿಶೀಲನೆ ವೇಳೆ ತಮ್ಮ ಕೊಠಡಿ ಬಳಿ ಆಗಮಿಸಿದ ನ್ಯಾಯಾಧೀಶರಾದ ವೀರಪ್ಪ ಅವರನ್ನೇ 'ಸರ್ ನಿಮ್ಮ ಐಡೆಂಟಿಫಿಕೇಷನ್(ಗುರುತು) ಕೇಳಬಹುದೇ? ಎಂದು ಪ್ರಶ್ನಿಸಿದರು. ಇದಕ್ಕೆ ಸಮಾಧಾನದಿಂದಲೇ ಪ್ರತಿಕ್ರಿಯಿಸಿ, ನಾನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎಂದು ಪರಿಚಯಿಸಿಕೊಂಡರಲ್ಲದೆ ನಿಮ್ಮದು ಯಾವ ಕೇಸ್? ಎಷ್ಟು ದಿನದಿಂದ ಇಲ್ಲಿದ್ದೀರಿ? ಎಂದು ವಿಚಾರಿಸಿದರು. 'ನಾನೊಬ್ಬ ಸಾಮಾಜಿಕ ಕಾರ್ಯಕರ್ತ, ಸಣ್ಣ ಪ್ರಕರಣದಲ್ಲಿ ಜೈಲಿಗೆ ಹಾಕಿದ್ದಾರೆ. ಅರ್ಜಿ ಸಲ್ಲಿಸಿ 6 ತಿಂಗಳಾದರೂ ಜಾಮೀನು ಸಿಕ್ಕಿಲ್ಲ. ಈ ಬಗ್ಗೆ ದೂರು ನೀಡಿದ್ದರೂ ಅದಕ್ಕೆ ಪ್ರತಿಯಾಗಿ ಸ್ವೀಕೃತಿಯನ್ನೂ ನೀಡಿಲ್ಲ' ಎಂದು ದೂರಿದರು. ಈ ಬಗ್ಗೆ ಪರಿಶೀಲಿಸುವುದಾಗಿ ನ್ಯಾಯಾಧೀಶರು ಭರವಸೆ ನೀಡಿದರು.

ಕೈಮುಗಿದ ಇರಾಕ್ ಪ್ರಜೆ: ಸಾಮಾಜಿಕ ಕಾರ್ಯಕರ್ತ ಎಂದು ಹೇಳಿಕೊಂಡ ಕೈದಿಯ ಜೊತೆಯಲ್ಲೇ ಇದ್ದ ಇರಾಕ್ ಪ್ರಜೆಯ ಬಗ್ಗೆ ನ್ಯಾಯಾಧೀಶರು ವಿಚಾರಿಸಿದರು. ಅಕ್ರಮ ವಾಗಿ ವಾಸವಾಗಿರುವ ಆರೋಪದಡಿ 4 ತಿಂಗಳಿಂದ ಜೈಲಿನಲ್ಲಿರುವುದನ್ನು ತಿಳಿದು, ಸಂಬಂಧಪಟ್ಟ ರಾಯಭಾರಿ ಕಚೇರಿಗೆ ಮಾಹಿತಿ ನೀಡುವಂತೆ ಕಾರಾಗೃಹ ಮುಖ್ಯ ಅಧೀಕ್ಷಕಿ ದಿವ್ಯಶ್ರೀ ಅವರಿಗೆ ಸೂಚಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ದಿವ್ಯಶ್ರೀ, ಈತನಿಗೆ ಸಂಬಂಧಪಟ್ಟ ದಾಖಲೆಗಳೆಲ್ಲಾ ವಾಸವಿದ್ದ ರೂಂನಲ್ಲಿರುವುದರಿಂದ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ, ಅವುಗಳನ್ನು ಸಂಗ್ರಹಿಸುವುದಕ್ಕೂ ಅವಕಾಶವಿಲ್ಲ ಎಂದರು. ಇದಕ್ಕೆ ನ್ಯಾಯಾಲಯದ ಅನುಮತಿ ಪಡೆದು ಆತ ವಾಸವಿದ್ದ ಮನೆ ವ್ಯಾಪ್ತಿಯ ಪೊಲೀಸರ ಮೂಲಕ ದಾಖಲೆಗಳನ್ನು ತರಿಸಿಕೊಳ್ಳಿ ಎಂದು ಸಲಹೆ ನೀಡಿದರು. ಈ ವೇಳೆ ಇರಾಕ್ ಪ್ರಜೆ, ನ್ಯಾಯಾಧೀಶರಿಗೆ ಕೈಮುಗಿದು, ಧನ್ಯವಾದ ತಿಳಿಸಿದರು.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹೆಚ್.ಶಶಿಧರ ಶೆಟ್ಟಿ, ಸಾರ್ವಜನಿಕ ಸಂಪರ್ಕಾಧಿಕಾರಿ ವಿಘ್ನೇಶ್‌ಕುಮಾರ್, ಮೈಸೂರು ಪ್ರಧಾನ ಮತ್ತು ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎಂ.ಎಲ್. ರಘುನಾಥ್, ಸದಸ್ಯ ಕಾರ್ಯದರ್ಶಿಯಾದ ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜ ಭೂತೆ ಮತ್ತಿತರರು ಕಾರಾಗೃಹ ಪರಿಶೀಲನೆಯಲ್ಲಿ ಭಾಗಿಯಾಗಿದ್ದರು.

ಬಡ ಕೈದಿಗಳಿಗೆ ಕಾನೂನು ಸೇವೆ

ಮೈಸೂರು: ಕೇಸ್ ನಡೆಸಲು ವಕೀಲರಿಗೆ ವಹಿಸಲು ಸಾಧ್ಯವಾಗದವರಿಗೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನೆರವಾಗಲಿದೆ ಎಂದು ಪ್ರಾಧಿಕಾರದ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಾಧೀಶ ವೀರಪ್ಪ, ಕೈದಿಗಳಿಗೆ ತಿಳಿವಳಿಕೆ ನೀಡಿದರು.

ಮೈಸೂರು ಕೇಂದ್ರ ಕಾರಾಗೃಹ ಪರಿಶೀಲನೆ ಸಂದರ್ಭದಲ್ಲಿ ಅಲ್ಲಿನ ವಾಸಿಗಳನ್ನುದ್ದೇಶಿಸಿ ಮಾತನಾಡಿ, ಕಾರಾಗೃಹದಲ್ಲಿರುವ ವ್ಯವಸ್ಥೆ, ಸೌಲಭ್ಯಗಳ ಬಗ್ಗೆ ತಿಳಿಯಲು ದಿಢೀರ್ ಭೇಟಿ ನೀಡಿದ್ದೇವೆ. ಈ ವೇಳೆ ಕಂಡುಬರುವ ಸಮಸ್ಯೆಗಳನ್ನು ಸರಿಪಡಿಸುವಂತೆ ಸೂಚನೆ ನೀಡುತ್ತೇವೆ. ಊಟ, ವಾಸ್ತವ್ಯ, ಆರೋಗ್ಯ ಸೌಲಭ್ಯ ಇನ್ನಿತರ ಸೌಕರ್ಯಗಳ ಬಗ್ಗೆ ದೂರಿದ್ದರೆ ತಿಳಿಸಬಹುದು. ಒಂದು ವೇಳೆ ಆರ್ಥಿಕ ಸಮಸ್ಯೆಯಿಂದ ವಕೀಲರನ್ನಿಟ್ಟು ಕೇಸ್ ನಡೆಸಲು ಸಾಧ್ಯವಾಗದವರು ಕಾರಾಗೃಹ ಮುಖ್ಯ ಅಧೀಕ್ಷಕರ ಮೂಲಕ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಬಹುದು. ಹೈಕೋರ್ಟ್‌ನಿಂದ ಸುಪ್ರೀಂ ಕೋರ್ಟ್‌ವರೆಗೂ ವಕೀಲರನ್ನು ನಿಮ್ಮ ಪರವಾಗಿ ನಿಯೋಜಿಸಲಾಗುತ್ತದೆ. ಇದಕ್ಕೆ ಒಂದು ರೂ. ಕೂಡ ನೀಡುವ ಅಗತ್ಯವಿಲ್ಲ ಎಂದು ತಿಳಿಸಿದರು.

ಆದರೆ ಖಾಸಗಿ ವಕೀಲರಿಗೆ ವಹಿಸಿರುವವರು ತಮ್ಮ ಜಾಮೀನು ವಿಚಾರವಾಗಿ ಅವರ ಬಳಿಯೇ ಕೇಳಿ, ತಿಳಿದುಕೊಳ್ಳಬೇಕು. ಸಂಬಂಧಿಸಿದ ಪ್ರಕ್ರಿಯೆಗಳನ್ನು ತ್ವರಿತವಾಗಿ ನಡೆಸುವಂತೆ ಅವರನ್ನು ಒತ್ತಾಯಿಸಬೇಕು. ಅವರು ಸರಿ ಹೋಗದಿದ್ದರೆ ಎನ್‌ಓಸಿ ಪಡೆದು ವಕೀಲರನ್ನು ಬದಲಿಸಿಕೊಳ್ಳಬಹುದು. ಇಲ್ಲವೇ ಪ್ರಾಧಿಕಾರದ ಮೂಲಕವೇ ಆ ಸೌಲಭ್ಯ ಪಡೆದುಕೊಳ್ಳಬಹುದು. ನ್ಯಾಯಾಧೀಶರ ಸಂಖ್ಯೆ ಕಡಿಮೆ ಹಾಗೂ ಪ್ರಕರಣಗಳ ಸಂಖ್ಯೆ ಹೆಚ್ಚಿರುವ ಕಾರಣ ಸಹಜವಾಗಿ ವಿಳಂಬವಾಗುತ್ತದೆ. ಹುಟ್ಟು-ಸಾವು ಖಚಿತ, ಆದರೆ ನಡುವಿನ ಜೀವನ ಸಾರ್ಥಕವಾಗಿರಬೇಕು. ಅಚಾತುರ್ಯದಿಂದ ತಪ್ಪು ಮಾಡಿ, ಶಿಕ್ಷೆಗೆ ಗುರಿಯಾಗಿದ್ದೀರಿ. ಗ್ರಂಥಾಲಯದಲ್ಲಿರುವ ಮಹಾನುಭಾವರ ಕುರಿತಾದ ಪುಸ್ತಕಗಳನ್ನು ಓದಿ. ನಿತ್ಯ ಧ್ಯಾನ, ಯೋಗ ಮಾಡುವುದನ್ನು ರೂಢಿಸಿಕೊಳ್ಳಿ. ಮನಃಪರಿವರ್ತನೆಯೊಂದಿಗೆ ತಾಳ್ಮೆಯಿಂದ ಕಾನೂನುಬದ್ಧವಾಗಿ ನಡೆದುಕೊಂಡು ಇಲ್ಲಿಂದ ಬಿಡುಗಡೆಯಾಗಿ ಉತ್ತಮರಾಗಿ ಬದುಕಿ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ನುಡಿದರು.



ಪಾಕಶಾಲೆಯಲ್ಲಿ ಸಾಂಬಾರ್ ರುಚಿ ಸವಿಯುತ್ತಿರುವುದು.



ಕಾರಾಗೃಹದಲ್ಲಿ ಅಹವಾಲು ಸ್ವೀಕರಿಸುತ್ತಿರುವ ನ್ಯಾಯಾಧೀಶರು

> "ಕಾರಾಗೃಹಗಳಲ್ಲಿನ ಊಟ ಇನ್ನಿತರ ಸೌಕರ್ಯಗಳ ಬಗ್ಗೆ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಈ ರೀತಿ ದಿಢೀರ್ ಭೇಟಿ ನೀಡಿ, ಪರಿಶೀಲಿಸುವ ಮೂಲಕ ಸತ್ಯಾಸತ್ಯತೆ ತಿಳಿಯುತ್ತಿದ್ದೇವೆ. ಮೈಸೂರು ಕೇಂದ್ರ ಕಾರಾಗೃಹದಲ್ಲಿ 562 ಕೈದಿಗಳಿಗೆ ಸೌಲಭ್ಯ ಒದಗಿಸಲು ಸಾಮರ್ಥ್ಯವಿದೆ. ಆದರೆ ಸದ್ಯ ಇಲ್ಲಿ 800ಕ್ಕೂ ಹೆಚ್ಚು ಕೈದಿಗಳಿದ್ದಾರೆ. ಜೈಲಿನ ಆವರಣದಲ್ಲೇ ಹೊಸ ಕಟ್ಟಡ ನಿರ್ಮಾಣಕ್ಕೆ ಪ್ರಸ್ತಾವ ಸಿದ್ಧಪಡಿಸಲಾಗಿದೆ ಎಂದು ಇಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ. ಕಟ್ಟಡ ವಿಸ್ತರಣೆಯಾದರೆ ಒತ್ತಡ ತಗ್ಗಬಹುದು. ಇಲ್ಲಿ ಕೆಲ ಸಮಸ್ಯೆಗಳಿದ್ದರೂ ನಿರ್ವಹಣೆಯಲ್ಲಿ ಕೋಲಾರ ಕಾರಾಗೃಹಕ್ಕಿಂತ ಉತ್ತಮವಾಗಿದೆ.
>
> –ಬಿ.ವೀರಪ್ಪ, ಅಧ್ಯಕ್ಷರು
> ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ

ದೇವನೂರು ಮೈಕ್ ಬಿಟ್ಟು ಪೆನ್ ಕೈಗೆತ್ತಿಕೊಳ್ಳಲಿ; ಪ್ರತಾಪ್ ಸಿಂಹ

ಉಡುಪಿ: ಪಠ್ಯಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಊಹಾಪೋಹ ಸೃಷ್ಟಿಸುತ್ತಿರುವ ಸಾಹಿತಿ ದೇವನೂರ ಮಹಾದೇವ ಮೈಕ್ ಬಿಟ್ಟು ಪೆನ್ ಕೈಗೆತ್ತಿಕೊಳ್ಳಲಿ ಎಂದು ಸಂಸದ ಪ್ರತಾಪ್ ಸಿಂಹ ಸಲಹೆ ನೀಡಿದರು.



ಶನಿವಾರ ಉಡುಪಿಯಲ್ಲಿ ಮಾತನಾಡಿ, ದೇವನೂರ ಪೆನ್ನಿಗೆ ನಿವೃತ್ತಿ ಕೊಟ್ಟು ಮೈಕ್ ಮುಂದೆ ನಿಂತಿದ್ದಾರೆ. 2014, 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪರ ಪ್ರಚಾರ ಮಾಡಿದರು. ಆದರೆ, ಜನರು ನೀಡಿದ ತೀರ್ಪು ಎಲ್ಲರಿಗೂ ಗೊತ್ತಿದೆ. ಕುಸುಮಬಾಲೆ ಎಂಬ ಅದ್ಭುತ ಕೃತಿ ಬರೆದಿರುವ ದೇವನೂರು ಬಗ್ಗೆ ಅಪಾರವಾದ ಗೌರವವಿದೆ. ಕಾಂಗ್ರೆಸ್ ಪರ ಪ್ರಚಾರ ಮಾಡುವುದನ್ನು ಬಿಟ್ಟು ಅವರು ಹಿಂದಿನಂತೆ ಮತ್ತೆ ಪೆನ್ ಕೈಗೆತ್ತಿಕೊಂಡು ಅದ್ಭುತ ಕೃತಿ ರಚಿಸಲಿ ಎಂದರು.

ಪಠ್ಯಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಬರಗೂರು ರಾಮಚಂದ್ರಪ್ಪ ಹಾಗೂ ದೇವನೂರು ಮಹಾದೇವ ಊಹಾಪೋಹ ಸೃಷ್ಟಿಸುತ್ತಿದ್ದಾರೆ. ಮೈಕಾಸುರರಂತೆ ವರ್ತಿಸುತ್ತಿದ್ದಾರೆ. ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಬಹಿರಂಗ ಚರ್ಚೆಗೆ ಆಹ್ವಾನಿಸಿದರೂ ಒಪ್ಪಿಕೊಳ್ಳದೆ ಪಲಾಯನ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಅನಗತ್ಯ ತಕರಾರು ಎತ್ತುವವರು ವಿಚಾರ ನಪುಂಸಕರು. ಅವರ ಬಳಿ ವಿಚಾರಗಳಿಲ್ಲ; ಉಗುಳು ಮಾತ್ರ. ಪಠ್ಯಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಬಹಿರಂಗ ಚರ್ಚೆಗೆ ಬರಲಿ. ಭಗತ್ ಸಿಂಗ್, ನಾರಾಯಣ ಗುರು ಪಠ್ಯಗಳನ್ನು ಕೈಬಿಟ್ಟಿರುವುದಕ್ಕೆ ಸಾಕ್ಷ ತೋರಿಸಲಿ ಎಂದು ಸವಾಲು ಹಾಕಿದ ಪ್ರತಾಪ್ ಸಿಂಹ, ನಾರಾಯಣ ಗುರುಗಳ ಪಠ್ಯವನ್ನು ಸಮಾಜದಿಂದ ಕನ್ನಡ ವಿಷಯಕ್ಕೆ ವರ್ಗಾಯಿಸಲಾಗಿದೆ. ಏಳನೇ ತರಗತಿ ಪಠ್ಯದಲ್ಲೂ ನಾರಾಯಣ ಗುರುಗಳ ಪಾಠ ಇದೆ ಎಂದರು.

ನಾಡಗೀತೆಗೆ ಅವಮಾನ ಮಾಡಿರುವ ಸಂದೇಶವನ್ನು ರೋಹಿತ್ ಚಕ್ರತೀರ್ಥ ಬರೆದಿದ್ದಲ್ಲ. ವಾಟ್ಸ್ ಆ್ಯಪ್‌ಗೆ ಬಂದ ಸಂದೇಶವನ್ನು ಫೇಸ್ ಬುಕ್‌ನಲ್ಲಿ ಹಾಕಿದ್ದಾರೆ. ಸಿದ್ದರಾಮಯ್ಯ ಸರ್ಕಾರದಲ್ಲಿಯೇ ರೋಹಿತ್ ಚಕ್ರತೀರ್ಥ ವಿರುದ್ಧದ ಪ್ರಕರಣದಲ್ಲಿ 'ಬಿ' ರಿಪೋರ್ಟ್ ಕೂಡ ಹಾಕಲಾಗಿದೆ. ಅನಗತ್ಯವಾಗಿ ಅವರನ್ನು ತುಳಿಯುವ, ತೇಜೋವಧೆ ಮಾಡುವ ಪ್ರಯತ್ನ ನಡೆಯುತ್ತಿದೆ ಎಂದರು.

ಹಿಜಾಬ್ ವಿಚಾರದಲ್ಲಿ ನ್ಯಾಯಾಲಯದ ತೀರ್ಪಿಗೆ ಗೌರವ ಕೊಡಿ. ದೇಶ, ಸಂವಿಧಾನಕ್ಕಿಂತ ಧರ್ಮ ದೊಡ್ಡದು ಎಂದರೆ ಸಮಸ್ಯೆ ಸೃಷ್ಟಿಯಾಗುತ್ತದೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು.

ಸೋನಿಯಾ ಮೂಲ ಹುಡುಕಲಿ: ಸಿದ್ದರಾಮಯ್ಯ ಜೆಡಿಎಸ್‌ನಲ್ಲಿದ್ದಾಗ ಸೋನಿಯಾ ಗಾಂಧಿ ವಿರುದ್ಧ ಏಕವಚನದಲ್ಲಿ ಮಾತನಾಡುತ್ತಿದ್ದರು. ಕಾಂಗ್ರೆಸ್‌ಗೆ ಹೋದ ಬಳಿಕ ಮಹಾತಾಯಿ ಎನ್ನುತ್ತಿದ್ದಾರೆ. ಆರ್‌ಎಸ್‌ಎಸ್ ಮೂಲ ಹುಡುಕುವ ಸಿದ್ದರಾಮಯ್ಯ ಸೋನಿಯಾ ಗಾಂಧಿ ಮೂಲವನ್ನು ಹುಡುಕಲಿ ಎಂದು ತಿರುಗೇಟು ನೀಡಿದರು.

ಸ್ವಾತಂತ್ರ್ಯ ಸಿಕ್ಕಿದ್ದು ಕ್ಷಾತ್ರಶಕ್ತಿಯಿಂದ, ಅಹಿಂಸೆಯಿಂದಲ್ಲ

ಉಡುಪಿ: ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಕ್ಷಾತ್ರಶಕ್ತಿಯಿಂದ, ಅಹಿಂಸೆಯಿಂದಲ್ಲ ಎಂದು ಸಂಸದ ಪ್ರತಾಪಸಿಂಹ ಅಭಿಪ್ರಾಯಪಟ್ಟರು.

1857ರ ಸಿಪಾಯಿ ದಂಗೆ ಸ್ವಾತಂತ್ರ್ಯ ಸಂಗ್ರಾಮ ಆರಂಭವಾಗಿದ್ದು ಕ್ರಾಂತಿಯಿಂದ ಭಾರತದ ಇತಿಹಾಸವನ್ನು ಹೇಳುವಾಗ ಮೊಘಲರ ಆಳ್ವಿಕೆ ಬಗ್ಗೆ ಮಾತ್ರ ಉಲ್ಲೇಖಿಸಲಾಗುತ್ತಿದೆ. ಮೊಘಲರ ಆಳ್ವಿಕೆಗೂ ಮುನ್ನ ದೇಶವನ್ನು ಆಳಿದ ರಾಜರು ದೇಶದಲ್ಲಿದ್ದರು. ಮಾತ್ರವಲ್ಲ ಸಾಗರದಾಚೆಗೂ ಸಾಮ್ರಾಜ್ಯ ವಿಸ್ತರಿಸಿದ್ದರು ಎಂದರು.

ನಮ್ಮ ಮಕ್ಕಳಿಗೆ ದೇಶದ ನೈಜ ಇತಿಹಾಸ ತಿಳಿಸಬೇಕು. ಸ್ವಾತಂತ್ರ್ಯ ಹೋರಾಟ ಸಾಗಿಬಂದ ಹಾದಿ ಮತ್ತು ಹೋರಾಟಗಾರರ ಪರಿಚಯ ಯುವಜನತೆಗೆ ಸಿಗಬೇಕು. ಹಾಗಾಗಿ, 'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಸ್ವಾತಂತ್ರ್ಯ ಹೋರಾಟದ ಇತಿಹಾಸದ ಬಗ್ಗೆ ಪ್ರತಿಯೊಬ್ಬರೂ ತಿಳಿಯುವುದರ ಜತೆಗೆ ದೇಶಪ್ರೇಮ ಹಾಗೂ ದೇಶಾಭಿಮಾನ ಬೆಳೆಸಿಕೊಳ್ಳಬೇಕು. ಸಾತಂತ್ರ್ಯವನ್ನು ಉಳಿಸಿಕೊಂಡು ಹೋಗಬೇಕು ಎಂದರು. ದೇಶಕ್ಕೆ ಸ್ವಾತಂತ್ರ್ಯ ತಂದುಕೊಂಡಲು ಶ್ರಮಿಸಿದ ಮಹಾನ್ ನಾಯಕರಾದ ಝಾನ್ಸಿ ರಾಣಿ ಲಕ್ಷ್ಮೀಬಾಯಿ, ತಾತ್ಯಾ ಟೋಪಿ, ಭಗತ್ ಸಿಂಗ್, ಚಂದ್ರಶೇಖರ್ ಆಜಾದ್, ಬಾಲ ಗಂಗಾಧರ ತಿಲಕ, ಸುಭಾಷ್ ಚಂದ್ರ ಬೋಸ್ ಅವರಂತಹ ಹೋರಾಟಗಾರರನ್ನು ಸ್ಮರಿಸಬೇಕು ಎಂದರು.

1857ರ ಮೊದಲ ಸಿಪಾಯಿ ದಂಗೆಯ ಬಗ್ಗೆ ವೀರ ಸಾವರ್ಕರ್ ಪುಸ್ತಕ ಬರೆದು ಸ್ವಾತಂತ್ರ್ಯ ಕಿಚ್ಚು ಹಚ್ಚಿದ್ದರು. ಪ್ರತಿಯಾಗಿ ಬ್ರಿಟಿಷರು ಅವರನ್ನು ಅಂಡಮಾನ್, ನಿಕೋಬಾರ್ ಜೈಲಿಗೆ ಹಾಕಿದರು ಎಂದು ಸ್ಮರಿಸಿದರು.

ಉಪನ್ಯಾಸಕನ ಮೇಲೆ ವಿದ್ಯಾರ್ಥಿ ಹಲ್ಲೆ

ಮೈಸೂರು, ಮೇ 28– ಉಪನ್ಯಾಸಕರ ಮೇಲೆ ಹಲ್ಲೆ ನಡೆಸಿರುವ ಆರೋಪದಡಿ ವಿದ್ಯಾರ್ಥಿಯೋರ್ವನ ವಿರುದ್ಧ ಮೈಸೂರಿನ ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಖಾಸಗಿ ಇಂಜಿನಿಯರಿಂಗ್ ಕಾಲೇಜಿನ(ಎನ್‌ಐಇ–ಐಟಿ) ವಿದ್ಯಾರ್ಥಿ ಅಜಯ್, ಉಪನ್ಯಾಸಕರಾದ ಹೂಟಗಳ್ಳಿ ನಿವಾಸಿ ಲೋಕೇಶ್ ಅವರ ಮೇಲೆ ಶನಿವಾರ ಹಲ್ಲೆ ನಡೆಸಿದ್ದಾನೆ ಎನ್ನಲಾಗಿದೆ. ಕಾಲೇಜಿನಲ್ಲಿಂದು ಪದವೀಧರ ದಿನಾಚರಣೆ ನಡೆಯುತ್ತಿದ್ದ ಸಂದರ್ಭದಲ್ಲಿ ಹೊರಗಡೆ ಕೆಲ ವಿದ್ಯಾರ್ಥಿಗಳು ಜೋರಾಗಿ ಗಲಾಟೆ ಮಾಡುತ್ತಿದ್ದರಂತೆ. ಆಗ ಉಪನ್ಯಾಸಕ ಲೋಕೇಶ್ ಗಲಾಟೆ ಮಾಡುತ್ತಿದ್ದವರನ್ನು ಪ್ರಶ್ನಿಸಿದ್ದಾರೆ. ಈ ವೇಳೆ ಮಾತಿಗೆ ಮಾತು ಬೆಳೆದು, ಅಜಯ್ ಹಲ್ಲೆಗೆ ಮುಂದಾಗಿದ್ದಾನೆ. ಕೈಯಲ್ಲಿ ಧರಿಸಿದ್ದ ಕಡಗದಿಂದ ಹೊಡೆದ ಪರಿಣಾಮ ಉಪನ್ಯಾಸಕ ಲೋಕೇಶ್ ತಲೆಗೆ ಗಾಯವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಲೋಕೇಶ್ ನೀಡಿರುವ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ಹೆಬ್ಬಾಳು ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಪ್ರಸನ್ನ ತಿಳಿಸಿದ್ದಾರೆ.

ಸಚ್ಚಿದಾನಂದ ಶ್ರೀಗಳ ಸಾನ್ನಿಧ್ಯದಲ್ಲಿ ಖ್ಯಾತನಾಮರ ಮುಂದುವರೆದ ಸಂಗೀತ ಧಾರೆ

ಮೈಸೂರು, ಮೇ 28(ಎಂಕೆ)– ಗಣಪತಿ ಸಚ್ಚಿದಾನಂದ ಶ್ರೀಗಳ ಸನ್ನಿಧಿಯಲ್ಲಿ ನಾದ ಸೌರಭ... ಸಂಗೀತ ಪರಿಕರಗಳ ಸಮಾಗಮ...

ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವ ಅಂಗವಾಗಿ ಏರ್ಪಡಿಸಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಖ್ಯಾತ ವಯೋಲಿನ್ ವಾದಕ ವಿದ್ವಾನ್ ಡಾ.ಮೈಸೂರು ಮಂಜುನಾಥ್ ನೇತೃತ್ವದಲ್ಲಿ ನಡೆದ 'ನಾದ ಸಂಗಮ' ಅಪಾರ ಮೆಚ್ಚುಗೆಗೆ ಪಾತ್ರವಾಯಿತು.

ವೀಣಾ ವಾದನದಲ್ಲಿ ವಿದ್ವಾನ್ ಪ್ರವೀಣ್ ಗೋಡ್ಖಿಂಡಿ, ಬೆಲ್ಜಿಯಂನ ಖ್ಯಾತ ಸ್ಯಾಕ್ಸೋಫೋನ್ ವಾದಕ ಫೆಬ್ರಿಜಿಯೊ ಕ್ಯಾಸೋಲ್, ಪಿಯಾನೋ ವಾದನದಲ್ಲಿ ಬ್ರಿಯಾನ್ ಸಿಲಾಸ್, ಮೃದಂಗದಲ್ಲಿ ವಿದ್ವಾನ್ ಪತ್ರಿ ಸತೀಶ್ ಕುಮಾರ್, ತಬಲದಲ್ಲಿ ಹಿಮಾಂಶು ಮಹಂತ್ ಅವರಿಂದ 'ಕರ್ನಾಟಕ ಸಂಗೀತ', 'ಹಿಂದೂಸ್ತಾನಿ ಸಂಗೀತ', 'ಜಾಗ್ ಶೈಲಿ', 'ವೆಸ್ಟರ್ನ್ ಮ್ಯೂಸಿಕ್'ನ ಸಮಾಗಮವಾಯಿತು.

ಮೊದಲಿಗೆ ಚಾರುಕೇಶಿ ರಾಗದಲ್ಲಿ 'ಗೌರಿ ತಾಯಿ' ಭಜನೆ ಹಾಗೂ 'ಕೃಷ್ಣಂವಿಷ್ಣು' ಎಂಬ ಹಾಡುಗಳನ್ನು ನುಡಿಸಿದ ವಿದ್ವಾನ್ ಡಾ.ಮೈಸೂರು ಮಂಜುನಾಥ್, ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ ಕುರಿತು ರಚಿಸಿದ 'ರಾಗ ತಾನ ಪಲ್ಲವಿ'ಯನ್ನು ಕೀರವಾಣಿ ರಾಗದಲ್ಲಿ ನುಡಿಸಿ ಚಪ್ಪಾಳೆಯ ಸುರಿಮಳೆ ಪಡೆದರು.

ಬಳಿಕ 80ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಏಕಕಾಲದಲ್ಲಿ ಹಲವು ಬಗೆಯ ವಾದ್ಯ ಪರಿಕರಗಳನ್ನು ನುಡಿಸುವ ಮೂಲಕ ಶುಭಾಶಯ ಕೋರಲಾಯಿತು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸೇರಿದಂತೆ ಗಣ್ಯರು, ಸಾವಿರಾರು ಮಂದಿ ಭಕ್ತರು ಭಾಗವಹಿಸಿದ್ದರು.



ಗಣಪತಿ ಸಚ್ಚಿದಾನಂದ ಶ್ರೀಗಳ ಆಶೀರ್ವಾದ ಪಡೆದ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ

ಮೈಸೂರು, ಮೇ 28(ಎಂಕೆ)– ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿದ ಮಾಜಿ ಸಂಸದ ಆರ್.ಧ್ರುವನಾರಾಯಣ, ಸ್ವಾಮೀಜಿಯವರಿಗೆ ಹುಟ್ಟುಹಬ್ಬದ ಶುಭಕೋರಿ ಶ್ರೀಗಳಿಂದ ಆಶೀರ್ವಾದ ಪಡೆದರು. ಬಳಿಕ ಸ್ವಾಮೀಜಿಯವರೊಂದಿಗೆ ಕೆಲಕಾಲ ಚರ್ಚಿಸಿದ ಮಾಜಿ ಸಂಸದ ಆರ್.ಧ್ರುವನಾರಾಯಣ, ಕಾಂಗ್ರೆಸ್ ವತಿಯಿಂದ ತಮ್ಮ ಜನ್ಮಸ್ಥಳವಾದ ಮೇಕೆದಾಟಿನಿಂದ ಬೆಂಗಳೂರಿಗೆ ಹಮ್ಮಿಕೊಂಡಿದ್ದ ಪಾದಯಾತ್ರೆಯ ವೇಳೆ ಶ್ರೀಗಳನ್ನು ಸ್ಮರಿಸಿದ್ದೆವು. ಮೈಸೂರಿನಲ್ಲಿ ಇಂತಹದೊಂದು ಅಪಾರ ಭಕ್ತ ಸಮೂಹವನ್ನೊಳಗೊಂಡ ಆಶ್ರಮ ಇರುವುದೇ ಹೆಮ್ಮೆ ಎಂದರಲ್ಲದೆ ಗಣಪತಿ ಸಚ್ಚಿದಾನಂದ ಶ್ರೀಗಳು ಮೈಸೂರಿನಲ್ಲಿಯೇ ಇದ್ದು ಭಕ್ತರನ್ನು ಸದಾ ಆಶೀರ್ವದಿಸಬೇಕು ಎಂದು ಕೋರಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಕಾರ್ಯದರ್ಶಿ ಶಿವಪ್ರಸಾದ್, ಬಸವರಾಜು ಮತ್ತಿತರರಿದ್ದರು.



ನಕ್ಕರೆ ಅದೇ ಸ್ವರ್ಗ

ಯುವತಿ (ಬಸ್‌ನಲ್ಲಿ) : "ಲೇಡೀಸ್ ಸೀಟಿನಲ್ಲಿ ಕೂತಿದ್ದೀರಲ್ಲಾ ನಿಮಗೆ ನಾಚಿಕೆಯಾಗೊಲ್ವೇ?"

ಆತ : "ನಾಚಿಕೆ ಯಾಕೆ ಮೇಡಂ, ಮನೇಲಿ ಲೇಡಿಸ್ ಮಾಡೋ ಕೆಲಸವನ್ನೆಲ್ಲಾ ನಾನೇ ಮಾಡ್ತೀನಲ್ಲ!"

ಮೈಸೂರು ಮಿತ್ರ

ಭಾನುವಾರ, 29 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನತದೃಷ್ಟನಾದವನ ಮುಂದೆ ನಿನ್ನ ಅದೃಷ್ಟದ ಬಗ್ಗೆ ಕೊಚ್ಚಿಕೊಳ್ಳಬೇಡ.

–ಪ್ಲೂಟಾರ್ಕ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅರಗು ಬಂಗಾರ ತಿಂತು ಕೊರಗು ತನ್ನ ತಿಂತು

ನಿಮ್ಮ ಪತ್ರಗಳು

ಸಕಾಲಕ್ಕೆ ಬೀಜ, ಗೊಬ್ಬರ ಪೂರೈಸಿ

ಮಾನ್ಯರೆ,

ರಾಜ್ಯಾದ್ಯಂತ ಉತ್ತಮ ಮಳೆಯಾಗಿದ್ದು, ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳು ಗರಿಗೆದರಿವೆ. ರೈತರು ಭೂಮಿ ಹದಗೊಳಿಸಲು ಉಳುಮೆ ಮಾಡುತ್ತಿದ್ದಾರೆ. ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳನ್ನು ಖರೀದಿಸಲು ಮಳಿಗೆಗಳ ಮುಂದೆ ರೈತರು ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ಆದರೆ ರಾಜ್ಯದ ಅನೇಕ ಕಡೆ ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕದ ಪೂರೈಕೆ ಇನ್ನೂ ಆರಂಭವಾಗಿಲ್ಲ. ಮಾರಾಟಗಾರರು ಗೊಬ್ಬರವನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡಲು ಕೃತಕ ಅಭಾವ ಸೃಷ್ಟಿಸಿ ಹೆಚ್ಚಿನ ದರಕ್ಕೆ ಕದ್ದು ಮುಚ್ಚಿ ಮಾರಾಟ ಮಾಡುತ್ತಿದ್ದಾರೆ. ಅವಧಿ ಮುಗಿದ ಕ್ರಿಮಿನಾಶಕಗಳನ್ನು ಮಾರುತ್ತಿದ್ದಾರೆ ಎಂಬ ದೂರುಗಳು ಕೇಳಿಬರುತ್ತಿವೆ. ಕಳಪೆ ಬಿತ್ತನೆ ಬೀಜದ ಹಾವಳಿ ಈ ವರ್ಷವೂ ಮುಂದುವರಿದಿದೆ. ಕಳೆದ ವರ್ಷ ರಾಜ್ಯದ ಅನೇಕ ಭಾಗಗಳಲ್ಲಿ ಕಳಪೆ ಬೀಜ ಬಿತ್ತಿ ಕಂಗಾಲಾದ ರೈತರು, ವರ್ಷವಿಡೀ ಕೊರಗುವಂತಾಯಿತು. ಬಿತ್ತಿದ ಬೀಜ ಮೊಳಕೆಯೊಡೆಯದಿದ್ದರೆ, ರೈತನ ಕುಟುಂಬ ಬೀದಿಗೆ ಬೀಳುವ ಪರಿಸ್ಥಿತಿ ಬರುತ್ತದೆ. ಕಳಪೆ ಬೀಜ ಮಾರಾಟದಿಂದ ರೈತರು ಮೋಸ ಹೋಗಿ, ಇಳುವರಿ ಸಿಗದೆ ಸಾಲದ ಸುಳಿಗೆ ಸಿಕ್ಕಿ ಆತ್ಮಹತ್ಯೆಗೆ ಬಲಿಯಾಗುತ್ತಿದ್ದಾರೆ. ಕೃಷಿ ಇಲಾಖೆ ಅಧಿಕಾರಿಗಳು ಕಳಪೆ ಬಿತ್ತನೆ ಬೀಜ, ಕ್ರಿಮಿನಾಶಕ ಮಾರಾಟ ಮಾಡುವ ಅಂಗಡಿಗಳ ಪರವಾನಗಿ ರದ್ದು ಮಾಡಿ ಸುಮ್ಮನೆ ಕೂರಬಾರದು. ಇಂತಹವುಗಳ ವಿತರಣೆ ಮತ್ತು ಪೂರೈಕೆ ಜಾಲದ ಮೂಲವನ್ನು ಪತ್ತೆ ಹಚ್ಚಬೇಕು. ಇಲ್ಲವಾದರೆ ಪ್ರತಿ ವರ್ಷ ಇದು ಪುನರಾವರ್ತನೆ ಆಗುತ್ತಲೇ ಇರುತ್ತದೆ. ಗೊಬ್ಬರ ಮಾರಾಟ ಮಾಡುವ ವರ್ತಕರು ಅಂಗಡಿಗಳಲ್ಲಿ ದರ ಪಟ್ಟಿ ಹಾಕಿ, ಆ ಪ್ರಕಾರವೇ ಮಾರಾಟ ಮಾಡುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕಿದೆ. ಜತೆಗೆ ಕೃಷಿ ಇಲಾಖೆಯಿಂದ ಸಾವಯವ ಗೊಬ್ಬರವನ್ನು ಸಹಾಯ ಧನದಡಿ ವಿತರಿಸಿ ಸಾವಯವ ಕೃಷಿ ಪ್ರೋತ್ಸಾಹಿಸಬೇಕಿದೆ. ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ರಸಗೊಬ್ಬರ, ಬಿತ್ತನೆ ಬೀಜ, ಕೀಟನಾಶಕಗಳು ರಾಜ್ಯದ ಯಾವುದೇ ಭಾಗದಲ್ಲಿ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಪಾಯಿಂಟ್ ಆಫ್ ಸೇಲ್ (ಪಿಒಎಸ್) ವ್ಯವಸ್ಥೆಯ ಮುಖಾಂತರವೇ ರಸಗೊಬ್ಬರ ವಿತರಣೆಯಾದರೆ ಭೌತಿಕ ದಾಸ್ತಾನು ಹಾಗೂ ಮಾರಾಟ ಇನ್ನಿತರ ಮಾಹಿತಿಗಳು ಪಾರದರ್ಶಕವಾಗಿ ಇರಲಿವೆ.

–ಬೇ.ನ. ಶ್ರೀನಿವಾಸಮೂರ್ತಿ, ಹಿರಿಯ ನಾಗರಿಕರು, ತುಮಕೂರು.

ರಾಜ್ಯ ಸರ್ಕಾರ ವ್ಯಾಟ್ ಕಡಿಮೆ ಮಾಡಲಿ

ಮಾನ್ಯರೆ,

ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಇಳಿಸಿರುವುದು ಸ್ವಾಗತಾರ್ಹ. ದೇಶದಲ್ಲಿ ಮಹಾರಾಷ್ಟ್ರ, ಕೇರಳ, ಒಡಿಸ್ಸಾ ಹಾಗೂ ರಾಜಸ್ಥಾನ ರಾಜ್ಯಗಳು ವ್ಯಾಟ್ ಅನ್ನು ಇಳಿಕೆ ಮಾಡಿವೆ. ಕರ್ನಾಟಕ ಸರ್ಕಾರವು ಈ ಬಗ್ಗೆ ಯಾವುದೇ ಚರ್ಚೆ ನಡೆಸಿಲ್ಲ. ಆದಷ್ಟು ಬೇಗ ಈ ನಿಟ್ಟಿನಲ್ಲಿ ಯೋಚಿಸಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ವ್ಯಾಟ್ ಅನ್ನು ಕಡಿಮೆ ಮಾಡಿ ಬಡ ಹಾಗೂ ಮಧ್ಯಮ ವರ್ಗದ ಜನರ ಸಂಕಷ್ಟವನ್ನು ಪರಿಹರಿಸಬೇಕಿದೆ.

–ಚನ್ನಕೇಶವ ಜಿ., ತರೀಕೆರೆ

ಶಿಶುಪಾಲನಾ ರಜೆ ಎಂಬ ಅಸಂಬದ್ಧ ರಜೆ

ಮಾನ್ಯರೆ,

ರಾಜ್ಯ ಸರ್ಕಾರದ ಹಲವಾರು ರಜೆಗಳ ಮಧ್ಯೆ ಇದೀಗ ಸದ್ದು ಗದ್ದಲವಿಲ್ಲದೇ 2020 ರಿಂದ ಅನ್ವಯವಾಗುವಂತೆ ಹೊಸ ನಮೂನೆಯ ರಜೆಯೊಂದನ್ನು ನೌಕರರಿಗೆ ಮಂಜೂರು ಮಾಡಿದೆ. ಅದರ ಹೆಸರು 'ಶಿಶುಪಾಲನಾ ರಜೆ'. ಈ ರಜೆಯನ್ನು 180 ದಿನಗಳವರೆಗೂ ವೇತನ ಸಹಿತ ಪಡೆಯಲು ಅವಕಾಶವಿದೆ. ಈ ರಜೆಯನ್ನು, ನೌಕರರ ಮಕ್ಕಳು 18 ವಯಸ್ಸು ತುಂಬುವವರೆಗೂ ನೀಡಬಹುದಾಗಿದೆ. ರಜೆಗೆ ಮಕ್ಕಳ ದಾಖಲಾತಿಗಳ್ಯಾವುದೂ ಬೇಕಾಗಿಲ್ಲ. ದತ್ತು ಪಡೆದವರೂ, ಹೆತ್ತವರಿಗಿಂತಲೂ ಹೆಚ್ಚಾಗಿ ಈ ರಜೆಯನ್ನು ಅನುಭವಿಸಬಹುದಾಗಿದೆ. ಈಗಾಗಲೇ ಕೆಲವು ಸರ್ಕಾರಿ ಕಚೇರಿಗಳಲ್ಲಿ ಮಕ್ಕಳಿಗೆ 14 ರಿಂದ 16 ವಯಸ್ಸಾಗಿದ್ದರೂ, ದತ್ತು ತೆಗೆದುಕೊಂಡವರೂ ಈ ರಜೆಯನ್ನು ಉಪಯೋಗಿಸಿದ್ದಾರೆ/ಉಪಯೋಗಿಸುತ್ತಿದ್ದಾರೆ. ಸರ್ಕಾರ ಇದರ ಬದಲಿಗೆ ನೌಕರರ ಮಕ್ಕಳು ಹೆರಿಗೆಗೆಂದು ತವರಿಗೆ ಬಂದಾಗ, ಬಾಣಂತನಕ್ಕೆಂದು ಮಹಿಳಾ ನೌಕರರಿಗೆ ಪ್ರಸವದ ನಂತರ ಗರಿಷ್ಠ ಮೂರು ತಿಂಗಳ ಅವಧಿಗೆ, ಸೂಕ್ತ ದಾಖಲಾತಿಗಳ ಸಲ್ಲಿಕೆ ಮೇರೆಗೆ ನೀಡಲು ಚಿಂತಿಸಬಹುದಾಗಿತ್ತು. ಅದು ಬಿಟ್ಟು, ಈ ರೀತಿಯ ಅಪ್ರಬುದ್ಧ, ಅಸಮಂಜಸ ರಜೆಯಿಂದಾಗಿ ಹಲವಾರು ನೌಕರರು ವಯಸ್ಸು ಐವತ್ತು ದಾಟಿದ್ದರೂ ಮಕ್ಕಳು 16 ಅಥವಾ 17 ವಯಸ್ಸಿದ್ದರೂ ಶಿಶುಪಾಲನಾ ರಜೆ ಎಂಬ ರಜೆಯನ್ನು ಪಡೆಯುತ್ತಿರುವುದು ವಿಪರ್ಯಾಸವಲ್ಲವೇ? ಒಟ್ಟಾರೆ ಕಂಸನ ರಾಜ್ಯದಲ್ಲಿ ಈ ಶಿಶುಪಾಲನ ರಜೆ ಎಷ್ಟರಮಟ್ಟಿಗೆ ಸರಿ ಎಂಬುದು ಸಾರ್ವಜನಿಕರ ವಿವೇಚನೆಗೆ ಬಿಟ್ಟ ವಿಚಾರ.

–ವಿಜಯ್ ಹೆಮ್ಮಿಗೆ, ಮೈಸೂರು

ಆರೋಗ್ಯ ಕೇಂದ್ರದಲ್ಲಿ ಎಲ್ಲಕ್ಕೂ ಲಂಚ... ಲಂಚ...

ಮಾನ್ಯರೆ,

ಮೈಸೂರಿನ ಜಯನಗರ 2ನೇ ಮುಖ್ಯ ರಸ್ತೆಯಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹಾಲಿಗೂ ಲಂಚ, ಬ್ರೆಡ್‌ಗೂ ಲಂಚ, ಊಟಕ್ಕೂ ಲಂಚ, ಟ್ರೀಟ್‌ಮೆಂಟ್‌ಗೂ ಲಂಚ, ಗಂಡು ಮಗುವೋ, ಹೆಣ್ಣು ಮಗುವೋ ಎಂದು ಹೇಳಲು ಲಂಚ, ಮೆಡಿಕಲ್ ಸರ್ಟಿಫಿಕೇಟ್‌ಗೂ ಲಂಚ, ಡಾಕ್ಟರ್, ನರ್ಸ್, ಲ್ಯಾಬ್ ಟೆಕ್ನಿಷಿಯನ್, ಗ್ರೂಪ್ ಡಿ ನೌಕರರು, ಆಯಾ ಸೇರಿ ಎಲ್ಲರಿಗೂ ಲಂಚ ಕೊಡಲೇಬೇಕು. ಬಡವರಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿದೆ. ಲೇಬರ್ ವಾರ್ಡ್ ಇದ್ದು ಹೆರಿಗೆ ಮಾಡಿಸಲು ಮಕ್ಕಳಿಗೆ ಆರೈಕೆ ಮೆಡಿಸಿನ್ ಸೇರಿ ಎಲ್ಲದಕ್ಕೂ ಲಂಚ ಕೊಡಲೇಬೇಕು. ಇಲ್ಲದಿದ್ದರೆ ತಾತ್ಸಾರ ಮಾಡೋದು, ಬೈಯ್ಯುವುದು ಮಾಡುತ್ತಾರೆ. ರೋಗಿಗಳನ್ನು ನಿಕೃಷ್ಟರಾಗಿ ಕಾಣುತ್ತಾರೆ. ಇದರ ಬಗ್ಗೆ ಸಂಬಂಧಪಟ್ಟ ಆರೋಗ್ಯಾಧಿಕಾರಿಗಳು, ತಾಲೂಕು ಆರೋಗ್ಯಾಧಿಕಾರಿಗಳು ಗಮನಹರಿಸಲಿ.

– ಜಿ. ನಾಗೇಂದ್ರ ಶರ್ಮ, ಆರೋಗ್ಯ ಸ್ವಯಂ ಸೇವಕರು, ಕುವೆಂಪುನಗರ, ಮೈಸೂರು.

ದೀಪ ಬೆಳಗಿಸಿ ವಿಷಜಂತುಗಳಿಂದ ಕಾಪಾಡಿ

ಮಾನ್ಯರೆ,

ಮೈಸೂರಿನ ಶ್ರೀರಾಂಪುರಕ್ಕೆ ಹೊಂದಿಕೊಂಡಂತಿರುವ ಕಂದಾಯ ನಗರ 3ನೇ ಹಂತ ಬಡಾವಣೆಯಲ್ಲಿ ಬೀದಿದೀಪಗಳಿಲ್ಲದೆ ಹಲವು ತಿಂಗಳುಗಳೇ ಆಯಿತು. ಸಂಜೆ ಆಯಿತೆಂದರೆ ನಾನಾ ರೀತಿಯ ವಿಷಜಂತುಗಳು ರಸ್ತೆಯಲ್ಲಿ ಹರಿದಾಡುತ್ತವೆ. ಮಹಿಳೆಯರು, ಮಕ್ಕಳು ಹಾಗೂ ವಯೋವೃದ್ಧರು ಆತಂಕದಲ್ಲೇ ಓಡಾಡುವಂತಾಗಿದೆ. ಲಿಂಗಾಂಬುದಿ ಕೆರೆಗೆ ಹೊಂದಿಕೊಂಡಂತಿರುವುದರಿಂದ ಹಾವು, ಚೇಳುಗಳ ಹಾವಳಿ ಸರ್ವೆ ಸಾಮಾನ್ಯವಾಗಿದೆ. ಸಂಬಂಧಿಸಿದವರು ಕೂಡಲೇ ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕಾಗಿ ಮನವಿ.

– ಎನ್. ವೆಂಕಟಚಲುವಪ್ಪ, ಕಂದಾಯನಗರ, ಮೈಸೂರು.

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ನಗುವುದೋ, ಅಳುವುದೋ ನೀವೇ ಹೇಳಿ !!!

ಈ ವರ್ಷದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗಿದೆ. ರಾಜ್ಯದಲ್ಲಿ ಶೇ.85.63 ರಷ್ಟು ಫಲಿತಾಂಶ ಬಂದಿದೆ. ಈ ಪೈಕಿ ಬಾಲಕಿಯರು ಶೇ.90.29 ರಷ್ಟು ಸಾಧನೆ ಮಾಡಿದ್ದರೆ, ಬಾಲಕರ ಸಾಧನೆ ಶೇ.81.30 ರಷ್ಟಿದೆ. ಬಾಲಕಿಯರ ಸಾಧನೆ ಗಮನಿಸದೆ, ಬಾಲಕರ ಸಾಧನೆಯನ್ನೇ ನೋಡಿದರೆ ಅದೂ ಉತ್ತಮವಾಗಿಯೇ ಇದೆ. ಇದರ ಜೊತೆಗೆ ಮತ್ತೊಂದು ಹೋಲಿಕೆ ಎಂದರೆ ಈ ವರ್ಷ ಸರ್ಕಾರಿ ಶಾಲೆಗಳಿಗೆ ಶೇ.88 ಫಲಿತಾಂಶ ಬಂದಿದ್ದರೆ, ಅನುದಾನಿತ ಶಾಲೆಗಳಿಗೆ ಶೇ.87.84 ರಷ್ಟು, ಹಾಗೂ ಅನುದಾನರಹಿತ ಶಾಲೆಗಳಲ್ಲಿ ಶೇ. 92.29 ರಷ್ಟು ಫಲಿತಾಂಶ ಬಂದಿದೆ. ಇದೊಂದು ರೀತಿ ಬಂಪರ್ ಪ್ರಗತಿ. ಇಷ್ಟಾಗಿಯೂ ಒಂದಷ್ಟು ಮಕ್ಕಳು ಉತ್ತೀರ್ಣರಾಗದಿರುವುದನ್ನು ಕಂಡಾಗ ಬೇಸರವಾಗುತ್ತದೆ. ಇಂತಹವರನ್ನೂ ಪಾಸು ಮಾಡಿ ಶೇಕಡಾ ನೂರು ಫಲಿತಾಂಶ ಬಂದಿದೆ ಎಂದಿದ್ದರೆ ಬಹುಶಃ ಅದು ವಿಶ್ವ ದಾಖಲೆಯಾಗುತ್ತಿತ್ತು. ಫಲಿತಾಂಶ ಪ್ರಕಟವಾಗುವ ಕೆಲವು ದಿನಗಳ ಮುಂಚೆ ಶಿಕ್ಷಣ ಸಚಿವರಿಗೆ ಈ ವಿಷಯ ಗೊತ್ತಾಗಿದ್ದರೆ, ಈ ವಿಶ್ವ ದಾಖಲೆ ಮಾಡಿಬಿಡುತ್ತಿದ್ದರು ಎನಿಸುತ್ತದೆ. ಕೇವಲ ಶೇ. 14 ರಷ್ಟು ಮಕ್ಕಳು ಮಾತ್ರ ನಪಾಸಾಗಿದ್ದಾರೆ. ಮತ್ತೊಂದಷ್ಟು ಗ್ರೇಸ್ ಮಾರ್ಕ್ ನೀಡಿದ್ದರೆ ಅವರೂ ಉತ್ತೀರ್ಣರಾಗುತ್ತಿದ್ದರೋ ಏನೋ?

ಈ ಹಿಂದಿನ ಕೆಲವೇ ವರ್ಷಗಳ ಹಿಂದೆ ನಾವು ಗಮನಿಸಿದ್ದಂತೆ 625 ಕ್ಕೆ 600–610 ಅಂಕ ಗಳಿಸುವುದು ಸುಲಭವಾಗಿರಲಿಲ್ಲ. ಮೊದಲ ರ‍್ಯಾಂಕ್ ಎಂದರೆ ಇಷ್ಟು ಅಂಕ ಗಳಿಸಬೇಕಾಗುತ್ತಿತ್ತು. ಆ ರೀತಿ ಅಂಕಪಡೆದು ಪ್ರಥಮ ರ‍್ಯಾಂಕ್ ಗಳಿಸುತ್ತಿದ್ದವರು ಒಬ್ಬರೋ, ಇಬ್ಬರೋ ಆಗಿರುತ್ತಿದ್ದರು. ಆದರೆ ಈ ವರ್ಷ 625 ಕ್ಕೆ 625 ಅಂಕ ಪಡೆದವರ ಸಂಖ್ಯೆ 145. (625 ಕ್ಕಿಂತ ಹೆಚ್ಚು ಅಂಕ ಕೊಡಲಾಗದ್ದರಿಂದ ಅಷ್ಟಕ್ಕೇ ನಿಲ್ಲಿಸಲಾಗಿದೆ ಎಂಬಂತೆ ಕಂಡುಬರುತ್ತದೆ!!). ಈ ಹಿಂದೆ ಮೊದಲ ರ‍್ಯಾಂಕ್ ಕೇವಲ ಒಬ್ಬರಿಗೆ ಅಥವಾ ಇಬ್ಬರಿಗೆ ಮಾತ್ರ ಸಲ್ಲುತ್ತಿತ್ತು. ಆದರೆ ಈ ವರ್ಷ ಮೊದಲ ರ‍್ಯಾಂಕ್ ಪಡೆದವರು 145 ಜನ. (ಈಗಲೂ ಹತ್ತಿರ ಹತ್ತಿರ ಅಂಕ ಪಡೆದವರು ಮರು ಎಣಿಕೆಗೆ ಒತ್ತಾಯಿಸಿದರೆ ಈ ಸಂಖ್ಯೆ ಮತ್ತಷ್ಟು ಏರಬಹುದು) ಎರಡನೇ ರ‍್ಯಾಂಕ್ ಸಾಮಾನ್ಯವಾಗಿ ಮೊದಲ ರ‍್ಯಾಂಕ್ ಪಡೆದವರಿಗಿಂತ ಹತ್ತಾರು ಅಂಕಗಳಷ್ಟು ಕಡಿಮೆ ಆಗಿರುತ್ತಿತ್ತು ಆದರೆ ಈ ವರ್ಷ 625 ಕ್ಕೆ 624 ಅಂಕ ಪಡೆದವರ ಸಂಖ್ಯೆ 309. ಹಾಗೆಯೇ 620 ಕ್ಕಿಂತ ಹೆಚ್ಚಿನ ಅಂಕ ಪಡೆದವರ ಸಂಖ್ಯೆ ಮೂರು ಸಾವಿರಕ್ಕಿಂತ ಅಧಿಕವಾಗಿದೆ. ಈ ಹಿಂದೆ ಪ್ರಥಮ, ದ್ವಿತೀಯ, ತೃತೀಯ ರ‍್ಯಾಂಕ್ ಪಡೆದವರ ಸಂಪೂರ್ಣ ವಿವರ ಚಿತ್ರ ಸಮೇತ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿತ್ತು. ಆದರೆ ಈ ಸಲ ಹಾಗಾಗಿಲ್ಲ. ಆಯಾ ಜಿಲ್ಲಾ ಪತ್ರಿಕೆಗಳು ಆಯಾ ಜಿಲ್ಲೆಯ 625 ಅಂಕ ಪಡೆದವರ ವಿವರ ಮಾತ್ರ ಪ್ರಕಟಿಸಿವೆ. ಇಡೀ ರಾಜ್ಯದ ವಿವರ ಪ್ರಕಟಿಸಿಲ್ಲ. ಬಹುಶಃ ಹಾಗೆ ಪ್ರಕಟಿಸುವುದಾಗಿದ್ದರೆ ಅದಕ್ಕೆ ಪ್ರತ್ಯೇಕ ಪುರವಣಿ ತರಬೇಕಾಗುತ್ತಿತ್ತೇನೋ?

ಇನ್ನು ಸದ್ಯದಲ್ಲೇ ಪಿಯುಸಿ ಫಲಿತಾಂಶ ಪ್ರಕಟವಾಗುತ್ತದೆ. ಅದೂ ವಿಶ್ವದಾಖಲೆ ನಿರ್ಮಿಸಬಹುದೋ ಏನೋ? ಎಂಬ ಬಗ್ಗೆ ಕಾದು ನೋಡಬೇಕಾಗಿದೆ. ಒಟ್ಟಿನಲ್ಲಿ ನಮ್ಮ ರಾಜ್ಯ ಅತೀ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿಗಳಿರುವ ರಾಜ್ಯವಾಗಿ ಕಂಗೊಳಿಸಿದೆ.

ಈ ಬಗ್ಗೆ ಇಂದು ಎಲ್ಲೆಡೆಯೂ ಟೀಕೆಗಳು ವ್ಯಕ್ತವಾಗುತ್ತಿವೆ. ಎಲ್ಲಾ ವಿಷಯಗಳಲ್ಲೂ ಶೇಕಡಾ ನೂರಕ್ಕೆ ನೂರು ಅಂಕ ಗಳಿಸಲು ಹೇಗೆ ಸಾಧ್ಯ? ಕೆಲವು ವಿಷಯಗಳಲ್ಲಿ ಮಾತ್ರ ಇದು ಸಾಧ್ಯವಾಗಬಹುದು. ಗಣಿತ, ವಿಜ್ಞಾನದಲ್ಲಿ ಆಗಬಹುದಾದರೂ, ಭಾಷಾ ವಿಷಯವೂ ಸೇರಿ ಪೂರ್ಣ ಅಂಕ ಪಡೆದಿರುವುದು ಆಶ್ಚರ್ಯ ಉಂಟು ಮಾಡುತ್ತಿದೆ. ಈ ವರ್ಷ ಹೀಗಾದರೆ ಮುಂದಿನ ವರ್ಷ ಎಂತಹ ಫಲಿತಾಂಶ ಬರಬಹುದು? ಎಂಬ ಬಗ್ಗೆ ಊಹಾಪೋಹಕ್ಕೆ ಎಡೆಮಾಡಿಕೊಟ್ಟಿದೆ. (ಈ ಫಲಿತಾಂಶ ಕಂಡ ಒಬ್ಬರು ಉದ್ಗರಿಸಿದ್ದು ಎಂದರೆ, ಬಹುಶಃ ಈ ವಿದ್ಯಾರ್ಥಿಗಳ



ಶಿಕ್ಷಕರಿಗೆ ಇದೇ ಪರೀಕ್ಷಾ ಪ್ರಶ್ನೆ ಪತ್ರಿಕೆ ನೀಡಿ, ಪರೀಕ್ಷೆ ನಡೆಸಿ, ಅವುಗಳ ಮೌಲ್ಯಮಾಪನ ಮಾಡಿದ್ದರೆ ಅವರು ಖಂಡಿತಾ ನೂರಕ್ಕೆ ನೂರು ಅಂಕ ಪಡೆಯುತ್ತಿರಲಿಲ್ಲ. ಹಾಗಾಗಿ ಇಂದು ಶಿಕ್ಷಕರಿಗಿಂತ ಮಕ್ಕಳೇ ಹೆಚ್ಚು ಬುದ್ಧಿವಂತರಾಗಿದ್ದಾರೆ!! ಎಂದು)

ಈ ವರ್ಷದ ಫಲಿತಾಂಶ ಎಲ್ಲರ ಹುಬ್ಬೇರಿಸುವಂತೆ ಮಾಡಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ. ಕೆಲವರು ಇದು ನಿಜಕ್ಕೂ ಸಾಧನೆಯೇ. ಜ್ಞಾನದಿಂದ ಪಡೆದಿರಲಿ, ಅಥವಾ ಕಂಠಪಾಠ ಮಾಡಿರಲಿ ಎಲ್ಲದಕ್ಕೂ ಪ್ರಯತ್ನ ಬೇಕು. ಆದ್ದರಿಂದ ಮಕ್ಕಳಿಗೆ ಶುಭಾಶಯ ಹೇಳಬೇಕು ಎಂದು ಮಾರ್ಮಿಕವಾಗಿ ಟೀಕಿಸಿದ್ದಾರೆ. ಜೊತೆಗೆ ಪಾಲಕರಾಗಿ ನಾವು ಈ ಹಂತದಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಓರೆಗೆ ಹಚ್ಚಿ ನೋಡುವ ಸಮಯವೂ ಬಂದಿದೆ ಎಂದು ಹೇಳಿದ್ದಾರೆ. ನಿಜ, ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದು ಉತ್ತಮ ಅಂಕ ಗಳಿಸಿದ ಮಕ್ಕಳ ಪೋಷಕರಿಗೆ ಈಗ ಟೀಕೆಗಳು ಇಷ್ಟವಾಗುವುದಿಲ್ಲ. ಬೇಕೆಂದೇ ಟೀಕೆ ಮಾಡುತ್ತಿದ್ದಾರೆ ಎನಿಸಬಹುದು. ಏಕೆಂದರೆ ಹೇಗೋ ಮಕ್ಕಳು ಉತ್ತಮ ಅಂಕ ಗಳಿಸುವುದಷ್ಟೇ ನಮಗೆ ಮುಖ್ಯವಾಗಿತ್ತು. ಅಂಕ ಬಂದಿದೆ, ನಾವೇಕೆ ಶಿಕ್ಷಣ ವ್ಯವಸ್ಥೆ, ಮೌಲ್ಯಮಾಪನ ವ್ಯವಸ್ಥೆಯನ್ನು ಟೀಕಿಸಬೇಕು? ಎಂದು ಅವರು ಭಾವಿಸುವುದು ಸ್ವಾಭಾವಿಕವಾಗಿದೆ. ಆದರೆ ದೂರದೃಷ್ಟಿ ಇರುವವರು ಹಾಗೆ ಯೋಚಿಸುವುದಿಲ್ಲ. ಕೇವಲ ಹತ್ತಾರು ವರ್ಷಗಳಲ್ಲಿ ಫಲಿತಾಂಶದ ಈ ರೀತಿಯ ಏರಿಕೆ ಪ್ರಮಾಣ ಅವರನ್ನು ಘಾಸಿಗೊಳಿಸುತ್ತಿರುವುದು ಸುಳ್ಳಲ್ಲ.

ಈಗ್ಗೆ 20–30 ವರ್ಷಗಳ ಹಿಂದೆ ಶೇ. 60–65 ಅಂಕ ಗಳಿಸಿದರೆ ರ‍್ಯಾಂಕ್ ದೊರಕುತ್ತಿತ್ತು. ಅದಕ್ಕಿಂತ ಹೆಚ್ಚಿನ ಅಂಕ ಗಳಿಸುವುದು ಸಾಧ್ಯವಿರಲಿಲ್ಲ. ಶೇ. 58–60 ಅಂಕ ಗಳಿಸಿದರೂ ಯಾವುದಾದರೂ ರ‍್ಯಾಂಕ್ ಬರುತ್ತಿತ್ತು. ಆದರೆ ಈಗ ಶೇ. ನೂರಕ್ಕೆ ನೂರು ಅಂಕ ಪಡೆದರೂ ಅವರಿಗೆ ಪ್ರಥಮ ರ‍್ಯಾಂಕ್ ಎಂದು ಹೇಳಲಾಗುವುದಿಲ್ಲ. ಏಕೆಂದರೆ ನೂರಾರು ಜನ ಅಂತಹ ಅಂಕ ಗಳಿಸಿದ್ದಾರೆ. ಈಗಿನ ಅಂಕಗಳನ್ನು ನೋಡಿದರೆ 625 ಕ್ಕೆ 600 ಅಂಕ ಪಡೆದವರಿಗೂ ಅವರು ಇಚ್ಛಿಸುವ ಶಾಲೆಯಲ್ಲಿ ಸೀಟು ದೊರಕಲಾರದು ಎನಿಸುತ್ತದೆ. ಹೀಗಿರುವಾಗ ಈ ವರ್ಷದ ಮೌಲ್ಯಮಾಪನ ಪ್ರಕ್ರಿಯೆ ಕುರಿತು ವಿಮರ್ಶೆ ಮಾಡಬೇಕಾಗುತ್ತದೆ. ಇರಬಹುದು, ಕಳೆದ ವರ್ಷವೂ ಕೊರೊನಾ ಕಾರಣಕ್ಕೆ ಶಾಲೆಗಳು ಸರಿಯಾಗಿ ನಡೆಯದ ಕಾರಣ ಪಾಠ ಪ್ರವಚನಗಳು ಸರಿಯಾಗಿ ಆಗಲಿಲ್ಲ. ಹಾಗಾಗಿ ಈ ವರ್ಷ ಪರೀಕ್ಷೆ ಬರೆದ ಮಕ್ಕಳ ಮೌಲ್ಯಮಾಪನವನ್ನು ಸ್ವಲ್ಪ ಧಾರಾಳವಾಗಿ ಮಾಡಲಾಗಿದೆ ಎಂದು ಸಮರ್ಥಿಸಿಕೊಳ್ಳಬಹುದು. ಆದರೆ ಈ ವರ್ಷದ ಫಲಿತಾಂಶದಂತೆ ಗರಿಷ್ಠ ಅಂಕ ಪಡೆದವರು ಮುಂದೆ ಹೇಗೆ ವಿದ್ಯಾಭ್ಯಾಸ ಮಾಡಬಹುದು? ಎಂಬುದು, ಮುಂದೆ ಖಡಕ್ಕಾಗಿ ಪರೀಕ್ಷೆ ನಡೆಸಿ ಮೌಲ್ಯಮಾಪನ ಮಾಡಿದಾಗ ಈ ವಿದ್ಯಾರ್ಥಿಗಳು ಆಗಲೂ ಅಷ್ಟೇ ಅಂಕ ಗಳಿಸಬಲ್ಲರೇ? ಎಂಬುದು. ಇಲ್ಲಿ ಮಕ್ಕಳ ಮಾನಸಿಕ ಸ್ಥಿತಿ ಮುಂದೆ ಹೇಗಾಗಬಹುದು ಎಂಬ ಬಗ್ಗೆ ಯೋಚಿಸದಿರುವುದು ವಿಷಾದವೆನಿಸುತ್ತದೆ.

ಈ ವರ್ಷ ಪಾಸಾದ ಎಲ್ಲಾ ಮಕ್ಕಳಿಗೂ ಪಿಯುಸಿ ಶಿಕ್ಷಣ ನೀಡುವಷ್ಟು ಪದವಿಪೂರ್ವ ಕಾಲೇಜುಗಳಿವೆಯೇ? ಅಷ್ಟು ಸೀಟುಗಳಿವೆಯೇ? ಹೆಚ್ಚಿನ ಅಂಕ ಗಳಿಸಿದವರಿಗೆ ಎಲ್ಲ ಕಾಲೇಜುಗಳೂ ಆದ್ಯತೆಯ ಮೇರೆಗೆ ಪ್ರವೇಶ ನೀಡುತ್ತವೆ. ಆಗ ಶೇ. 90 ಅಥವಾ ಅದಕ್ಕಿಂತ ಹೆಚ್ಚಿನ ಅಂಕ ಪಡೆದ ಮಕ್ಕಳಿಗೆ ಅವರು ಅಪೇಕ್ಷಿಸುವ ಕಾಲೇಜಿನಲ್ಲಿ, ಅವರು ಇಚ್ಛಿಸುವ ಐಚ್ಛಿಕ ವಿಷಯಗಳಲ್ಲಿ ಪ್ರವೇಶ ಸಿಗದಿರಬಹುದು. ಹಾಗಾದರೆ ಶೇ. 90 ಅಂಕ ಗಳಿಸಿದ ಮಕ್ಕಳು ದಡ್ಡರು ಎಂದು ಪರಿಗಣಿಸಬಹುದೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಈ ಹಿಂದೆ 1967ರಲ್ಲಿ ಪ್ರೀಯೂನಿವರ್ಸಿಟಿ (ಆಗ ಒಂದು ವರ್ಷದ ಪಿಯುಸಿ ಇತ್ತು) ಅತೀ ಹೆಚ್ಚಿನ ವಿದ್ಯಾರ್ಥಿಗಳು ಪಾಸಾಗಿದ್ದರು. (ಒಂದು ರೀತಿ ಈಗಿನಂತೆ). ಆ ವಿದ್ಯಾರ್ಥಿಗಳು ಮುಂದಿನ ಶಿಕ್ಷಣಕ್ಕೆ ಅಂದರೆ ಬಿ.ಎ, ಬಿ.ಎಸ್ಸಿ, ಬಿ.ಕಾಂ ಮಾಡಲು ಕಾತುರರಾಗಿದ್ದರು. ಆದರೆ ಎಲ್ಲ ಪಾಸಾದವರಿಗೂ ಆಗಿನ ಸ್ಥಿತಿಯಲ್ಲಿ ಸೀಟು ಸಿಗುವುದು ಸಾಧ್ಯವಿರಲಿಲ್ಲ. ಆಗ ಸರ್ಕಾರ ಇಕ್ಕಟ್ಟಿಗೆ ಸಿಲುಕಿತ್ತು. ಆಗಿನ ಶಿಕ್ಷಣ ಸಚಿವರಾಗಿದ್ದ ಶಂಕರೇಗೌಡರು ಈ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡುತ್ತಾ ಆಗ ಇದ್ದ ರಾಜ್ಯದ ನಾಲ್ಕು ವಿಶ್ವವಿದ್ಯಾನಿಲಯಗಳಲ್ಲಿ ಹೊಸದಾಗಿ ಕಾಲೇಜು ತೆರೆಯಲು ವಿಶೇಷ ಏರ್ಪಾಡು ಮಾಡುತ್ತಿರುವುದಾಗಿಯೂ, ಸರ್ಕಾರಿ ಕಾಲೇಜುಗಳಲ್ಲಿ ಹೆಚ್ಚಿನ ತರಗತಿಗಳನ್ನು ತೆರೆಯಲು ಸೂಚನೆ ನೀಡಿರುವುದಾಗಿಯೂ ಹೇಳಿದ್ದರು. ಆಗ ರಾಜ್ಯದ ಪದವಿ ತರಗತಿಗಳಲ್ಲಿ ಒಟ್ಟು 30 ಸಾವಿರ ಸ್ಥಾನಗಳು ಮಾತ್ರ ಇದ್ದವು. ಇದರಿಂದಾಗಿ ಆ ವರ್ಷ ವಿದ್ಯಾರ್ಥಿಗಳು ಕಾಲೇಜು ಪ್ರವೇಶ ಪಡೆಯಲು ಪಡಬಾರದ ಕಷ್ಟ ಪಡಬೇಕಾಯಿತು. ಹೆಚ್ಚಿನ ತರಗತಿ ತೆರೆಯಬಹುದಾದರೂ ಅದಕ್ಕೆ ಪಾಠ ಮಾಡುವ ಶಿಕ್ಷಕರು, ಪ್ರಯೋಗ ಶಾಲೆ, ಶಾಲಾ ಕೊಠಡಿಗಳ ಕೊರತೆ ಇತ್ತು. ಅಂತಹ ಪರಿಸ್ಥಿತಿ ಈಗ ಮರುಕಳಿಸಿದಂತೆ ಕಂಡುಬರುತ್ತಿದೆ.

ಇದೀಗ ರಾಜ್ಯ ಸರ್ಕಾರವು ತನ್ನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಪ್ರಕಟಿಸಿದೆ. ಆದರೆ ಇನ್ನೂ ಕೇಂದ್ರದ ಸಿಬಿಎಸ್‌ಸಿ, ಐಸಿಎಸ್ಸಿ ಫಲಿತಾಂಶಗಳು ಪ್ರಕಟವಾಗಿಲ್ಲ. ಒಂದು ವೇಳೆ ಅಲ್ಲಿ ಮಕ್ಕಳ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಬಿಗಿಯಾಗಿ ಮಾಡಿ ಫಲಿತಾಂಶ ನೀಡಿದರೆ, ಆ ಮಕ್ಕಳು ರಾಜ್ಯ ಸರ್ಕಾರದ ಫಲಿತಾಂಶದಂತೆ ಹೆಚ್ಚಿನ ಅಂಕ ಗಳಿಸದಿದ್ದರೆ, ಅವರು ಪಿಯುಸಿಗೆ ಹೇಗೆ ದಾಖಲಾಗುತ್ತಾರೆ? ಅಲ್ಲಿ ಗರಿಷ್ಠ ಶೇ. 90–92 ಅಂಕ ಗಳಿಸಿದವರಿಗೆ ಅವರು ಬಯಸಿದ ಪದವಿ ಪೂರ್ವ ಕಾಲೇಜುಗಳಲ್ಲಿ ಸೀಟು ಸಿಗದಿರಬಹುದು. ಅಂತಹ ಮಕ್ಕಳ ಮನಸ್ಥಿತಿ ಏನಾಗಬಹುದು? ಪ್ರತಿ ಶಾಲೆಯಲ್ಲಿ ಅಂತಹ ಮಕ್ಕಳಿಗೆ ಸ್ಥಾನ ನಿಗದಿಪಡಿಸದಿದ್ದರೆ, ಆ ಮಕ್ಕಳಿಗೆ ಅನ್ಯಾಯವಾಗುವುದಿಲ್ಲವೇ?

ಈ ಬಗ್ಗೆ ಯೋಚಿಸದೇ ಈ ವರ್ಷದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಿಸಿದಂತೆ ಕಂಡುಬರುತ್ತದೆ. ಈಗ ಬಂದಿರುವ ಫಲಿತಾಂಶದಂತೆ (ಶೇ. 86) ಎಲ್ಲಾ ಮಕ್ಕಳೂ ಪಿಯುಸಿ ಸೇರಬೇಕೆಂದರೆ ಸರ್ಕಾರ ಅದಕ್ಕೆ ಯಾವ ಸಿದ್ಧತೆ ಮಾಡಿಕೊಂಡಿದೆ? ಸಿಬಿಎಸ್ಸಿ, ಐಸಿಎಸ್ಸಿ ಫಲಿತಾಂಶ ಬಂದ ನಂತರ ಆ ಮಕ್ಕಳ ದಾಖಲಾತಿ ಹೇಗೆ? ಎಂಬ ಬಗ್ಗೆ ಸರ್ಕಾರ ಯಾವ ಸಿದ್ಧತೆ ಮಾಡಿಕೊಂಡಿದೆ? ಎಂಬುದು ತಿಳಿದುಬಂದಿಲ್ಲ. ಹೆಚ್ಚಿನ ಫಲಿತಾಂಶ ನೀಡುವುದು ತಪ್ಪಲ್ಲ, ಆದರೆ ಆ ಮಕ್ಕಳ ಮುಂದಿನ ಭವಿಷ್ಯ ಏನು? ಎಂಬ ಬಗ್ಗೆ ಯೋಚಿಸದಿದ್ದರೆ ಅದು ಹೊಣೆಗೇಡಿತನವಾಗುತ್ತದೆ. ಈ ಬಗ್ಗೆ ಸರ್ಕಾರ ತಕ್ಷಣ ಅಗತ್ಯ ಸಿದ್ಧತೆ ಮಾಡಿಕೊಳ್ಳುವುದು ಅನಿವಾರ್ಯ ಎನಿಸುತ್ತದೆ.

ಕೆಜಿಎಫ್ ಬಾಬು ಸಂಬಂಧಿ ಮೈಸೂರಿನ ಕಾರ್ಪೊರೇಟರ್ ಮನೆ ಮೇಲೂ ಐಟಿ ದಾಳಿ

ಮೈಸೂರು, ಮೇ 28(ಆರ್‌ಕೆ)– ಡಿ.ಕೆ.ಶಿವಕುಮಾರ್ ಆಪ್ತ, ಬೆಂಗಳೂರಿನ ಕೆಜಿಎಫ್ ಬಾಬು ಮನೆಯ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು (ಐಟಿ) ದಾಳಿ ನಡೆಸಿದ ಬೆನ್ನಲ್ಲೇ ಅವರ ಸಂಬಂಧಿ ಎನ್ನಲಾದ ಮೈಸೂರಿನ ಕಾರ್ಪೊರೇಟರ್ ಮನೆಯ ಮೇಲೂ ಇಂದು ಐಟಿ ಅಧಿಕಾರಿಗಳು ದಾಳಿ ಮಾಡಿ ಆಸ್ತಿಗಳ ದಾಖಲೆ ಪರಿಶೀಲಿಸಿದರು.

ಮೈಸೂರಿನ ಬನ್ನಿ ಮಂಟಪ 'ಎ' ಬಡಾವಣೆಯಲ್ಲಿರುವ ನಗರ ಪಾಲಿಕೆ ಸದಸ್ಯೆ ರೇಷ್ಮಾ ಬಾನು ಹಾಗೂ ಪತಿ ರೆಹಮಾನ್ ಖಾನ್ ದಂಪತಿ ಮನೆಯ ಮೇಲೆ ಮುಂಜಾನೆ 6 ಗಂಟೆಗೆ ದಾಳಿ ಮಾಡಿದ ಐಟಿ ಅಧಿಕಾರಿಗಳು, ಬಾಗಿಲು ಬಂದ್ ಮಾಡಿ, ಆಸ್ತಿ ಪಾಸ್ತಿಯ ದಾಖಲೆ ಪತ್ರಗಳನ್ನು ಪರಿಶೀಲಿಸಿದರು. ದಂಪತಿ ಕೆಜಿಎಫ್ ಬಾಬು ಅವರ ಸಂಬಂಧಿಕರು ಎಂದು ಹೇಳಲಾಗಿದ್ದು, ರಾಜ್ಯಾದ್ಯಂತ ಬಾಬು ಅವರ ಸಂಬಂಧಿಕರು, ಸ್ನೇಹಿತರ ಮನೆ ಮೇಲೂ ಇಂದು ಏಕ ಕಾಲದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ಮಾಡಿ ಪರಿಶೀಲಿಸಿದರು. ಸ್ಥಳೀಯ ಪೊಲೀಸರಿಗೂ ಮಾಹಿತಿ ನೀಡದೇ ಎರಡು ದಿನಗಳ ಹಿಂದೆಯೇ ಮೈಸೂರಿಗೆ ಬಂದು ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದ ಅಧಿಕಾರಿಗಳು, ಬಾತ್ಮೀದಾರರ ಸಹಾಯದಿಂದ ಬಾಬು ಸಂಬಂಧಿ ಕಾರ್ಪೊರೇಟರ್ ಮನೆ ವಿಳಾಸ ಪತ್ತೆ ಮಾಡಿ ಇಂದು ಬೆಳಗ್ಗೆ ಹಠಾತ್ ದಾಳಿ ನಡೆಸಿದರು. ಆದರೆ ಕಾರ್ಯಾಚರಣೆ ವೇಳೆ ಪತ್ತೆಯಾದ ಆಸ್ತಿ, ದಾಖಲೆ, ಆಭರಣಗಳ ಬಗ್ಗೆ ಐಟಿ ಅಧಿಕಾರಿಗಳು ಎಲ್ಲಿಯೂ ಸುಳಿವು ಬಿಟ್ಟುಕೊಟ್ಟಿಲ್ಲ. ದಾಳಿ ವಿಷಯ ಹರಡುತ್ತಿದ್ದಂತೆಯೇ ಬಡಾವಣೆ ನಿವಾಸಿಗಳು, ಹಿತೈಷಿಗಳು, ಸ್ನೇಹಿತರು, ಸಂಬಂಧಿಕರು ಕಾರ್ಪೊರೇಟರ್ ಮನೆ ಬಳಿ ಬಂದರಾದರೂ ಬಾಗಿಲು ಬಂದ್ ಆಗಿದ್ದರಿಂದ ಅಲ್ಲಿಂದ ಹೊರಟುಹೋದರು.

ವೈದ್ಯ ವೃತ್ತಿಯಲ್ಲಿ ನಿರಂತರ ಕಲಿಕೆಯೇ ಯಶಸ್ಸಿನ ರಹಸ್ಯ

- ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಎ.ಶೇಖರ್ ಅಭಿಮತ
- ವೈದ್ಯರ ಅಂತಿಮ ಗುರಿಯೂ ಎಲ್ಲರಿಗೂ ಆರೋಗ್ಯ ಕಲ್ಪಿಸುವುದೇ ಆಗಿದೆ

ಮೈಸೂರು, ಮೇ 28(ಎಂಕೆ)– ವೈದ್ಯ ವೃತ್ತಿ ಜೀವನದಲ್ಲಿ ನಿರಂತರ ಕಲಿಕೆಯೇ ಯಶಸ್ಸಿನ ರಹಸ್ಯವಾಗಿದ್ದು, ವೈದ್ಯರ ಅಂತಿಮ ಗುರಿ ಎಲ್ಲರಿಗೂ ಆರೋಗ್ಯ ಕಲ್ಪಿಸುವುದು ಹಾಗೂ ಎಲ್ಲರ ನೋವಿಗೂ ಸ್ಪಂದಿಸುವುದಾಗಿದೆ ಎಂದು ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ.ಎ.ಶೇಖರ್ ಹೇಳಿದರು.



ನಗರದ ಜೆಕೆ ಮೈದಾನದಲ್ಲಿರುವ ಅಮೃತ ಮಹೋತ್ಸವ ಸಭಾಂಗಣದಲ್ಲಿ ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ 'ವೇಗಸ್–2022(VAGUS-2022)' ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೈದ್ಯರು ಉದಾರತೆ, ಮೌಲ್ಯ, ಸಹಿಷ್ಣುತಾ ಭಾವ, ಛಲ, ಏಕಾಗ್ರತೆ, ಬುದ್ಧಿಮತ್ತೆ ಎಂಬ ಆರು ಸೂತ್ರಗಳ ಅಳವಡಿಸಿಕೊಂಡಿರಬೇಕು. ವೈದ್ಯರ ಅಂತಿಮ ಗುರಿ ಎಲ್ಲರಲ್ಲೂ ಆರೋಗ್ಯ, ಖುಷಿಯನ್ನು ತರುವುದು ಹಾಗೂ ಜನರ ನೋವಿಗೆ ಸ್ಪಂದಿಸುವುದಾಗಿದೆ ಎಂದು ಹೇಳಿದರು.

ನಿಮ್ಮನ್ನು ಗೌರವಿಸುವ, ಪ್ರೀತಿಸುವ ಮತ್ತು ಆರೈಕೆ ಮಾಡುವ ಜನರನ್ನು ಪ್ರೀತಿಯಿಂದ ಕಾಣುವುದನ್ನು ಕಲಿಯಬೇಕು. ಜೀವನದಲ್ಲಿ ಉತ್ತಮ ಸ್ನೇಹಿತ ಬಳಗವನ್ನು ಹೊಂದಿರಬೇಕು. 30 ವರ್ಷದ ಬಳಿಕವೂ ಬಾಲ್ಯದ ಸ್ನೇಹಿತರೊಂದಿಗೆ ಒಡನಾಟ ಹೊಂದಿರಬೇಕು. ಕಷ್ಟದಲ್ಲಿರುವ ಮಿತ್ರನಿಗೆ ಸಹಾಯಹಸ್ತ ಚಾಚಬೇಕು. ಇವುಗಳು ಸದಾ ಕಾಲ ಆನಂದ ಮತ್ತು ಯಶಸ್ಸಿನ ದಾರಿಯಲ್ಲಿ ಸಾಗಲು ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ ಮಾತನಾಡಿ, ಸಾಧನೆಯೊಂದೇ ನಮ್ಮನ್ನು ಪ್ರಪಂಚಕ್ಕೆ ಪರಿಚಯಿಸುವುದು. ನಿರಂತರ ಕಲಿಕೆಯಿಂದ ಸಾಧನೆ ಸಾಕಾರಗೊಳ್ಳುತ್ತದೆ. ಅದೇ ರೀತಿ ಸೋಲು ಗೆಲುವಿನ ಮೆಟ್ಟಿಲಾಗುತ್ತದೆ ಎಂಬುದನ್ನು ಮರೆಯದೆ ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸಿ ಕೊಳ್ಳಬೇಕು. ವೈದ್ಯ ವಿದ್ಯಾರ್ಥಿಗಳು, ಮಾನವೀಯ ಗುಣಗಳನ್ನೊಳಗೊಂಡ ಪರಿಪೂರ್ಣ ವೈದ್ಯರಾಗಿ ಸೇವೆ ಸಲ್ಲಿಸಬೇಕು ಎಂದು ಕಿವಿಮಾತು ಹೇಳಿದರು.

ಇದಕ್ಕೂ ಮುನ್ನ ನಡೆದ ಕಾರ್ಯಾಗಾರದಲ್ಲಿ ವಿವಿಧ ವೈದ್ಯಕೀಯ ಕಾಲೇಜುಗಳಿಂದ ಸುಮಾರು 800 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಿಗ್ಮಾ ಆಸ್ಪತ್ರೆಯ ಸರ್ಜನ್ ಡಾ.ಜಿ.ಸಿದ್ದೇಶ್, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಹೆಚ್.ಎನ್.ದಿನೇಶ್, ಡಾ.ಶುಭ್ರತಾ ಎಸ್.ಹೆಗಡೆ, ಕಾಲೇಜಿನ ವಿದ್ಯಾರ್ಥಿ ಸಂಘದ ಎಂ.ಒ.ಸುಶ್ಮಿತಾ, ವಿ.ಅರ್ಜುನ್, ಸುಮಂತ್ ಚಂದ್ರ ಮೌಳಿ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ನಾಯಕ ಕೆಜಿಎಫ್ ಬಾಬು ಮನೆ ಮೇಲೆ ಐಟಿ ದಾಳಿ

ಬೆಂಗಳೂರು: ಬೆಂಗಳೂರಿನಲ್ಲಿ ಬೆಳ್ಳಂಬೆಳಗ್ಗೆಯೇ ಆದಾಯ ತೆರಿಗೆ ಅಧಿಕಾರಿಗಳು ಭರ್ಜರಿ ದಾಳಿ ನಡೆಸಿದ್ದಾರೆ. ಕಾಂಗ್ರೆಸ್ ಪಕ್ಷದೊಂದಿಗೆ ಗುರುತಿಸಿಕೊಂಡಿದ್ದ ಉದ್ಯಮಿ ಯೂಸುಫ್ ಶರೀಫ್ ಅಲಿಯಾಸ್ ಕೆಜಿಎಫ್ ಬಾಬು ನಿವಾಸಗಳ ಮೇಲೆ ಐಟಿ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಬೆಂಗಳೂರಿನ ವಸಂತನಗರದಲ್ಲಿರುವ ಬಾಬು ನಿವಾಸಕ್ಕೆ ದಾಳಿ ನಡೆಸಿದ ಐಟಿ ಅಧಿಕಾರಿಗಳು ಮಹತ್ವದ ದಾಖಲೆ ಪತ್ರಗಳ ಪರಿಶೀಲನೆ ನಡೆಸಿದ್ದಾರೆ. ಅತ್ತ ಕೆಜಿಎಫ್ ಬಾಬುಗೆ ಸೇರಿದ ಕಚೇರಿಗಳಲ್ಲೂ ಪರಿಶೀಲನೆ ನಡೆಯುತ್ತಿದೆ.



ಬೆಳಗ್ಗೆಯೇ 6 ಕಾರುಗಳಲ್ಲಿ 3 ತಂಡವಾಗಿ ಬಂದಿರುವ ಸುಮಾರು 20ಕ್ಕೂ ಹೆಚ್ಚು ಅಧಿಕಾರಿಗಳು ಉದ್ಯಮಿ ಕೆಜಿಎಫ್ ಬಾಬು ನಿವಾಸ ಹಾಗೂ ಕಚೇರಿಗಳಲ್ಲಿ ದಾಳಿ ನಡೆಸಿದ್ದಾರೆ. ಪೊಲೀಸ್ ಹಾಗೂ ಸಿಆರ್‌ಪಿಎಫ್ ಭದ್ರತಾ ಸಿಬ್ಬಂದಿಯೊಂದಿಗೆ ದಾಳಿ ನಡೆಸಿರುವ ಐಟಿ ಅಧಿಕಾರಿಗಳು, ಬಾಬು ಅವರ ಆದಾಯ, ವ್ಯವಹಾರಕ್ಕೆ ಸಂಬಂಧಿಸಿದಂತೆ ಕಡತಗಳ ಪರಿಶೀಲನೆ ನಡೆಸಿದ್ದಾರೆ. ಆದಾಯ ತೆರಿಗೆಯಲ್ಲಿ ವ್ಯತ್ಯಯ ಶಂಕೆ ಹಿನ್ನಲೆಯಲ್ಲಿ ಐಟಿ ದಾಳಿ ನಡೆದಿದೆ.

ಕೆಜಿಎಫ್ ಬಾಬು ಬಳಿ ಘೋಷಿತ ಆಸ್ತಿಯೇ 1,741 ಕೋಟಿ ಇದೆ ನಾಮಪತ್ರ ಸಲ್ಲಿಕೆ ವೇಳೆ 1,741 ಕೋಟಿ ಆಸ್ತಿ ವಿವರ ಘೋಷಿಸಿದ್ದರು. ಆದಾಯ ತೆರಿಗೆಯಲ್ಲಿ ವ್ಯತ್ಯಯ ಕಂಡು ಬಂದ ಹಿನ್ನೆಲೆ ಐಟಿ ನಡೆಸಿದೆ. ಕೆಜಿಎಫ್ ಬಾಬು ಹಾಗೂ ಸ್ನೇಹಿತರ ನಿವಾಸ, ಕಚೇರಿಗಳು ಸೇರಿ ಒಟ್ಟು 7 ಕಡೆ ಇಂದು ದಾಳಿ ನಡೆದಿದೆ. ಕೆಜಿಎಫ್ ಬಾಬು ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆದಿದ್ದ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲು ಅನುಭವಿಸಿದ್ದರು.

ಮಫ್ತಿಯಲ್ಲಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಮೇಲೆ ಹಲ್ಲೆ: ವ್ಯಕ್ತಿ ಬಂಧನ

ಮೈಸೂರು, ಮೇ 28–ಅಪಹರಣ ಪ್ರಕರಣದ ಪತ್ತೆಗಾಗಿ ಹಾಸನ ಜಿಲ್ಲೆಯಿಂದ ಮೈಸೂರಿಗೆ ಬಂದಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಮೇಲೆ ಹಲ್ಲೆ ನಡೆಸಿದ ವ್ಯಕ್ತಿಯೋರ್ವನನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿವರ: ಅಪ್ರಾಪ್ತ ಬಾಲಕಿಯನ್ನು ಅಪಹರಣ ಮಾಡಲಾಗಿದೆ ಎಂದು ಹಾಸನ ಜಿಲ್ಲೆ ಅರಸೀಕೆರೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಪಹರಣಕ್ಕೊಳಗಾದ ಬಾಲಕಿ ಮತ್ತು ಅಪಹರಣಕಾರರ ಬಗ್ಗೆ ಮೈಸೂರಿನ ಗ್ರಾಂಡ್ ಮೌರ್ಯ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿರುವ ಭಾರತಿ ಎಂಬುವರಿಗೆ ತಿಳಿದಿದೆ ಎಂಬ ಮಾಹಿತಿ ಮೇರೆಗೆ ಅರಸೀಕೆರೆ ನಗರ ಠಾಣೆ ಇನ್ಸ್‌ಪೆಕ್ಟರ್ ಪಿ.ಪಿ.ಸೋಮೇಗೌಡ, ಸಿಬ್ಬಂದಿಗಳಾದ ಯೋಗೇಶ್, ಶಶಿಧರ ಹಾಗೂ ಬಾಲಕಿಯ ಸಂಬಂಧಿ ಮೇ 26ರಂದು ಮೈಸೂರಿಗೆ ಬಂದಿದ್ದರು.


ಗ್ರಾಂಡ್ ಮೌರ್ಯ ಹೋಟೆಲ್‌ಗೆ ತೆರಳಿದಾಗ ಅಲ್ಲಿನ ಸಿಬ್ಬಂದಿ ಭಾರತಿ ಅವರು ಎಸ್‌ಆರ್‌ಎಸ್ ಲೇಔಟ್‌ನಲ್ಲಿ ವಾಸವಿರುವುದಾಗಿ ತಿಳಿದು ಬಂದಿದೆ. ಪೊಲೀಸರು ಹೋಟೆಲ್ ಮಾಲೀಕರ ಜೊತೆ ಮಾತನಾಡಿ, ಅಲ್ಲಿನ ಸಿಬ್ಬಂದಿಯೊಬ್ಬರನ್ನು ಕರೆದುಕೊಂಡು ಎಸ್‌ಆರ್‌ಎಸ್ ಲೇಔಟ್‌ನ ಭಾರತಿ ಅವರ ಮನೆಗೆ ತೆರಳಿದಾಗ ಮನೆ ಬೀಗ ಹಾಕಿತ್ತು. ಅದೇ ವೇಳೆ ಮೋಹನ್ ಎಂಬ ವ್ಯಕ್ತಿ ಪಾನಮತ್ತನಾಗಿ ಬಂದು ನನ್ನ ಏರಿಯಾಗೆ ನೀನು ಯಾಕೆ ಬಂದೆ ಎಂದು ಗಲಾಟೆ ಮಾಡಲು ಆರಂಭಿಸಿದ್ದಾನೆ. ಸೋಮೇಗೌಡರು ತಾವು ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ದು, ಅಪಹರಣ ಪ್ರಕರಣದ ಪತ್ತೆಗಾಗಿ ಬಂದಿರುವುದಾಗಿ ತಿಳಿಸಿದರೂ, ಅವರ ಕೆನ್ನೆಗೆ ಬಾರಿಸಿ ಪೊಲೀಸರೇ ಆದರೂ ನನ್ನ ಏರಿಯಾಗೆ ಬರಬೇಕಾದರೆ ನನ್ನ ಪರ್ಮಿಷನ್ ಬೇಕು ಎಂದು ಹೇಳುತ್ತಾ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ ಎಂದು ಇನ್ಸ್‌ಪೆಕ್ಟರ್ ಸೋಮೇಗೌಡರು ನೀಡಿದ ದೂರನ್ನು ದಾಖಲಿಸಿಕೊಂಡ ವಿಜಯನಗರ ಠಾಣೆ ಪೊಲೀಸರು ಮೋಹನ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಅರಸೀಕೆರೆ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿ ರಾತ್ರಿ ವೇಳೆ ಮಫ್ತಿಯಲ್ಲಿ ತೆರಳಿದ್ದರಿಂದ ಗೊಂದಲವುಂಟಾಗಿ ಪಾನಮತ್ತನಾಗಿದ್ದ ಮೋಹನ್ ಗಲಾಟೆ ಮಾಡಿದ್ದಾನೆ ಎಂದು ವಿಜಯನಗರ ಠಾಣೆ ಪೊಲೀಸ್ ಮೂಲಗಳು ತಿಳಿಸಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 29-5-2022

ಮೇ 29
ರೆಬೆಲ್ ಸ್ಟಾರ್ ಅಂಬರೀಶ್ ಅವರ 70ನೇ ಜನ್ಮದಿನದ ತನ್ನಿಮಿತ ಈ ಲೇಖನ

ಹೃದಯವಂತ ಅಂಬರೀಶ್



ಬನ್ನೂರು ಕೆ.ರಾಜು
ಮೊ. 9481533167

"ಅಂಬರೀಶ್ ಕಲಾವಂತಿಕೆ ಬಹುದೊಡ್ಡದು ಅದಕ್ಕಿಂತಲೂ ಎಲ್ಲರನ್ನೂ ಸರಕ್ಕನೆ ಸೆಳೆವ ಅವರ ಹೃದಯವಂತಿಕೆ ಇನ್ನೂ ದೊಡ್ಡದು".
– ವರನಟ ಡಾ. ರಾಜ್‌ಕುಮಾರ್

ಹೌದು, ನಟಸಾರ್ವಭೌಮ ಡಾ.ರಾಜ್‌ಕುಮಾರ್ ಅವರ ಈ ಮಾತು ಬೆಳಕಿನಷ್ಟೇ ಸತ್ಯ. ತಮ್ಮ ಪ್ರೀತಿ ಪಾತ್ರ ಅಂಬಿಯ ಬಗ್ಗೆ ಇಂಥ ಮಾತುಗಳನ್ನು ಡಾ.ರಾಜ್ ಬದುಕಿದ್ದಾಗ ಆಗಾಗ್ಗೆ ಹೇಳುತ್ತಲೇ ಇದ್ದರು. ಇವತ್ತು ಭೌತಿಕವಾಗಿ ರಾಜ್ ಮತ್ತು ಅಂಬಿ ನಮ್ಮೊಡನೆ ಇಲ್ಲ. ಆದರೆ ಡಾ. ರಾಜ್‌ರವರ ಹಾದಿಯಲ್ಲೇ ಮತ್ತೆ ಬಾರದ ಲೋಕಕ್ಕೆ ತೆರಳಿ ಕಣ್ಮರೆಯಾಗಿರುವ (ನಿಧನ 2018 ನವೆಂಬರ್ 24) ಅಂಬಿಗೆ ಈ ನುಡಿಮುತ್ತುಗಳು ಪ್ರೀತಿಯ ವಜ್ರಹಾರದಂತಿತ್ತು. ಅಂಬಿಯ ವ್ಯಕ್ತಿತ್ವಕ್ಕೆ ಕನ್ನಡಿಯಿಡಿದಂತಿರುವ ಡಾ. ರಾಜ್‌ರವರ ಈ ನುಡಿ ಮುತ್ತುಗಳಿಗೆ ಸಂಪೂರ್ಣ ಕನ್ನಡ ಚಿತ್ರರಂಗದ, ಅಷ್ಟೇ ಏಕೆ ಇಡೀ ಕರ್ನಾಟಕದ ಸಹಮತವಿದೆ. ಏಕೆಂದರೆ ಅಂತಹ ಅಪೂರ್ವ ವ್ಯಕ್ತಿತ್ವದ ಅಮೂಲ್ಯ ಕಲಾವಿದ ರೆಬಲ್ ಸ್ಟಾರ್ ಡಾ. ಅಂಬರೀಶ್. ಅಚ್ಚರಿಯೆಂದರೆ ಇವರು ಚಿತ್ರರಂಗಕ್ಕೆ ಬಂದ ರೀತಿ ಮತ್ತು ಬೆಳೆದ ಪರಿಯೇ ಒಂದು ಅದ್ಭುತ!

1952ರ ಮೇ 29ರಂದು ಹುಚ್ಚೇಗೌಡ ಮತ್ತು ಪದ್ಮಮ್ಮ ದಂಪತಿಯ ಸುಪುತ್ರರಾಗಿ ಒಟ್ಟು ಏಳು ಮಂದಿ ಮಕ್ಕಳಲ್ಲಿ ನಾಲ್ಕನೆಯವರಾಗಿ ಶಿವಕುಮಾರ್, ಆನಂದ್ ಕುಮಾರ್, ಹರೀಶ್‌ಕುಮಾರ್ ಎಂಬ ಮೂವರು ಸಹೋದರರು ಮತ್ತು ಉಮಾದೇವಿ, ರಾಧಾ, ರಂಜಿನಿ ಎಂಬ ಮೂವರು ಸಹೋದರಿಯರ ನಡುವೆ ಮೈಸೂರಿನಲ್ಲಿ ಜನಿಸಿದ ಡಾ.ಅಂಬರೀಶ್‌ರವರು ಪಿಟೀಲು ವಾದನದಲ್ಲಿ ಕನ್ನಡಕ್ಕೆ ವಿಶ್ವಮನ್ನಣೆ ತಂದು ಕೊಟ್ಟ ಸಂಗೀತ ರತ್ನ ಟಿ.ಚೌಡಯ್ಯನವರ ಮೊಮ್ಮಗ ಎಂಬುದೂ ಒಂದು ಹೆಮ್ಮೆ. ಸದಾ ಪಂಚತಾರ ಹೋಟೇಲ್‌ಗಳಲ್ಲಿ ಪರ್ಮನೆಂಟಾಗಿ ಉಳಿದುಕೊಂಡು ತಮ್ಮ ತಾರಾ ಮೌಲ್ಯದಿಂದ ಪಳ ಪಳನೆ ಹೊಳೆಯುತ್ತಿದ್ದ ದಿಲ್‌ದಾರ್ ವ್ಯಕ್ತಿ ಅಂಬರೀಶ್. ಬೆಂಗಳೂರಿನ ಜೆ.ಪಿ.ನಗರದಲ್ಲಿ ಮನೆ ಕಟ್ಟಿದ ನಂತರ 1991ರಲ್ಲಿ ಗೃಹಪ್ರವೇಶ ಮಾಡಿ ಹೋಟೇಲ್ ಜೀವನಕ್ಕೆ ಗುಡ್‌ಬೈ ಹೇಳಿದರು. ಹಾಗೆಯೇ ಮನೆಕಟ್ಟಿ ನೋಡು ಮದುವೆಯಾಗಿ ನೋಡು ಎಂಬಂತೆ ಜನಪ್ರಿಯ ನಟಿ ಸುಮಲತಾರಂಥ ಮಿನುಗು ತಾರೆಯನ್ನು ಅದೇ ವರ್ಷ ಅಂದರೆ 1991 ಡಿ. 8ರಂದು ಕೈ ಹಿಡಿದು ವೈವಾಹಿಕ ಬದುಕಿಗೆ ಕಾಲಿಟ್ಟರು. 1992 ಅ. 3ರಂದು ಜನಿಸಿದ ತಮ್ಮ ಏಕಮಾತ್ರ ಪುತ್ರ ಅಭಿಷೇಕ್ ಗೌಡನೊಡನೆ ಸುಖೀ ಸಂಸಾರಿಯಾಗಿದ್ದ ಅಂಬರೀಶ್ ಮಹಾನ್ ಕಲಾವಿದರಾಗಿ ಹಾಗೂ ಮಹಾನ್ ವ್ಯಕ್ತಿಯಾಗಿ ಬೆಳ್ಳಿತೆರೆಯೊಡನೆ ನಾಡನ್ನು ಬೆಳಗಿದವರು.



ಪತ್ನಿ ಸುಮಲತಾ ಹಾಗೂ ಪುತ್ರ ಅಭಿಷೇಕ್‌ರೊಂದಿಗೆ ಅಂಬರೀಶ್

ಕನ್ನಡ ಚಿತ್ರರಂಗದ ಅಭಿವೃದ್ಧಿಗೆ ದುಡಿದವರಲ್ಲಿ ಖ್ಯಾತ ನಿರ್ದೇಶಕ, ನಿರ್ಮಾಪಕ ದಿವಂಗತ ಡಿ. ಶಂಕರ್‌ಸಿಂಗ್ ಕುಟುಂಬದ ಕೊಡುಗೆ ಬಹುದೊಡ್ಡದು. ಒಂದು ಕಾಲದಲ್ಲಿ ಒಳ್ಳೆ ಕಲಾವಿದೆಯಾಗಿ ಖ್ಯಾತಿಗಳಿಸಿದ್ದ ಡಿ. ಶಂಕರ್‌ಸಿಂಗ್ ಅವರ ಪತ್ನಿ ಪ್ರತಿಮಾದೇವಿ, ಪುತ್ರ ಖ್ಯಾತ ಚಿತ್ರನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್‌ಬಾಬು, ಪುತ್ರಿ ಖ್ಯಾತ ನಟಿ ವಿಜಯಲಕ್ಷ್ಮಿಸಿಂಗ್, ಮೊಮ್ಮಗ ಖ್ಯಾತನಟ ಆದಿತ್ಯ, ಮೊಮ್ಮಗಳು ನಟಿ ರಿಷಿಕಾಸಿಂಗ್ ಇವತ್ತಿಗೂ ಕನ್ನಡ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ. ಇಂಥ ಕುಟುಂಬದಿಂದ ಬಂದಿದ್ದ ನಿರ್ದೇಶಕ ರಾಜೇಂದ್ರಸಿಂಗ್‌ಬಾಬು ಸಹೋದರ ಸಂಗ್ರಾಮ್ ಸಿಂಗ್ ಅವರು ಎಪ್ಪತ್ತರ ದಶಕದಲ್ಲೇ ಕೆಲವು ಚಿತ್ರಗಳಲ್ಲಿ ನಟಿಸಿ ಹೆಸರಾಗಿದ್ದರು. ಇವರ ಮೂಲಕ ಹೇಗೋ ಚಿತ್ರಬ್ರಹ್ಮ ಎಸ್.ಆರ್. ಪುಟ್ಟಣ್ಣ ಕಣಗಾಲರ ಕಣ್ಣಿಗೆ ಬಿದ್ದ ಅಮರನಾಥ್ ಎಂಬ ಶಿಲೆ, ಪುಟ್ಟಣ್ಣ ಕೆತ್ತಿ ತಿದ್ದಿ ತೀಡಿದಾಗ ಸುಂದರ ಶಿಲ್ಪವಾಗಿತ್ತು. ಹೆಸರೂ ಕೂಡ ಪುಟ್ಟಣ್ಣನ ಕಲ್ಪನೆಯಂತೆ ಅಂಬರೀಶ್ ಆಗಿ ಬದಲಾಗಿತು. 1972ರಲ್ಲಿ ಪುಟ್ಟಣ್ಣ ಕಣಗಾಲರ 'ನಾಗರಹಾವು' ಚಿತ್ರದ ಮೂಲಕ ಬೆಳ್ಳಿತೆರೆಗೆ ಅಂಬರೀಶ್ ಪರಿಚಯವಾದರು. ಅಂಬರೀಶ್ ಮೊಟ್ಟಮೊದಲಿಗೆ ಮುಖಕ್ಕೆ ಬಣ್ಣ ಹಚ್ಚಿ ಕ್ಯಾಮರ ಎದುರಿಸಿದ್ದು ಡಿ. ಶಂಕರ್ ಸಿಂಗ್‌ರ 'ಬಂಗಾರದ ಕಳ್ಳ' ಚಿತ್ರವಾದರೂ ಮೊದಲು ತೆರೆಕಂಡದ್ದು ಪುಟ್ಟಣ್ಣ ಕಣಗಾಲರ 'ನಾಗರಹಾವು' ಚಿತ್ರ. ಹಾಗಾಗಿ ಅಂಬಿಯ ಚಿತ್ರ ಜೀವನದಲ್ಲಿ ನಾಗರಹಾವು ಪ್ರಥಮ ಚಿತ್ರವೆಂದು ದಾಖಲಾಗುತ್ತದೆ. ಒಟ್ಟಿನಲ್ಲಿ ಅಂಬರೀಶ್ ಬೆಳ್ಳಿತೆರೆಗೆ ಪಾದಾರ್ಪಣೆ ಮಾಡಲು ಚಿತ್ರಶಿಲ್ಪಿ ಶಂಕರ್ ಸಿಂಗ್ ಮತ್ತು ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್‌ರಂತಹ ನಿರ್ದೇಶಕದ್ವಯರು ಗುರುಗಳಾಗಿ ದೊರೆತದ್ದು ಅಂಬಿಯ ಭಾಗ್ಯವೆನ್ನಬಹುದು. ಯಾರೂ ನಿರೀಕ್ಷಿಸದ ಹಾಗೆ ಸ್ವತಃ ಅಂಬರೀಶ್ ಅವರೇ ಕನಸಿನಲ್ಲೂ ಕಲ್ಪಿಸಿಕೊಳ್ಳದ ರೀತಿಯಲ್ಲಿ ಹೀಗೆ ಅವರ ಬಣ್ಣದ ಬದುಕಿನ ಯಾನ ಆರಂಭವಾಗಿತ್ತು.

> **ಸತತ ಮೂರು ಬಾರಿ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸಂಸತ್ತಿಗೆ ಆಯ್ಕೆಯಾಗಿ ಕೇಂದ್ರ ಸಚಿವ ಸ್ಥಾನಕ್ಕೇರಿದ ಪ್ರಪ್ರಥಮ ಕನ್ನಡ ಚಲನಚಿತ್ರ ನಟನೆಂಬ ದಾಖಲೆಯ ದೊಡ್ಡ ಗೌರವವೂ ಇವರದ್ದಾಗಿದೆ. ಜಲೀಲನಾಗಿ 'ನಾಗರಹಾವು' ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ್ದ ಅಂಬರೀಶ್ ಚಿತ್ರರಂಗ ಮತ್ತು ರಾಜಕೀಯ ರಂಗಗಳೆರಡಲ್ಲೂ ಹೆಮ್ಮರವಾಗಿ ಬೆಳೆದು 2004 ಅ.24ರಂದು ಕೇಂದ್ರ ಸಚಿವರಾಗುತ್ತಿದ್ದಂತೆಯೇ ನಾಡಿಗೆ ನಾಡೇ ಹರ್ಷಚಿತ್ತವಾಗಿತ್ತು. ಜೊತೆಗೆ ಡಾ.ದೇಜಗೌ ಸಂಪಾದಕತ್ವದಲ್ಲಿ 'ಕನ್ನಡದ ಭಾಗ್ಯ' ಎಂಬ ಅಭಿನಂದನಾ ಗ್ರಂಥ ಗೌರವವೂ ಇವರಿಗೆ ಸಂದಿದೆ. ಅಂತೆಯೇ ವಿಧಾನಸಭೆಗೆ ಆಯ್ಕೆಯಾದ ಪ್ರಥಮದಲ್ಲೇ ಕರ್ನಾಟಕ ಸರ್ಕಾರದ ಸಚಿವರಾದ ಹೆಗ್ಗಳಿಕೆ ಕೂಡ ಡಾ.ಅಂಬರೀಶ್ ಅವರದ್ದಾಗಿದೆ. ಅಂತೆಯೇ ಸಾವಿನಲ್ಲೂ ಅಂಬಿ ಚರಿತ್ರೆ ನಿರ್ಮಿಸಿದ್ದು, ಲಕ್ಷಾಂತರ ಮಂದಿ ಅಭಿಮಾನಿಗಳ ಕಂಬನಿಯಲ್ಲಿ ಇವರ ಪಾರ್ಥಿವ ಶರೀರ ತೊಯ್ದು ಹೋಗುವುದರ ಜೊತೆಗೆ ರಾಜಧಾನಿ ಬೆಂಗಳೂರಿನಿಂದ ಅಂಬಿಯ ನೆಚ್ಚಿನ ತಾಣ ಮಂಡ್ಯಕ್ಕೆ ಅವರ ಪಾರ್ಥಿವ ಶರೀರವನ್ನು ಕೇಂದ್ರ ರಕ್ಷಣಾ ವಿಮಾನ(ಏರ್ ಆಂಬುಲೆನ್ಸ್)ದಲ್ಲಿ ತಂದು ಅಭಿಮಾನಿಗಳು ದರ್ಶನ ಮಾಡುವಂತೆ ಮಾಡಿದ್ದು, ಮತ್ತೆ ಬೆಂಗಳೂರಿಗೆ ಕೊಡೊಯ್ದು ಕಲಾವಿದರ ಕರ್ಮಭೂಮಿ ಕಂಠೀರವ ಸ್ಟುಡಿಯೋದಲ್ಲಿ ಲೀನವಾದದ್ದು ಇತಿಹಾಸವೇ ಸರಿ!**

ಬೆಳ್ಳಿ ತೆರೆಯೇ ಬಯಸಿ ಅಂಬರೀಶ್‌ರನ್ನು ತನ್ನತ್ತ ಬರಮಾಡಿಕೊಂಡಿತ್ತು. ಆದರೆ, ಅಂಬರೀಶ್ ಚಿತ್ರನಟರಾಗ ಬೇಕೆಂದು ಬಯಸಿ ಚಿತ್ರರಂಗಕ್ಕೆ ಬಂದವರಲ್ಲ ವಾದ್ದರಿಂದ ಎಂದೂ ಅವರು ಪಾತ್ರಗಳಿಗಾಗಿ ಚಿತ್ರ ನಿರ್ದೇಶಕ, ನಿರ್ಮಾಪಕರ ಹಿಂದೆ ಬಿದ್ದವರಲ್ಲ. ಇಂಥ ಚಿತ್ರಕ್ಕೆ, ಇಂಥ ಪಾತ್ರಕ್ಕೆ ಅಂಬರೀಶ್ ಸೂಟ್ ಅವರೇ ಬೇಕೆಂದು ನಿರ್ದೇಶಕ, ನಿರ್ಮಾಪಕರುಗಳೇ ಇವರ ಹಿಂದೆ ಬಿದ್ದು ತಮ್ಮ ಸಿನಿಮಾಗಳಲ್ಲಿ ಅಂಬಿಯನ್ನು ನಟಿಸುವಂತೆ ಮಾಡುತ್ತಿದ್ದರು. ಹಾಗಾಗಿ ನಾಗರಹಾವು ಚಿತ್ರದ ನಂತರ ಕೆಲವರ ಒತ್ತಾಯಕ್ಕೆ ಮಣಿದು ಜಲೀಲನ ಇಮೇಜ್‌ನಲ್ಲಿಯೇ ಕೆಲವು ಚಿತ್ರಗಳಲ್ಲಿ ಸಣ್ಣ ಪುಟ್ಟ ಪಾತ್ರಗಳಲ್ಲಿ ಇವರು ಅಭಿನಯಿಸುತ್ತಾ ಹೋದರು. ಅಂಬರೀಶ್ ಅಭಿಯನಯವನ್ನು ಅಷ್ಟಾಗಿ ಗಂಭೀರವಾಗಿ ಪರಿಗಣಿಸದಿದ್ದರೂ ತೆರೆಕಂಡ ಚಿತ್ರಗಳಲ್ಲಿ ಇವರ ಪಾತ್ರಗಳು ಪುಟ್ಟದಾದರೂ ಇವರ ಅಭಿನಯ ಕಲೆಯಿಂದಾಗಿ ಗಂಭೀರವಾಗಿ ದಾಖಲಾಗ ತೊಡಗಿದವು. ಒಂದೇ ಒಂದು ದೃಶ್ಯದಲ್ಲಿ ಇವರು ಕಾಣಿಸಿಕೊಂಡರೂ ಸಾಕು ಯಾವ ಹೀರೋಗಳಿಗೂ ಕಡಿಮೆಯಿಲ್ಲದಂತೆ ಸೀಟಿ, ಚಪ್ಪಾಳೆಗಳ ಸದ್ದು ಚಿತ್ರ ಮಂದಿರಗಳಲ್ಲಿ ಮೊಳಗುತ್ತಿತ್ತು. ದೇವರ ಕಣ್ಣು, ಕಿಲಾಡಿ ಜೋಡಿ, ನಾಗರ ಹೊಳೆ, ಶುಭಮಂಗಳ ಮುಂತಾದವು ಆ ಸಂದರ್ಭದಲ್ಲಿ ಬಂದ ಚಿತ್ರಗಳು. ಇವುಗಳಲ್ಲಿ 1975ರಲ್ಲಿ ಬಂದ 'ದೇವರ ಕಣ್ಣು' ಚಿತ್ರದಲ್ಲಿನ ಇವರ ಖಳನಾಯಕನ ಪಾತ್ರದ ಶ್ರೇಷ್ಠ ನಟನೆಗೆ ಆ ಕಾಲದಲ್ಲಿ ಬಹಳ ಹೆಸರುವಾಸಿಯಾಗಿದ್ದ 'ಲಾವಣ್ಯ ಪತ್ರಿಕೆ' ನೀಡುತ್ತಿದ್ದ 'ಲಾವಣ್ಯ ಪ್ರಶಸ್ತಿ' ಅಂಬಿಗೆ ಲಭಿಸಿತ್ತು. ಇದು ಇವರು ಪಡೆದ ಮೊದಲ ಪ್ರಶಸ್ತಿಯಾಗಿದೆ.

ಚಿಕ್ಕ ಚಿಕ್ಕ ಪಾತ್ರಗಳೇ ಆದರೂ ಆ ಪಾತ್ರಗಳಲ್ಲಿನ ಇವರ ಗಟ್ಟಿ ಅಭಿನಯವೇ ಇವರಿಗೆ ಚಿಮ್ಮು ಹಲಗೆಯಾಗಿತ್ತು. ಹಾಗಾಗಿ 1978ರಲ್ಲಿ 'ಅಮರನಾಥ್' ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕ ನಟನಾಗಿ ಬೆಳ್ಳಿತೆರೆಯಲ್ಲಿ ಅಂಬರೀಶ್ ಬಡ್ತಿ ಪಡೆದರು. ಪ್ರಪ್ರಥಮವಾಗಿ ಇವರನ್ನು ನಾಯಕ ನಟನನ್ನಾಗಿಸಿದ ಕೀರ್ತಿ ಅಮರನಾಥ್ ಚಿತ್ರದ ನಿರ್ದೇಶಕ ಕೆ.ಮಣಿಮುರುಗನ್ ಅವರಿಗೆ ಸಲ್ಲಬೇಕು. ಇವರ ಆಯ್ಕೆ ಕೈಕೊಡಲಿಲ್ಲ. ಅಮರನಾಥ್ ಭರ್ಜರಿಯಾಗಿ ಯಶಸ್ಸನ್ನು ತಂದು ಕೊಟ್ಟಿತ್ತು. ಅಂಬಿಯನ್ನು ಕನ್ನಡ ಚಿತ್ರ ರಸಿಕರು ಒಪ್ಪಿಕೊಂಡರು, ಅಪ್ಪಿಕೊಂಡರು. ಆಕರ್ಷಕ ವ್ಯಕ್ತಿತ್ವದ ನೀಳಕಾಯ, ಪಳಪಳನೆ ಹೊಳೆವ ಕೆಂಪು ಕಣ್ಣುಗಳು, ಬಾಯ್ಬಿಟ್ಟರೆ ಬಂದೂಕಿನಿಂದ ಬರುವ ಬುಲೆಟ್‌ನಂಥ ಮಾತುಗಳು, ಗಡಸು ತನದ ಹೀರೋಯಿಸಂ, ನೋಡಲು ಹಿಂದಿಯ ಶತ್ರುಘ್ನಸಿನ್ಹಾನಂತೆ ಕಾಣುತ್ತಿದ್ದ ಒರಟುತನದ ಸ್ಫುರದ್ರೂಪಿ ಯುವಕ ಅಂಬಿ ನೋಡ ನೋಡುತ್ತಿದ್ದಂತೆಯೇ ಹೀರೊ ಆಗಿ ಕ್ಲಿಕ್ಕಾಗಿಬಿಟ್ಟರು.

ಇವರು ಎಷ್ಟು ಬೇಗ 100 ಚಿತ್ರಗಳನ್ನು ಪೂರೈಸಿದರೆಂದರೆ ನಂಬಲಸಾಧ್ಯ! ಅಂಬರೀಶ್ ಚಿತ್ರರಂಗಕ್ಕೆ ಬಂದಾಗ ಅದಾಗಲೇ ವರನಟ ಡಾ.ರಾಜಕುಮಾರ್ ಅವರು 140ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿ ಒಂದೂವರೆ ಶತಕಗಳ ಅಂಚಿನಲ್ಲಿದ್ದರು. ಆದರೆ, ರಾಜ್‌ಕುಮಾರ್ 175 ಚಿತ್ರಗಳನ್ನು ದಾಟುವುದರೊಳಗೆ ಅಂಬರೀಶ್ 1989ರಲ್ಲಿ ಹಾಂಕಾಂಗ್‌ನಲ್ಲಿ 'ಏಜೆಂಟ್ ಅಮರ್' ಚಿತ್ರದ ಮೂಲಕ 100 ಚಿತ್ರಗಳಲ್ಲಿ ಅಭಿನಯಿಸಿ 'ಶತಚಿತ್ರನಟ'ರಾಗಿ ಡಾ.ರಾಜ್‌ರಿಂದಲೇ ಭೇಷ್ ಎನ್ನಿಸಿಕೊಂಡರೆಂದರೆ ಚಿತ್ರರಂಗದಲ್ಲಿ ಇವರು ಬೆಳೆದು ಬಂದ ಬಗೆ ಬೆರಗುಗೊಳಿಸುತ್ತದೆ. ಅಂಬಿಯೊಡನೆ ಚಿತ್ರರಂಗ ಪ್ರವೇಶಿಸಿದ್ದ ಸಾಹಸಸಿಂಹ ವಿಷ್ಣುವರ್ಧನ್ ಕೂಡ ಇವರು ನೂರು ಪೂರೈಸಿದಾಗ ಇನ್ನೂ 75ರ ಗಡಿ ದಾಟಿಯೇ ಇರಲಿಲ್ಲವೆಂದರೆ ನೀವೇ ಊಹಿಸಿ!?. ಇಷ್ಟೊಂದು ರಾಕೆಟ್ ವೇಗದಲ್ಲಿ ಇವರ ಚಿತ್ರಗಳು ಮೂಡಿಬಂದವೆಂದರೆ ಅವರೊಳಗಿನ ಪ್ರತಿಭಾಶಕ್ತಿ ಎಂಥಾದ್ದೆಂದು?

ರಾಜ್ಯಾದ್ಯಂತ ಸಹಸ್ರಾರು ಅಂಬರೀಶ್ ಅಭಿಮಾನಿಗಳ ಸಂಘಗಳು ತಲೆಯೆತ್ತಿ ನಿಂತಿದ್ದವು. ತಾನೊಬ್ಬ ಸೂಪರ್‌ಸ್ಟಾರ್ ಎಂಬ ಗರ್ವ ಕಿಂಚಿತ್ತೂ ಇಲ್ಲದೆ ಸಿನಿಮಾರಂಗದ ಲೈಟ್‌ಬಾಯ್‌ನಿಂದ ಹಿಡಿದು ಸಿನಿಮಾ ನಿರ್ಮಿಸಿ ನಷ್ಟಕ್ಕೀಡಾದ ನಿರ್ಮಾಪಕರುಗಳ ತನಕ, ಜನಸಾಮಾನ್ಯರಿಂದ ಹಿಡಿದು ಜನಪ್ರತಿನಿಧಿಗಳ ತನಕ ಎಲ್ಲರ ಕಷ್ಟ ನಷ್ಟಗಳಲ್ಲಿ ಅಂಬರೀಶ್ ಭಾಗಿಯಾಗಿಬಿಟ್ಟಿದ್ದರು. ಕಷ್ಟವೆಂದವರಿಗೆ ಕೈಯೆತ್ತಿ ಹಣ ನೀಡುತ್ತಿದ್ದರು. ಹೀಗೆ ಇವರಿಂದ ಸಹಾಯ ಪಡೆದವರ ಸಂಖ್ಯೆ ಬೆಳೆಯುತ್ತಾ ಹೋಯಿತು. ಜೊತೆಗೆ ಇವರ ಅಭಿನಯದ ಚಿತ್ರಗಳೂ ಕೂಡ ಒಂದು ರೀತಿ ಅಂಬರೀಶ್ ಚಿತ್ರಗಳ ಯುಗವೇ ಆರಂಭಗೊಂಡಿತ್ತು. ಅವರ ಹೃದಯ ವೈಶಾಲ್ಯತೆಗೂ ಅಭಿಮಾನಿಗಳು ಮಾರು ಹೋಗಿದ್ದರು.

ಅಂಬರೀಶ್ ಉದಾರಶೀಲ ಹೃದಯವಂತಿಕೆ ಯಾವ ಮಟ್ಟದ್ದೆಂದರೆ ಅಭಿನಯ ವೃತ್ತಿಯ ಜೊತೆಗೆ ದಾನ ಮಾಡುವುದನ್ನೂ ಇವರು ಪ್ರವೃತ್ತಿ ಮಾಡಿಕೊಂಡಿದ್ದರು. ವರ್ಷಕ್ಕೆ ಹತ್ತು ಸಿನಿಮಾಗಳಲ್ಲಿ ಅಭಿನಯಿಸಿದರೆ ಐದು ಸಿನಿಮಾಗಳ ಹಣ ತನಗೆ, ಇನ್ನೈದು ಸಿನಿಮಾಗಳ ಹಣ ದಾನ ಮಾಡುವುದಕ್ಕೆಂಬ ಮನೋಭಾವ ಇವರದಾಗಿತ್ತು. ಬಹುಶಃ 1986ರಲ್ಲಿರಬೇಕು, ಬೆಂಗಳೂರಿನ ಗಂಗಾರಾಮ್ ಕಟ್ಟಡ ಕುಸಿದು ಬಿದ್ದ ದುರಂತದ ಪ್ರಕರಣವನ್ನು ಈಗಲೂ ಕೂಡ ಯಾರೂ ಮರೆತಿರಲಾರರು. ಯಾಕೆಂದರೆ ಬಹಳಷ್ಟು ಜನರನ್ನು ಬಲಿ ತೆಗೆದುಕೊಂಡ ಆ ಕಾಲದ ಬಹುದೊಡ್ಡ ಅನಾಹುತವದು. ಆ ಸಂದರ್ಭದಲ್ಲಾದ ನೂರಾರು ಸಾವು ನೋವುಗಳಿಗೆ ಸಕಾಲದಲ್ಲಿ ಸ್ಪಂದಿಸಿ ಸಂತ್ರಸ್ತರಿಗೆ ನೆರವಿನ ಹಸ್ತ ನೀಡಿ ಇವರು ತಮ್ಮ ಮಾನವೀಯತೆ ಮೆರೆದರು. ಇವರ ದಾನಶೀಲಗುಣ ಬಾಯಿಂದ ಬಾಯಿಗೆ ಹೋಗಿ ಕೊನೆಗೆ ಇಡೀ ಕರ್ನಾಟಕಕ್ಕೆ ಶ್ರೀಗಂಧದಂತೆ ಹರಡಿಕೊಂಡಾಗ ಕನ್ನಡಿಗರ ಕಣ್ಣಲ್ಲಿ 'ಕಲಿಯುಗದ ಕರ್ಣ'ನಾಗಿ ಅಂಬಿ ವಿಜೃಂಭಿಸತೊಡಗಿದರು. ಅಂಬರೀಶ್ ಎಂದರೆ ಸಾಕು ಜನಜಾತ್ರೆಯೇ ಮುಗಿಬೀಳುವಂತಾಯಿತು. ಆಗ ದೇಜಗೌ ಅವರಂಥ ಸಾಹಿತ್ಯ ದಿಗ್ಗಜರೇ ಅಂಬರೀಶ್ ಹೆಸರೇ ಒಂದು ವೇದಮಂತ್ರವೆಂದರು.

ಒಬ್ಬ ವ್ಯಕ್ತಿಯ ಜನಪ್ರಿಯತೆಯನ್ನು ಆ ಕ್ಷಣವೇ ಬಳಸಿಕೊಂಡು ಬಿಡುವ ರಾಜಕೀಯರಂಗ ಜನಪ್ರಿಯತೆಯ ಉತ್ತುಂಗ ಶಿಖರದಲ್ಲಿರುವ ಅಂಬರೀಶ್‌ರನ್ನು ಬಿಟ್ಟೀತೆ? ತನ್ನತ್ತ ಸೆಳೆದುಕೊಂಡೇ ಬಿಟ್ಟಿತು. ಇದರ ಪರಿಣಾಮ 1994ರ ನ.13ರಂದು ಮಂಡ್ಯದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾಯರ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಕಾಲಿಡುವುದರ ಮೂಲಕ ಇವರು ರಾಜಕೀಯ ಪ್ರವೇಶ ಮಾಡಿದರು. ನಂತರ ಬದಲಾದ ರಾಜಕೀಯ ಪರಿಸ್ಥಿತಿಯಿಂದಾಗಿ ಜನತಾದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿ 1998ರ ಫೆ.16ರಂದು ನಡೆದ ಲೋಕಸಭಾ ಚುನಾವಣೆಯಲ್ಲಿ ಸುಮಾರು 2 ಲಕ್ಷಕ್ಕೂ ಅಧಿಕ ಮತಗಳ ದಾಖಲೆಯ ಅಂತರದಿಂದ ಜಿ.ಮಾದೇಗೌಡರನ್ನು ಸೋಲಿಸಿ ಮಂಡ್ಯ ಕ್ಷೇತ್ರದಿಂದ ಪ್ರಥಮವಾಗಿ ಸಂಸದರಾಗಿ ಆಯ್ಕೆಯಾದರು. ಅಲ್ಲಿಂದಾಚೆಗೆ ಚಿತ್ರರಂಗದಂತೆಯೇ ರಾಜಕೀಯ ರಂಗದಲ್ಲೂ ಮುನ್ನಡೆದ ಇವರು ಯಾವಾಗಲೂ ಜನಸೇವೆಯಲ್ಲಿ ಮುಂದಾಗಿದ್ದರು.

ರಾಜಕೀಯ ಕ್ಷೇತ್ರದಲ್ಲಿ ಅಂಬಿ ಹೆಚ್ಚು ತೊಡಗಿಕೊಂಡಿರುವುದರಿಂದ ಚಿತ್ರರಂಗಕ್ಕೆ ಇವರು ವಿದಾಯ ಹೇಳಬಹುದೆಂಬ ಆತಂಕದ ಲೆಕ್ಕಾಚಾರ ಅಭಿಮಾನಿಗಳದ್ದಾಗಿತ್ತು. ಆದರೆ ಎಲ್ಲರ ಲೆಕ್ಕಾಚಾರವನ್ನು ಹುಸಿಗೊಳಿಸಿ ರಾಜಕೀಯ ಮತ್ತು ಚಿತ್ರರಂಗಗಳೆರಡರಲ್ಲೂ ಹೀರೊ ಆಗಿಯೇ ಉಳಿದುಕೊಂಡು ಉಭಯ ಕ್ಷೇತ್ರಗಳಲ್ಲೂ ಮೆರೆದ ಅಂಬರೀಶ್, ಕನ್ನಡನಾಡು ಕಂಡ ಮಾನವೀಯ ಗುಣದ ಅಭಿಜಾತ ಕಲಾವಿದ. ಒಂದು ರೀತಿಯಲ್ಲಿ ಜೀವಿತ ಕಾಲದಲ್ಲೇ ದಂತಕತೆಯಾಗಿದ್ದ ಇವರ ಬದುಕು ಸುವರ್ಣ ಪುಟಗಳಲ್ಲಿ ದಾಖಲಿಸುವಂತದ್ದು. ಇದನ್ನೇ ಶಾಂತರಾಮ್ ಎಂಬ ಚಿತ್ರ ನಿರ್ದೇಶಕ 'ಕರ್ಣನ ಸಂಪತ್ತು' ಚಿತ್ರದಲ್ಲಿ ಮಾಡಿದ್ದಾರೆ. ಅಂಬರೀಶ್‌ರ ಬದುಕು ಮತ್ತು ಅವರ ಅಭಿಮಾನಿಗಳ ಸಂಬಂಧವನ್ನು ಆಧರಿಸಿ ತಯಾರಾದ ಈ ಚಿತ್ರದಲ್ಲಿ ಅಂಬರೀಶ್‌ರ ಬದುಕಿನ ಆದರ್ಶದ ವಿಶ್ವರೂಪವನ್ನೇ ಕಾಣಬಹುದು. ಇಡೀ ವಿಶ್ವದ ಚಿತ್ರರಂಗದ ಇತಿಹಾಸದಲ್ಲೇ ಓರ್ವ ಚಲನಚಿತ್ರ ನಟ ಮತ್ತು ಆತನ ಅಭಿಮಾನಿಗಳ ಸಂಬಂಧವನ್ನು ಭಾವನಾತ್ಮಕವಾಗಿ ಹೇಳುವ ಚಲನ ಚಿತ್ರವೊಂದು ಬಂದಿದೆ ಎಂದರೆ ಅದು 'ಕರ್ಣನ ಸಂಪತ್ತು' ಮಾತ್ರ. ಚಲನಚಿತ್ರ ಮಾಧ್ಯಮದಿಂದ ಇಂಥಹದೊಂದು ವಿಶ್ವ ದಾಖಲೆಯ ಗೌರವ ಅಂಬರೀಶ್ ಬಿಟ್ಟರೆ ವಿಶ್ವದ ಮತ್ತಾವ ಕಲಾವಿದನಿಗೂ ದೊರೆತಿಲ್ಲ!

ಪ್ರಶಸ್ತಿ- ಪುರಸ್ಕಾರಗಳು

ಕಲಾವಿದರಾಗಿ ಅಂಬರೀಶ್ ಏರಿದ ಎತ್ತರದಷ್ಟೇ ಇವರ ವೃತ್ತಿ ಜೀವನದಲ್ಲಿ ಎತ್ತರೆತ್ತರದ ಗೌರವಗಳು ಇವರಿಗೆ ಲಭಿಸಿವೆ. 'ಅಂತ' ಚಿತ್ರದ ಅಭಿನಯಕ್ಕಾಗಿ ರಾಜ್ಯ ಸರ್ಕಾರದ ವಿಶೇಷ ಪುರಸ್ಕಾರ, 'ಮಸಣದ ಹೂವು' ಚಿತ್ರದ ಶ್ರೇಷ್ಠ ಅಭಿನಯಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದ ಪ್ರಶಸ್ತಿ, 'ಗಾನಂ' ಎಂಬ ಮಲೆಯಾಳಿ ಚಿತ್ರದಲ್ಲಿನ ತಮ್ಮ ಶ್ರೇಷ್ಠ ನಟನೆಗಾಗಿ ಕೇರಳ ಸರ್ಕಾರದಿಂದ ಶ್ರೇಷ್ಠ ನಟ ಪ್ರಶಸ್ತಿ, ತಮ್ಮ ಜೀವಿತಾವಧಿಯ ಸಾಧನೆಗಾಗಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಆಂಧ್ರ ಸರ್ಕಾರದ ಎನ್‌ಟಿಆರ್ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ, ಫಿಲಂಫೇರ್ ಪ್ರಶಸ್ತಿ, ಕರ್ನಾಟಕ ಸರ್ಕಾರದ ಡಾ.ವಿಷ್ಣುವರ್ಧನ ಪ್ರಶಸ್ತಿ, ಪ್ರತಿಷ್ಠಿತ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ಸೇರಿದಂತೆ ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಇವರು ಭಾಜನರಾಗಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಕಲಾಭಿಮನ್ಯು, ಕಲಾಕುಲತಿಲಕ, ದೇವಮಾನವ, ಕಲಿಯುಗದ ಕರ್ಣ, ಕನ್ನಡಕರುಣಾಳು, ಅಭಿನಯರತ್ನ, ಬಂಗಾರ ಭೂಷಣ, ಕನ್ನಡ ಸಾರ್ವಭೌಮ, ಧರ್ಮರತ್ನಾಕರ, ಕೊಡುಗೈದೊರೆ, ಕಲಾಚಕ್ರವರ್ತಿ, ಕೊಡುಗೈ ಸಾರ್ವಭೌಮ, ರಾಜಕೀಯಸಿಂಹ, ಅಭಿನವಸೂರ್ಯ, ಸ್ವರ್ಣಭೂಷಣ, ನಟನಾಸಿಂಹ, ರಜತಕಂಠೀರವ... ಹೀಗೆ ನೂರಾರು ಬಿರುದುಗಳನ್ನು ಪಡೆದು ನಾಡಿನ ಹೆಸರಾಂತ ಸಂಘ ಸಂಸ್ಥೆಗಳಿಂದ ಗೌರವಿಸಲ್ಪಟ್ಟಿದ್ದಾರೆ. ಲಕ್ಷಾಂತರ ಅಭಿಮಾನಿಗಳ ಸಮ್ಮುಖದಲ್ಲಿ ಮೈಸೂರು ದಸರದೋಪಾದಿಯಲ್ಲಿ ಮೆರವಣಿಗೆ ಮಾಡಿ ಇವರಿಗೆ ಚಾಮರಾಜನಗರದಲ್ಲಿ 'ಬೆಳ್ಳಿಕಿರೀಟ' ಧಾರಣೆ ಮಾಡಿದ್ದರೆ, ಮಂಡ್ಯದಲ್ಲಿ 'ಚಿನ್ನದ ಕಿರೀಟ' ಮತ್ತು ದಾವಣಗೆರೆಯಲ್ಲಿ 'ವಜ್ರದ ಕಿರೀಟ' ಧಾರಣೆ ಮಾಡಿ ನಭೂತೋ ನ ಭವಿಷ್ಯತಿ ಅನ್ನುವಂತೆ ಅಭಿಮಾನದಿಂದ ನಾಡಜನತೆ ಇವರನ್ನು ಸನ್ಮಾನಿಸಿದ್ದಾರೆ.

ವಾರ ಭವಿಷ್ಯ

29.05.2022 ರಿಂದ 4.06.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ-ವೃಷಭ, ಚಂದ್ರ-ಮೇಷ, ವೃಷಭ, ಮಿಥುನ, ಕಟಕ, ಕುಜ-ಮೀನ, ಬುಧ-ವೃಷಭ, ಗುರು-ಮೀನ, ಶುಕ್ರ-ಮೇಷ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ, ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ. ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ಲವಲವಿಕೆಯಿಂದ ಸಮಯ ಸಾಗಲು ನಿಮ್ಮ ರಾಶಿಗೆ ಬರುವ ಮನೋಕಾರಕ ಚಂದ್ರಮನೇ ಕಾರಣ. ಈ ಸಪ್ತಾಹದಲ್ಲಿ ರಾಹು-ಚಂದ್ರ ಸಂಯೋಗವಾಗುವುದರಿಂದ ಆತುರದ ನಿರ್ಧಾರಗಳಿಂದ ನಷ್ಟವನ್ನು ಅನುಭವಿಸುವಿರಿ. ಸತ್ಯ, ಧರ್ಮಗಳು ನಿಮ್ಮ ಗುಣವಾಗಿರಲಿ. ನಿಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಗತಿ ಹೊಂದಿದರೂ, ಸರ್ಕಾರಿ ಸವಲತ್ತುಗಳನ್ನು ಪಡೆಯುವಲ್ಲಿ ಹಿಂದೆ ಬೀಳುವಿರಿ – ಶ್ರೀಕಾರ್ತಿಕೇಯ ಸ್ತುತಿ, ಶುಭಸಂಖ್ಯೆ-1.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಈ ವಾರ ಹೆಚ್ಚಿನ ಗ್ರಹಗಳು ನಿಮಗೆ ಅನುಕೂಲ ಇಲ್ಲದ ಕಾರಣ ಮುಂದಿನ ಹೆಜ್ಜೆಯನ್ನು ತಾಳ್ಮೆಯಿಂದಲೂ, ಜಾಣ್ಮೆಯಿಂದಲೂ ಇಡಬೇಕಿದೆ. ಸುಂದರ ಬದುಕು ತನ್ನಿಂದ ತಾನೇ ಸೃಷ್ಟಿಯಾಗುವುದಿಲ್ಲ. ಅದಕ್ಕೆ ದೈವ ಕೃಪೆಯ ಜೊತೆಗೆ ಕಠಿಣ ಪರಿಶ್ರಮದ ಅಗತ್ಯವೂ ಇದೆ. ವಾರಮಧ್ಯೆ ಬುದ್ಧಿವಂತರ ಸಹವಾಸದಿಂದ ಹಣ ಸಂಪಾದನೆಯ ಹೊಸ ಮಾರ್ಗವೂ ತೆರೆದುಕೊಳ್ಳಲಿದೆ. 'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ದೈವದ ಮೊರೆ ಹೋಗಿ. – ಶ್ರೀ ಚಾಮುಂಡೇಶ್ವರಿ ದರ್ಶನ, ಶುಭಸಂಖ್ಯೆ-5.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಸಪ್ತಾಹದ ಆರಂಭಕ್ಕೆ ಅಭಿವೃದ್ಧಿ ಹಾಗೂ ಯಶಸ್ಸಿನ ಸರಣಿಯನ್ನೇ ನಿಮ್ಮ ಪಾಲಿಗೆ ನೀಡಲಿದ್ದಾನೆ. ಲಾಭಸ್ಥಾನ ಸ್ಥಿತ ಬೃಹಸ್ಪತಿ. ಕೈಗೊಂಡ ಕೆಲಸಗಳಿಗೆ ಉಂಟಾಗಿದ್ದ ಅಡೆತಡೆಗಳು ನಿವಾರಣೆಯಾಗಿ ಸುಲಲಿತವಾಗಿ ಸಾಗುತ್ತವೆ. ರಾಜಕೀಯ ನೇತಾರರಿಗೆ ಉನ್ನತ ಪದವಿ ಗ್ರಹಣ ಮಾಡುವ ಯೋಗವಿದೆ. ಮನೆಯಲ್ಲಿ ಉಚ್ಚ ಚಂದ್ರನ ಪ್ರಭಾವದಿಂದ ಹರ್ಷ, ಸಂತೋಷಗಳ ವಾತಾವರಣ ಇರುತ್ತದೆ. ಕೆಲವೊಮ್ಮೆ ದಾರಿ ತಪ್ಪಿ ನಡೆಯುವಿರಿ. – ಶ್ರೀರಾಜರಾಜೇಶ್ವರಿ ಅಷ್ಟಕ ಪಠಿಸಿ, ಶುಭಸಂಖ್ಯೆ-4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಶುಭ ಸ್ಥಾನಕ್ಕೆ ಸರಿದಿರುವ ಶ್ರೀ ಗುರುಗ್ರಹದ ಕರುಣೆಯಿಂದ ವಿದ್ವಜ್ಜನರ ಸಂಪರ್ಕದಿಂದ ನಿಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ಇದು ಜೀವನ ಸಾಧನೆಯ ಕೆಲಸಗಳಿಗೆ ಸೋಪಾನವಾಗುವುದು. ಸರಕಾರದಿಂದಲೂ ಸಹಾಯ, ಅನುಕೂಲಗಳು ದೊರಕುವ ಸಂಭವವಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಹಲವರಿಗೆ ಹಳೆಯ ಕಾಯಿಲೆಯಿಂದ ಮುಕ್ತಿ ದೊರೆಯುವುದು. ಕರುಳು ಬೇನೆ ಕಾಡಬಹುದು. – ಶ್ರೀ ನೃಸಿಂಹಸ್ವಾಮಿ ಆರಾಧನೆ, ಶುಭಸಂಖ್ಯೆ-7.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದ ಆದಿಗೆ ಕೊಡು-ತರುವ ವ್ಯವಹಾರಗಳಲ್ಲಿ ಮಿಶ್ರಫಲವನ್ನು ಅನುಭವಿಸುವಿರಿ. ಹಣಕಾಸಿನ ಹೊಂದಾಣಿಕೆ ಸುಸೂತ್ರವಾಗಿದ್ದರೂ ಅನಿರೀಕ್ಷಿತ ಖರ್ಚುಗಳಿಂದ ಜೇಬು ಖಾಲಿ. 'ಸಮಯಕ್ಕಾದವನೇ ನೆಂಟ' ಎಂಬ ನಾಣ್ಣುಡಿಯಂತೆ ನೆರೆಹೊರೆಯಲ್ಲಿ ಉತ್ತಮ ಬಾಂಧವ್ಯ ಇಟ್ಟುಕೊಳ್ಳಿ. ನಿಮ್ಮ ಮುಖ್ಯ ಕೆಲಸ ಕಾರ್ಯಗಳಲ್ಲಿ ಕುಟುಂಬ ಸದಸ್ಯರ ಅಸಹಕಾರದಿಂದ ಕೆಲಸ ಗುರಿ ಮುಟ್ಟದು. ಮನೆ ದೇವರ ದರ್ಶನ – ಶ್ರೀರಾಮ ರಕ್ಷಾಸ್ತೋತ್ರ ಪಠಿಸಿ, ಶುಭಸಂಖ್ಯೆ-2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದಾರಂಭಕ್ಕೆ ಪ್ರಭಾವಿ ವ್ಯಕ್ತಿಗಳ ಭೇಟಿಯಿಂದ ಕಠಿಣ ಕಾರ್ಯವೊಂದು ಯಶಸ್ವಿಯಾಗಿ ಸಂಪನ್ನವಾಗುವುದು. ಹೊಸ ಯೋಜನೆಗಳಿಗೆ ಸ್ವಲ್ಪ ಸಮಯ ಕಡಿವಾಣ ಹಾಕಿ. ನಿರೀಕ್ಷೆಯಂತೆ ಹಣ ಕೈಗೆ ಬಂದರೂ ಬರಿಗೈ ಆಗಲು ಕ್ಷಣ ಮಾತ್ರ. ವಿದ್ಯಾಪ್ರಸಂಗಗಳಲ್ಲಿ ಕೀರ್ತಿವಂತರಾಗುವಿರಿ. ಗೃಹ ಕಲಹಗಳು ಮನೆಯ ಒಳಗೇ ಇತ್ಯರ್ಥ ಮಾಡಿಕೊಳ್ಳಿ. ನರ ಸಂಬಂಧಿ ಕಾಯಿಲೆ ಕಾಡಬಹುದು. –ಶ್ರೀಅಶ್ವತ್ಥ ವೃಕ್ಷ ಪ್ರದಕ್ಷಿಣೆ, ಶುಭಸಂಖ್ಯೆ-2.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ಶ್ರೀ ಗುರುವಿನ ನವಮ ಭಾಗ್ಯಸ್ಥಾನದ ಸಂಚಾರ ಪರಿಣಾಮ ವೈಯಕ್ತಿಕವಾಗಿಯೂ, ಸಾಮಾಜಿಕವಾಗಿಯೂ ಉತ್ಕರ್ಷ ಸಾಧಿಸುವ ನಿಮ್ಮ ಪ್ರಯತ್ನಗಳು ಸಫಲವಾಗುವವು. ಹಳೆಯ ಕಾಯಿಲೆಗಳಿಂದ ಬಿಡುಗಡೆ ಹೊಂದಿ, ಆರೋಗ್ಯವೂ ಸುಧಾರಿಸುವುದು. ಪ್ರೀತಿ-ಪ್ರಣಯ ವಿಚಾರಗಳು 'ಗಟ್ಟಿಮೇಳ'ದಲ್ಲಿ ಸುಖಾಂತ್ಯವಾದೀತು. ಆಡಿಟರ್‌ಗಳಿಗೆ ಬಿಡುವಿಲ್ಲದ ಕೆಲಸ ಹಾಗೂ ಹೆಚ್ಚಿನ ಆದಾಯ. ವಾರದ ಕಡೆಗೆ ಧರ್ಮಕ್ಷೇತ್ರ ಸಂದರ್ಶನ . – ಶ್ರೀದುರ್ಗಾ ಪ್ರಾರ್ಥನೆ, ಶುಭಸಂಖ್ಯೆ-6.

ಮಕರ (ಬೊ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)
ವಾರದ ಆದಿಗೆ ಗೃಹಲಕ್ಷ್ಮಿಯ ಸಲಹೆ ಸ್ವೀಕರಿಸುವುದರಿಂದ ಒಳಿತಾಗುವುದು. ಮನೆಗೆ ಗೃಹಬಳಕೆ ವಸ್ತುಗಳ ಖರೀದಿ. ಮರ-ಮುಟ್ಟು ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭವಾಗುವುದು. 'ಮಾತೇ ಮುತ್ತು' ಯೋಚಿಸಿದೆಲ್ಲವನ್ನೂ ಮಾತನಾಡಬೇಡಿ, ಯೋಚಿಸಿ ಮಾತನಾಡಿ. ಉದ್ದಿಮೆದಾರರಿಗೆ ಕಾರ್ಮಿಕವರ್ಗದಿಂದ ಅಸಹಕಾರದ ಕಿರಿಕಿರಿ. ವಾರಾಂತ್ಯಕ್ಕೆ ಸಂತೋಷ ಕೂಟಗಳು 'ಲಕ್ಷ್ಮಣಗೆರೆ' ದಾಟದಿರಲಿ. – ಶ್ರೀ ಶನಿ ಚಾಲೀಸ ಪಠಿಸಿ, ಶುಭಸಂಖ್ಯೆ-6.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)
ಶ್ರೀ ಬೃಹಸ್ಪತಿ ಅಷ್ಟಮಕ್ಕೆ ಬಂದಿದ್ದಾರೆ. ಜೀವನದ ಸಾಧಕ-ಬಾಧಕಗಳ ಅರಿವು ನಿಮಗೆ ನಿಗೂಢವಾಗಿದೆ. ನಿಮ್ಮ ಪ್ರಯತ್ನ ಮಾತ್ರ ನಿರಂತರವಾಗಿ ಸಾಗಲಿ. ಕತ್ತಲಾದ ಮೇಲೆ ಬೆಳಕು ಬಂದೇ ಬರುತ್ತದೆ. ಈ ನಡುವೆ ಚಂದ್ರಗ್ರಹದ ಗೋಚರ ಶುಭವಿದ್ದು, ಜೀವನದ ಅಡಚಣೆಗಳನ್ನು ನಿವಾರಿಸಲಿರುವನು. ಮಹಿಳಾ ಮಣಿಯರು 'ಶೋಕಿ'ಯಿಂದ ಹೆಚ್ಚಿನ ಹಣ ವ್ಯಯಿಸುವರು. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ಭೇಟಿಯಿಂದ ನಿರಾಳವೆನಿಸುವುದು. – ಶ್ರೀಗುರು ಅಷ್ಟೋತ್ತರ ಪಠಿಸಿ, ಶುಭಸಂಖ್ಯೆ-8.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಈ ವಾರದಲ್ಲಿ ನಿಮ್ಮ ಮನೋಸ್ಥೈರ್ಯ ಉನ್ನತವಾಗಿರಲು ಗುರುಗ್ರಹವೇ ಕಾರಣ. ಐಹಿಕ ಸುಖಭೋಗಗಳು ನಿಮ್ಮ ಪಾಲಿಗಿದೆ. ತತ್ವಜ್ಞಾನ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಿರಿ. ಕೆಲವೊಂದು ವಿಷಯಗಳು ಅಪ್ರಯತ್ನವಾಗಿ ಜರುಗಿಬಿಡುವುದು. ಕುಂಭ ಶನಿಯಿಂದಾಗಿ ಆರೋಗ್ಯ ಕೆಡುವ ಸಂಭವ, ಕೌಟುಂಬಿಕ ಘರ್ಷಣೆಗಳು ಉಂಟಾಗಬಹುದು. ಯುವಕರು ಸ್ವೇಚ್ಛಾಚಾರದಿಂದ ತೊಂದರೆಗೆ ಗುರಿಯಾಗುವರು. – ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ, ಶುಭಸಂಖ್ಯೆ-3.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಈ ವಾರದಲ್ಲಿ ಹಲವು ಗ್ರಹಗಳ ಶುಭ ಸಂಚಾರದಿಂದ ವಾರದ ಆದಿಗೆ ಧನಾಗಮನ, ವಸ್ತ್ರ, ವಾಹನ ಖರೀದಿ, ಸ್ಪರ್ಧೆಯಲ್ಲಿ ವಿಜಯ, ಉದ್ಯೋಗಾಕಾಂಕ್ಷಿಗಳಿಗೆ ಇಂಟರ್‌ವ್ಯೂ ಸಕ್ಸಸ್. ನಿಮ್ಮ ರಾಶಿಯ ಮೇಲೆ ಗುರುದೃಷ್ಟಿ ಸಂಪೂರ್ಣವಿದ್ದು, ಸೈಟು, ಮನೆ ಖರೀದಿಯಂತಹ ಮಹತ್ವದ ಕೆಲಸಗಳನ್ನು ಸಂಪನ್ನಗೊಳಿಸಿಕೊಳ್ಳಿ. ಹೊಸ ಬಂಡವಾಳ ಹೂಡಿಕೆ ಮಾಡುವುದಾದರೆ ಅನುಭವಿಗಳ ಮಾರ್ಗದರ್ಶನ ಪಡೆಯಿರಿ. – ಶ್ರೀವಿಷ್ಣು ಸಹಸ್ರನಾಮ ಪಠಿಸಿ, ಶುಭಸಂಖ್ಯೆ-5.

ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)
ಸಪ್ತಾಹದ ಪ್ರಾರಂಭಕ್ಕೆ ಸುಖ-ಸಂತೋಷ ಹೊಂದಲು ಚಂದ್ರಮನ ಕರುಣೆ ನಿಮ್ಮ ರಾಶಿಯ ಮೇಲಿದೆ. ಕಲಾವಿದರಿಗೆ, ವಸ್ತ್ರ ವಿನ್ಯಾಸಕಾರರಿಗೆ ಅಧಿಕ ಧನಾದಾಯವಾಗಲಿದೆ. ವಾರಮಧ್ಯೆ ಶುಭ ಸುದ್ದಿ ಹೊತ್ತ ಓಲೆಯೊಂದು ಬಂದೀತು. ಅಪ್ರತಿಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಯೋಗವಿದೆ. ಈ ಮಧ್ಯೆ ಅನಾರೋಗ್ಯದ ಕಾರಣ ವೈದ್ಯರ ಭೇಟಿ ಅನಿವಾರ್ಯವಾಗುವುದು. – ಶ್ರೀ ಶಿರಡಿ ಬಾಬಾ ದರ್ಶನ, ಶುಭಸಂಖ್ಯೆ-7.



ಮೃಗಾಲಯದಲ್ಲಿ ಕೆಲಸ ಮಾಡುವ ಪದವೀಧರರಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಮೈ.ವಿ.ರವಿಶಂಕರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ ಜೊತೆಗೂಡಿ ಮತಯಾಚಿಸಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಮುಖಂಡ ಮೋಹನ್, ಮೃಗಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ವಿಶ್ವಕರ್ಮ ಸೇವಾ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರ

ಸಮಾಜದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾವಂತರಿಂದ ಅರ್ಜಿ ಆಹ್ವಾನ

ಮೈಸೂರು,ಮೇ 28(ಎಂಟಿವೈ)–ಶ್ರೀ ವಿಶ್ವಕರ್ಮ ಸೇವಾ ಟ್ರಸ್ಟ್ ವತಿಯಿಂದ ಎಸ್‌ಎಸ್ ಎಲ್‌ಸಿ ಹಾಗೂ ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಕೆಂಡಗಣ್ಣ ವಿಶ್ವಕರ್ಮ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಗೊಂಡಿದೆ. ಜೂನ್ ಮೂರನೇ ವಾರದಲ್ಲಿ ಪಿಯುಸಿ ಫಲಿತಾಂಶ ಪ್ರಕಟಗೊಳ್ಳಲಿದೆ. ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಜು.20ರೊಳಗೆ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಶ್ರೀ ವಿಶ್ವಕರ್ಮ ಸೇವಾ ಟ್ರಸ್ಟ್, ನಂ.13, 19ನೇ ಕ್ರಾಸ್, ರೈಲ್ವೆ ಬಡಾವಣೆ, ವಿಜಯನಗರ 2ನೇ ಹಂತದಲ್ಲಿರುವ ಕಚೇರಿಗೆ ತಲುಪಿಸುವಂತೆ ಕೋರಿದರು.

ಅರ್ಜಿ ಸಲ್ಲಿಸುವ ಅವಧಿ ಮುಕ್ತಾಯಗೊಂಡ ನಂತರ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸ್ಥಳ ಹಾಗೂ ದಿನಾಂಕವನ್ನು ನಿಗದಿಪಡಿಸಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಗುವುದು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಅಂಕಪಟ್ಟಿಯ ಜೆರಾಕ್ಸ್ ಪ್ರತಿ ನೀಡಬೇಕು. ಒಂದು ವೇಳೆ ಮೂಲ ಅಂಕಪಟ್ಟಿ ದೊರೆಯದೆ ಇದ್ದರೆ ಕಂಪ್ಯೂಟರ್‌ನಿಂದ ಪಡೆದ ಅಂಕಪಟ್ಟಿಯ ಪ್ರತಿಯನ್ನು ಶಾಲಾ, ಕಾಲೇಜು ಮುಖ್ಯಸ್ಥರಿಂದ ದೃಢೀಕರಿಸಿ ನೀಡಬೇಕು. ಪಾಲಕರು ಹಾಗೂ ವಿದ್ಯಾರ್ಥಿಯ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ, ವಿದ್ಯಾರ್ಥಿಯ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಮೊಬೈಲ್ ಸಂಖ್ಯೆಯನ್ನು ನೀಡಬೇಕು. ಮಾಹಿತಿಗೆ ಮೊ:99642 25410 ಸಂಪರ್ಕಿಸಬಹುದು ಎಂದರು. ಗೋಷ್ಠಿಯಲ್ಲಿ ಟ್ರಸ್ಟ್‌ನ ಪದಾಧಿಕಾರಿಗಳಾದ ಆನಂದೂರು ಪುಟ್ಟಸ್ವಾಮಾಚಾರ್, ಮೊಗಣ್ಣಾಚಾರ್, ಕೆಂಡಗಣ್ಣ ವಿಶ್ವಕರ್ಮ, ಮುಳ್ಳೂರು ರಾಮಲಿಂಗಾಚಾರ್, ರಾಮಚಂದ್ರ, ನಾಗೇಂದ್ರ ಹಾಗೂ ಶಂಕರ್ ಇದ್ದರು.

ನಾಳೆ ಬೆಂಗಳೂರಲ್ಲಿ 'ರೈತ ಚಳವಳಿ ಆತ್ಮಾವಲೋಕನ, ಸ್ಪಷ್ಟೀಕರಣ ಸಭೆ

ಮೈಸೂರು, ಮೇ 28(ಎಂಟಿವೈ)– ಬೆಂಗಳೂರಿನ ಕುಮಾರ ಪಾರ್ಕ್‌ನ ಗಾಂಧಿ ಭವನದಲ್ಲಿ ಮೇ 30 ರಂದು ಬೆಳಗ್ಗೆ 10ಕ್ಕೆ 'ರೈತ ಚಳವಳಿ–ಆತ್ಮಾವಲೋಕನ ಮತ್ತು ಸ್ಪಷ್ಟೀಕರಣ ಸಭೆ' ಹಮ್ಮಿಕೊಳ್ಳಲಾಗಿದೆ ಎಂದು ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಮಾಧ್ಯಮ ಕಾರ್ಯದರ್ಶಿ ಮಂಜು ಕಿರಣ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಭೆಯಲ್ಲಿ ರೈತ ನಾಯಕರಾದ ರಾಕೇಶ್ ಟಿಕಾಯತ್, ಯುದ್ಧವೀರ್ ಸಿಂಗ್, ಕವಿತಾ ಕುರುಗಂಟಿ ಪಾಲ್ಗೊಳ್ಳಲಿದ್ದಾರೆ. ಸಾರಿಗೆ ನೌಕರರ ಮುಷ್ಕರ ಅಂತ್ಯಗೊಳಿಸಲು ರೈತ ನಾಯಕ ಕೋಡಿಹಳ್ಳಿ ಚಂದ್ರಶೇಖರ್ ಹಣ ಪಡೆದಿರುವ ಆರೋಪ ಕೇಳಿ ಬಂದಿದೆ. ಈ ಹಣವನ್ನು ಕೋಡಿಹಳ್ಳಿ ಚಂದ್ರಶೇಖರ್‌ಗೆ ನೀಡಿದ್ದು ಯಾರು? ಈ ಅಂಶ ಬಹಿರಂಗಗೊಳ್ಳಬೇಕಾಗಿದೆ. ಸಾರಿಗೆ ನೌಕರರು ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತಿದ್ದರು. ಮುಷ್ಕರ ಅಂತ್ಯಗೊಳಿಸಲು ಸರ್ಕಾರ ಕೋಡಿಹಳ್ಳಿಗೆ ಹಣ ನೀಡಿತೇ ಎಂಬ ಕುರಿತು ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ವಿದ್ಯಾಸಾಗರ್ ರಾಮೇಗೌಡ, ರಘು ಇಮ್ಮಾವು, ಕೃಷ್ಣೇಗೌಡ, ವೆಂಕಟೇಶ್ ಹಾಗೂ ಇತರರು ಇದ್ದರು.

ಇಂದು ವಧು–ವರರ ಸಮಾವೇಶ

ಮೈಸೂರು, ಮೇ 28– ವೀರಶೈವ ಲಿಂಗಾಯತ ವಧು–ವರರ 227ನೇ ಮಾಸಿಕ ಮುಖಾಮುಖಿ ಸಮಾವೇಶವನ್ನು ಮೇ 29ರಂದು ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿನ ಗಾಂಧಿನಗರದ 5ನೇ ಮುಖ್ಯ ರಸ್ತೆಯಲ್ಲಿರುವ ಲಿಂಗಾಯತ ಕಲ್ಯಾಣ ಟ್ರಸ್ಟ್‌ನಲ್ಲಿ ಏರ್ಪಡಿಸಲಾಗಿದೆ. ಮಾಹಿತಿಗಾಗಿ ದೂ. 080–22269237 ಸಂಪರ್ಕಿಸಬಹುದು.

ಮೈಸೂರಲ್ಲಿ ತಂಬಾಕುರಹಿತ ದಿನ ಜಾಗೃತಿ ಓಟ



ಮೈಸೂರು, ಮೇ 28(ಆರ್‌ಕೆ)–ವಿಶ್ವ ತಂಬಾಕು ರಹಿತ ದಿನ (No Tobaco Day)ದ ಅಂಗವಾಗಿ ಮೈಸೂರಲ್ಲಿ 'ಹೋಪ್–ಎ–ಥಾನ್' ಜಾಗೃತಿ ಓಟದ ಸ್ಪರ್ಧೆ ನಡೆಯಿತು.

ಹೆಚ್‌ಸಿಜಿ ಭಾರತ್ ಆಸ್ಪತ್ರೆ ಆಂಕಾಲಜಿ ಸಂಸ್ಥೆ, ಮೈಸೂರು ಜಿಮ್ ಮತ್ತು ಫಿಟ್‌ನೆಸ್ ಮಾಲೀಕರ ಸಂಘದ ಸಹಯೋಗದೊಂದಿಗೆ ಮೈಸೂರಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಹೋಪ್–ಎ–ಥಾನ್ ಓಟದ ಸ್ಪರ್ಧೆಗೆ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್. ಪ್ರಸಾದ್, ಸಿಐಐ ಮೈಸೂರು ವಲಯದ ಮುಖ್ಯಸ್ಥೆ ಸುಪ್ರಿಯಾ ಸಾಲಿಯಾನ, ಹೆಚ್‌ಸಿಜಿ ಭಾರತ್ ಆಸ್ಪತ್ರೆ ಮುಖ್ಯಸ್ಥ ಡಾ. ಅಜಯ್ ಕುಮಾರ್ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ತಂಬಾಕು ಮುಕ್ತಗೊಳಿಸುವುದಾಗಿ ಪ್ರತಿಜ್ಞೆ ಮಾಡಿದರು. ಈ ಸಂದರ್ಭ ಮಾತನಾಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್, ಭಾರತದಲ್ಲಿ ಮನುಷ್ಯನ ಜೀವತಾವಧಿ ಸರಾಸರಿ 68 ವರ್ಷಕ್ಕಿಳಿಸಿದ್ದು, ಅನುವಂಶಿಕ ಲಕ್ಷಣಗಳು, ಜೀವನ ಶೈಲಿ, ಆಹಾರ ಪದ್ಧತಿ, ಅಭ್ಯಾಸ, ದುಶ್ಚಟಗಳು ಇದಕ್ಕೆ ಪ್ರಮುಖ ಕಾರಣವಾಗಿದ್ದು, ತಂಬಾಕು ಸೇವನೆಯಿಂದ ಬರುವ ಕ್ಯಾನ್ಸರ್‌ನಿಂದ ಪ್ರತೀ ವರ್ಷ 70 ಸಾವಿರ ಮಂದಿ ಸಾವನ್ನಪ್ಪುತ್ತಿದ್ದಾರೆ ಎಂದರು.

ಮೈಸೂರು ಜಿಮ್ ಮತ್ತು ಫಿಟ್‌ನೆಸ್ ಮಾಲೀಕರ ಸಂಘದ ಅಧ್ಯಕ್ಷ ಎಂ.ಎಸ್.ಹರ್ಷ, ಭಾರತ್ ಆಸ್ಪತ್ರೆ ಮತ್ತು ಆಂಕಾಲಜಿ ಸಂಸ್ಥೆ ವೈದ್ಯಕೀಯ ಅಧೀಕ್ಷ ಡಾ. ಎಂ.ಎಸ್.ವಿಶ್ವೇಶ್ವರ, ಸಿಇಓ ನಿರ್ಮಲ ಕೃಷ್ಣಮೂರ್ತಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಈ ಸಂದರ್ಭ ಪಾಲ್ಗೊಂಡಿದ್ದರು.

ಹೊಸ ಕಾರು ಕೊಡಿಸುವುದಾಗಿ 1.24 ಲಕ್ಷ ರೂ. ವಂಚನೆ

ಮೈಸೂರು, ಮೇ 28–ಕಾರು ಕೊಡಿಸುವುದಾಗಿ ನಂಬಿಸಿ ಸೆಕ್ಯೂರಿಟಿ ಗಾರ್ಡ್‌ಗೆ 1.24 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ರಮಾವಿಲಾಸ ರಸ್ತೆಯಲ್ಲಿರುವ ಐಸಿಐಸಿಐ ಬ್ಯಾಂಕಿನ ಸೆಕ್ಯೂರಿಟಿ ಗಾರ್ಡ್ ಸಿ.ಕೆ.ಬೋಪಣ್ಣ ವಂಚನೆಗೊಳಗಾದವರು. ಇವರು ಕೆಲಸ ಮಾಡುತ್ತಿದ್ದ ಬ್ಯಾಂಕ್‌ನ ಗ್ರಾಹಕನೆಂದು ಪದೇ ಪದೆ ಅಲ್ಲಿಗೆ ಬರುತ್ತಿದ್ದ ವಿನೋದ್‌ಕುಮಾರ್ ಎಂಬ ವ್ಯಕ್ತಿ ಬೋಪಣ್ಣ ಅವರನ್ನು ಪರಿಚಯ ಮಾಡಿಕೊಂಡು ಅವರಿಗೆ ಹೊಸ ಕಾರು ಕೊಡಿಸುವುದಾಗಿ ನಂಬಿಸಿ 1.24 ಲಕ್ಷ ನಗದು, ಆಧಾರ್, ಪಾನ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್‌ಬುಕ್ ಪಡೆದು ವಂಚಿಸಿದ್ದಾನೆ ಎಂದು ನೀಡಿದ ದೂರನ್ನು ದೇವರಾಜ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಪೆಟ್ರೋಲ್ ಬಂಕ್‌ಗಾಗಿ 3 ಗುಂಟೆ ಖರೀದಿ ನೆಪದಲ್ಲಿ 2.26 ಎಕರೆ ನೋಂದಣಿ: ರೈತ ಕುಟುಂಬದಿಂದ ವಂಚನೆ ಕೇಸ್

ಮೈಸೂರು, ಮೇ 28–ಪೆಟ್ರೋಲ್ ಬಂಕ್‌ಗಾಗಿ 3 ಗುಂಟೆ ಜಮೀನು ಖರೀದಿಸುವುದಾಗಿ ತಿಳಿಸಿ ಅನಕ್ಷರಸ್ಥ ರೈತ ಕುಟುಂಬದಿಂದ 2 ಎಕರೆ 26 ಗುಂಟೆ ಜಮೀನನ್ನು ನೋಂದಣಿ ಮಾಡಿಸಿಕೊಂಡಿರುವ ಬಗ್ಗೆ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಿನಕಲ್‌ನ ರೈತ ನಾಗೇಶ್(73) ಎಂಬುವವರು ಈ ಸಂಬಂಧ ಪೊಲೀಸರಿಗೆ ದೂರು ಸಲ್ಲಿಸಿದ್ದು, ವಿನಾಯಕನಗರದ ಟಿ.ಕೆ.ಮುತ್ತು ಎಂಬುವವರು ತಮ್ಮ ಕುಟುಂಬಕ್ಕೆ ಸೇರಿದ ಹಿನಕಲ್ ಸರ್ವೆ ನಂ.28ರಲ್ಲಿರುವ 2 ಎಕರೆ 26 ಗುಂಟೆ ಜಮೀನಿನ ಪೈಕಿ 3 ಗುಂಟೆ ಜಮೀನನ್ನು ಪೆಟ್ರೋಲ್ ಬಂಕ್‌ಗಾಗಿ ಖರೀದಿಸುವುದಾಗಿ ತಿಳಿಸಿ 1992ರ ಜ.8ರಂದು 3 ಗುಂಟೆ ಬದಲಿಗೆ 2.26 ಎಕರೆ ಜಮೀನನ್ನು ಟಿ.ಕೆ.ಮುತ್ತು, ಅವರ ಪತ್ನಿ ಎಂ.ಪೂರ್ಣ, ಪುತ್ರಿಯರಾದ ಶ್ರೀಮತಿ ಸರೋಜ, ಶ್ರೀಮತಿ ಚೈತ್ರ, ಪುತ್ರ ಧನಶೇಖರ್, ಸೊಸೆ ಡಿ.ಸತ್ಯ ಹೆಸರಿಗೆ ನೋಂದಣಿ ಮಾಡಿಸಿಕೊಂಡಿದ್ದಾರೆ. ತಮ್ಮ ತಂದೆ ಮತ್ತು ಸಹೋದರರ ಅಮಾಯಕತೆ ಹಾಗೂ ಅನಕ್ಷರತೆಯನ್ನು ದುರುಪಯೋಗಪಡಿಸಿಕೊಂಡು 3 ಗುಂಟೆ ಬದಲಿಗೆ 2.26 ಎಕರೆ ಜಮೀನನ್ನು ನೋಂದಣಿ ಮಾಡಿಸಿಕೊಂಡು 2011ರ ಡಿ.2ರಂದು ಅದನ್ನು ಪಿ.ಎಸ್.ರೆಡ್ಡಿ, ವೈ.ಜಿ.ಚಿನ್ನಸ್ವಾಮಿ, ಶ್ರೀಮತಿ ಗೀತಾ ಎಂಬವರಿಗೆ ಮಾರಾಟ ಮಾಡಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಫೇಸ್‌ಬುಕ್ ಪರಿಚಯಸ್ಥನ ಗಿಫ್ಟ್‌ಗೆ ಆಸೆ ಬಿದ್ದು 6.5 ಲಕ್ಷ ಕಳೆದುಕೊಂಡ ಉದ್ಯೋಗಿ

ಮೈಸೂರು, ಮೇ 28–ಫೇಸ್‌ಬುಕ್‌ನಲ್ಲಿ ಪರಿಚಯವಾದ ಅಪರಿಚಿತ ವ್ಯಕ್ತಿ ಗಿಫ್ಟ್ ಕಳುಹಿಸುವುದಾಗಿ ನಂಬಿಸಿ ಖಾಸಗಿ ಕಂಪನಿ ಮಹಿಳಾ ಉದ್ಯೋಗಿಯಿಂದ 6.55 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ ಬಗ್ಗೆ ವರದಿಯಾಗಿದೆ.

ಮೈಸೂರು ತಾಲೂಕು ಹಿನಕಲ್ ಹುಂಡಿ ಗ್ರಾಮದವರಾಗಿದ್ದು, ಖಾಸಗಿ ಕಂಪನಿಯೊಂದರ ಉದ್ಯೋಗಿಯಾಗಿರುವ ಜೀವಿತ(32) ಅವರಿಗೆ ದೀಪ್ ಮಾರ್ಕ್ ಎಂಬ ಹೆಸರಿನ ಅಪರಿಚಿತ ವ್ಯಕ್ತಿ ಫೇಸ್‌ಬುಕ್‌ನಲ್ಲಿ ಪರಿಚಯವಾಗಿದ್ದಾನೆ. ಈತ ಆಕೆಗೆ ಗಿಫ್ಟ್ ಕಳುಹಿಸುವುದಾಗಿ ತಿಳಿಸಿದ್ದಾನೆ. ಆನಂತರ ಡೆಲಿವರಿ ಬಾಯ್ ಎಂದು ಹೇಳಿಕೊಂಡ ವ್ಯಕ್ತಿ ಗಿಫ್ಟ್ ತಂದುಕೊಡಲು ಕೆಲ ಶುಲ್ಕ ನೀಡಬೇಕಾಗುತ್ತದೆ ಎಂದು ಹೇಳಿ ಹಂತ–ಹಂತವಾಗಿ 6.55 ಲಕ್ಷ ರೂ.ಗಳನ್ನು ತನ್ನ ಖಾತೆಗೆ ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ್ದಾನೆ ಎಂದು ದೂರು ದಾಖಲಾಗಿದೆ.

ಕ್ರೆಡಿಟ್ ಕಾರ್ಡ್ ಓಟಿಪಿ ಪಡೆದು ವಂಚನೆ: ಮೈಸೂರಿನ ಗಾಂಧಿನಗರದ ಎಲೆಕ್ಟ್ರಿಷಿಯನ್ ಸಿದ್ದಿಖ್ ಅಹಮದ್ (42) ಎಂಬುವರಿಗೆ ಕರೆ ಮಾಡಿದ ವಂಚಕನೋರ್ವ ಅವರ ಕ್ರೆಡಿಟ್ ಕಾರ್ಡ್‌ಗೆ ಪಾಯಿಂಟ್‌ಗಳು ಬಂದಿದೆ ಎಂದು ತಿಳಿಸಿ ಓಟಿಪಿ ಪಡೆದು 1.42 ಲಕ್ಷ ರೂ. ಅನಾಮಧೇಯ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದಾನೆ ಎಂದು ಮೈಸೂರು ನಗರ ಸೆನ್ ಠಾಣೆ ಪೊಲೀಸರು ದೂರು ನೀಡಲಾಗಿದೆ.

ಕೃಷಿಕ್ ಸರ್ವೋದಯ ಫೌಂಡೇಶನ್‌ನಿಂದ 30 ಮಂದಿಗೆ ವಿದ್ಯಾರ್ಥಿವೇತನ

ಪ್ರತಿಭೆ ಯಾರೊಬ್ಬರ ಸ್ವತ್ತಲ್ಲ, ಕೀಳರಿಮೆ ಬಿಟ್ಟು ಚೆನ್ನಾಗಿ ಓದಿ: ಕೆ.ಎಂ.ಚಂದ್ರೇಗೌಡ



ಮೈಸೂರು, ಮೇ 28: ಪ್ರತಿಭೆ ಯಾರೊಬ್ಬರ ಸ್ವತ್ತಲ್ಲ, ಕೀಳರಿಮೆ ಬಿಟ್ಟು ಚೆನ್ನಾಗಿ ಓದಿ ಎಂದು ನಿವೃತ್ತ ಮಾಹಿತಿ ಆಯುಕ್ತ ಕೆ.ಎಂ.ಚಂದ್ರೇಗೌಡ ಕರೆ ನೀಡಿದರು.

ಕೃಷಿಕ್ ಸರ್ವೋದಯ ಫೌಂಡೇಶನ್ ಮೈಸೂರು ಶಾಖೆಯು ವಿಜಯನಗರ 2ನೇ ಹಂತದ ಕೃಷಿಕ್ ಭವನದಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿವೇತನ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಿಕ್ಕ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಬೇಕು. ಆಗ ಮಾತ್ರ ಎಲ್ಲಾ ರೀತಿಯಲ್ಲಿ ಮುಂದೆ ಬರಲು ಸಾಧ್ಯ ಎಂದರು.

ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಬೇಕು. ಇದೇ ಉದ್ದೇಶಕ್ಕಾಗಿಯೇ ಅಧ್ಯಕ್ಷರಾದ ಡಾ.ವೈ.ಕೆ.ಪುಟ್ಟಸೋಮೇಗೌಡ ಈ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅದರಲ್ಲೂ ಗ್ರಾಮೀಣ ಪ್ರದೇಶದ ರೈತರ ಮಕ್ಕಳಿಗೆ ಅನುಕೂಲವಾಗಬೇಕು ಎಂಬುದು ಅದರ ಉದ್ದೇಶ. ಮೈಸೂರು ಶಾಖೆಯ ಅಧ್ಯಕ್ಷ ಟಿ.ತಿಮ್ಮೇಗೌಡ, ಅವರಿಗೆ ಸಹಕಾರ ನೀಡಿ, ವಿದ್ಯಾರ್ಥಿಗಳಿಗೆ ತರಬೇತಿಯನ್ನು ಸಂಸ್ಥೆಯ ಮೂಲಕ ಕೊಡಿಸುತ್ತಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಉಪಾಧ್ಯಕ್ಷರೂ ಆದ ರಾಜ್ಯ ಮೀನುಗಾರಿಕೆಗೆ ಮಹಾಮಂಡಳದ ಮಾಜಿ ಅಧ್ಯಕ್ಷ ಎನ್. ನಂಜೇಗೌಡ ಮಾತನಾಡಿ, ಹಿಂದೆ ಓದುವುದಕ್ಕೆ ಸಾಕಷ್ಟು ಸೌಲಭ್ಯಗಳಿರಲಿಲ್ಲ. ಆದರೆ ಈಗ ಎಲ್ಲಾ ಸೌಲಭ್ಯಗಳು ಇವೆ. ಇದರ ಪ್ರಯೋಜನ ಪಡೆಯಿರಿ ಎಂದರು.

ಖಜಾಂಚಿ ಎಸ್.ವಿ.ಗೌಡಪ್ಪ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನವನ್ನು ಸದುಪಯೋಗ ಮಾಡಿಕೊಳ್ಳಬೇಕು. ಅದೇ ರೀತಿ ತರಬೇತಿಯನ್ನು ಪಡೆಯಬೇಕು ಎಂದರು. ಮುಖ್ಯ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ವಿದ್ಯಾರ್ಥಿವೇತನ ವಿತರಿಸಿದರು.

ಕಾರ್ಯದರ್ಶಿ ಪ್ರೊ.ಬಿ.ಕೆ.ಶಿವಣ್ಣ, ಜಂಟಿ ಕಾರ್ಯದರ್ಶಿ ವೈ.ಕೆ. ಕೆಂಚೇಗೌಡ, ಸಿಆರ್‌ಪಿಎಫ್ ನಿವೃತ್ತ ಎಜಿಪಿ ಕೆ.ಅರ್ಕೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕಿ ಪಿ.ಶಾರದಮ್ಮ, ನಗರಪಾಲಿಕೆಯ ನಿವೃತ್ತ ಆಯುಕ್ತ ಡಾ.ಕೆ.ಎನ್.ಚಂದ್ರಶೇಖರ್, ಪ್ರೊ.ಬಿ.ಕೆ.ಜಗದೀಶ್, ಡಾ.ನಾಗರಾಜ್, ಕಾವೇರಿ ನೀರಾವರಿ ನಿಗಮದ ನಿವೃತ್ತ ಅಧಿಕಾರಿ ಡಿ.ರವಿಕುಮಾರ್ ಸೇರಿದಂತೆ ಹಲವಾರು ಮಂದಿ ಪಾಲ್ಗೊಂಡಿದ್ದರು. ಸಂಯೋಜಕ ಡಾ.ಕೆ. ಗೋವಿಂದರಾಜು ನಿರೂಪಿಸಿದರು. ಡಾ.ನಿಂಗರಾಜು ಹಾಗೂ ಡಾ.ಮಧುಸೂದನ್ ನಾಡಗೀತೆ ಹಾಗೂ ರೈತಗೀತೆ ಹಾಡಿದರು.

ಮೈಷುಗರ್ ಕಾರ್ಖಾನೆಗೆ ಶೀಘ್ರ ಹಣ ಬಿಡುಗಡೆ ಮಾಡಲು

ಸಿಎಂಗೆ ಶಾಸಕ ದಿನೇಶ್ ಗೂಳಿಗೌಡ ಮನವಿ



ಸಕಾರಾತ್ಮಕವಾಗಿ ಸ್ಪಂದಿಸಿದ ಸಿಎಂ

ಬೆಂಗಳೂರು, ಮೇ 28– ಮೈಷುಗರ್ ಸಕ್ಕರೆ ಕಾರ್ಖಾನೆಗೆ ಸರ್ಕಾರ ರೂ.3.75 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದು, ಬಾಕಿ ಇರುವ 46.25 ಕೋಟಿ ರೂ.ಗಳನ್ನು ಕೂಡಲೇ ಬಿಡುಗಡೆ ಮಾಡಿ, ಕಬ್ಬು ನುರಿಯುವ ಕೆಲಸ ಪ್ರಾರಂಭಕ್ಕೆ ಚಾಲನೆ ನೀಡುವಂತೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂಬಂಧ ಮಾತನಾಡಿದ ಮುಖ್ಯಮಂತ್ರಿಗಳು ಶೀಘ್ರವೇ ಬಾಕಿ ಅನುದಾನಗಳನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದಾರೆ. ಮಂಡ್ಯ ಜಿಲ್ಲೆ ಜನತೆಯ ಜೀವಾಧಾರವಾಗಿರುವ ಮೈಷುಗರ್ ಸಕ್ಕರೆ ಕಾರ್ಖಾನೆ ಪುನಾರಂಭ ಹಾಗೂ ಪುನಶ್ಚೇತನಕ್ಕಾಗಿ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 50 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದು ಅದರಲ್ಲಿ ಪ್ರಥಮ ಹಂತವಾಗಿ 15 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಲಾಗುತ್ತದೆ ಎಂಬ ಆಶ್ವಾಸನೆಯನ್ನು ಸಾರ್ವಜನಿಕವಾಗಿ ನೀಡಲಾಗಿತ್ತು. ಆದರೆ, ಇದೀಗ ಕೇವಲ 3.75 ಕೋಟಿ ರೂ. ಮಾತ್ರವೇ ಬಿಡುಗಡೆ ಮಾಡಲಾಗಿದ್ದು, ಸದರಿ ಹಣ ಜನರ ನಿರೀಕ್ಷೆ ಮತ್ತು ಕಾರ್ಖಾನೆ ಪುನರ್ ಆರಂಭಿಸುವ ಕಾರ್ಯಕ್ಕೆ ತೊಡಕನ್ನುಂಟು ಮಾಡಿದೆ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ.

ಸಾಕಷ್ಟು ಯಂತ್ರಗಳ ದುರಸ್ತಿಯಾಗಬೇಕಿದ್ದು ಇನ್ನು ಹೊಸ ಯಂತ್ರೋಪಕರಣಗಳು ಅಥವಾ ಬಿಡಿಭಾಗಗಳು ಬೇಕಿರುತ್ತವೆ. ಜೊತೆಗೆ ಇನ್ನಿತರ ಮೂಲಭೂತ ಸೌಲಭ್ಯವನ್ನು ಒದಗಿಸಿ ಸುಸ್ಥಿತಿಗೆ ತರಬೇಕಿದ್ದು, ಈ ಎಲ್ಲಾ ಪ್ರಕ್ರಿಯೆಗೆ ಈಗ ಬಿಡುಗಡೆ ಮಾಡಿರುವ 3.75 ಕೋಟಿ ರೂ. ಯಾವುದಕ್ಕೂ ಸಾಲದಾಗಿದೆ.

ಜುಲೈ ಮಾಸಾಂತ್ಯದಲ್ಲಿ ಕಾರ್ಖಾನೆಯನ್ನು ಆರಂಭಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಕ್ಕರೆ ಸಚಿವರು ಹೇಳಿಕೆ ನೀಡಿದ್ದಾರೆ. ಕಬ್ಬು ನುರಿಯಲು ಗರಿಷ್ಠ ಎಂದರೆ ಇನ್ನು ಎರಡರಿಂದ ಎರಡೂವರೆ ತಿಂಗಳ ಅವಕಾಶ ಮಾತ್ರ ಇದೆ. ಇಂತಹ ಸಂದರ್ಭದಲ್ಲಿ ಯಂತ್ರೋಪಕರಣಗಳನ್ನು ಸರಿಪಡಿಸಿ, ಸಿಬ್ಬಂದಿಯನ್ನು ನಿಯೋಜಿಸಿಕೊಂಡು ಕಾರ್ಯನಿರ್ವಹಣೆ ಮಾಡಬೇಕೆಂದರೆ ಕೆಲಸ ಕಾರ್ಯಗಳು ಚುರುಕಾಗಿ ನಡೆಯಬೇಕು. ಇದಕ್ಕೆ ಸಾಕಷ್ಟು ಹಣದ ಅವಶ್ಯಕತೆ ಇರುತ್ತದೆ. ಹಣ ಬಿಡುಗಡೆ ನಿಧಾನವಾಗುತ್ತಾ ಹೋದಂತೆ ಕಾರ್ಖಾನೆ ಆರಂಭವೂ ವಿಳಂಬವಾಗುತ್ತಾ ಹೋಗುತ್ತದೆ. ತೀರಾ ವಿಳಂಬವಾದರೆ ಕಾರ್ಖಾನೆ ಪ್ರಾರಂಭಿಸಿಯೂ ಯಾರಿಗೂ ಪ್ರಯೋಜನ ಇರುವುದಿಲ್ಲ ಎಂದು ಅವರು ವಿವರಿಸಿದ್ದಾರೆ.

ವರ್ಕಿಂಗ್ ಕ್ಯಾಪಿಟಲ್‌ಗೆ ವ್ಯವಸ್ಥೆ ಮಾಡಿ: ಯಾವುದೇ ಒಂದು ಕಾರ್ಖಾನೆ ಆರಂಭಕ್ಕೆ ಮೊದಲು ವರ್ಕಿಂಗ್ ಕ್ಯಾಪಿಟಲ್ ಇರುವುದು ಅತಿ ಅವಶ್ಯಕ. ಈ ನಿಟ್ಟಿನಲ್ಲಿ ಬಜೆಟ್‌ನಲ್ಲಿಯೂ ಪ್ರಸ್ತಾಪವಾಗಿದೆ. ಬ್ಯಾಂಕ್ ಮೂಲಕ ವರ್ಕಿಂಗ್ ಕ್ಯಾಪಿಟಲ್‌ಗೆ ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಲಾಗಿತ್ತಾದರೂ ಇನ್ನೂ ಆ ಬಗ್ಗೆ ಅಧಿಕೃತ ಕ್ರಮವಾಗಲಿ, ಆದೇಶವಾಗಲಿ ಹೊರಬಿದ್ದಿಲ್ಲ. ಕಾರ್ಖಾನೆ ಒಮ್ಮೆ ಪ್ರಾರಂಭವಾದ ಮೇಲೆ ಬರುವಂತಹ ಖರ್ಚು ವೆಚ್ಚಗಳು ಸೇರಿದಂತೆ ಕಾರ್ಖಾನೆಗೆ ಕಬ್ಬು ಹಾಕಿದ ರೈತರಿಗೆ ಹಣ ಪಾವತಿ ಮಾಡಲು ಅನುದಾನವು ಇರಬೇಕಾಗುತ್ತದೆ. ಈ ಮೂಲಕ ಸುಗಮವಾಗಿ ಚಾಲನೆ ಮಾಡಬೇಕಿದೆ. ಆದರೆ, ಈ ಬಗ್ಗೆ ಇದುವರೆಗೂ ಯಾವುದೇ ಕ್ರಮವಾಗಿಲ್ಲ. ಹೀಗಾಗಿ ತಾವುಗಳು ಈ ಎಲ್ಲ ವಿಷಯಗಳ ನಿಟ್ಟಿನಲ್ಲಿ ಗಮನಹರಿಸಿ, ಕಾರ್ಖಾನೆಗೆ ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡುವುದಲ್ಲದೆ, ಸಂಪೂರ್ಣ 50 ಕೋಟಿ ರೂ.ಗಳನ್ನು (ಅಂದರೆ ಬಾಕಿ 46.25 ಕೋಟಿ ರೂ.) ಆದಷ್ಟು ಶೀಘ್ರವಾಗಿ ಬಿಡುಗಡೆಗೊಳಿಸಿ ರೈತರ ನೆರವಿಗೆ ಧಾವಿಸಬೇಕು ಎಂದು ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ.

ಅಕ್ರಮ ದಾಸ್ತಾನು: 80 ಕ್ವಿಂಟಾಲ್ ರಾಗಿ ವಶ



ಪಾಂಡವಪುರ, ಮೇ 28– ಅಕ್ರಮವಾಗಿ ದಾಸ್ತಾನು ಮಾಡಿದ್ದ ರಾಗಿ ಗೋದಾಮಿನ ಮೇಲೆ ದಾಳಿ ನಡೆಸಿದ ತಹಸೀಲ್ದಾರ್ ಎಸ್.ಎಲ್.ನಯನ ನೇತೃತ್ವದ ಅಧಿಕಾರಿಗಳ ತಂಡ ಸುಮಾರು 80 ಕ್ವಿಂಟಾಲ್ ರಾಗಿಯನ್ನು ಶುಕ್ರವಾರ ರಾತ್ರಿ ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ತಿರುಮಲಾಪುರ ಗ್ರಾಮದ ಲೋಕೇಶ್ ಪಟ್ಟಣದ ಟಿಎಪಿಸಿಎಂಎಸ್ ಕಚೇರಿ ಎದುರಿನ ಮಳಿಗೆಯೊಂದರಲ್ಲಿ ಸುಮಾರು 80 ಕ್ವಿಂಟಾಲ್ ರಾಗಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದರು. ಈ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ತಹಸೀಲ್ದಾರ್ ಎಸ್.ಎಲ್.ನಯನ ನೇತೃತ್ವದ ಅಧಿಕಾರಿಗಳ ತಂಡ ರಾಗಿಯನ್ನು ವಶಪಡಿಸಿಕೊಂಡಿದ್ದಾರೆ.

ಈ ವೇಳೆ ತಹಸೀಲ್ದಾರ್ ಅವರು ಸ್ಥಳದಲ್ಲಿದ್ದ ಲೋಕೇಶ್ ಅವರನ್ನು ಅಕ್ರಮ ರಾಗಿ ದಾಸ್ತಾನಿನ ಬಗ್ಗೆ ವಿಚಾರ ಮಾಡಲಾಗಿ ಅವರು ಇದು ರೈತರು ಕಷ್ಟಪಟ್ಟು ಬೆಳೆದ ರಾಗಿ. ಮನೆಯಲ್ಲಿ ದಾಸ್ತಾನು ಮಾಡಲಾಗದೇ ರಾಗಿ ಖರೀದಿ ಕೇಂದ್ರಕ್ಕೆ ನೀಡಲು ಇಲ್ಲಿ ದಾಸ್ತಾನು ಮಾಡಲಾಗಿದೆ ಎಂದರು.

ಇದು ರೈತರ ರಾಗಿಯಾಗಿದ್ದರೆ ಸೂಕ್ತ ದಾಖಲೆ ನೀಡುವಂತೆ ಲೋಕೇಶ್ ಅವರಿಗೆ ತಹಸೀಲ್ದಾರ್ ತಿಳಿಸಿದರು. ಅಲ್ಲದೇ ರಾಗಿ ಗೋದಾಮು ಸೀಜ್ ಮಾಡಿ, ಇಬ್ಬರು ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಿದ್ದಾರೆ. ಈ ವೇಳೆ ಮಾತನಾಡಿದ ತಹಸೀಲ್ದಾರ್ ನಯನ ಇದು ರೈತರು ಬೆಳೆದ ರಾಗಿ ಎನ್ನುವುದಕ್ಕೆ ಸೂಕ್ತ ದಾಖಲೆ ನೀಡಲು 2 ದಿನ ಕಾಲಾವಕಾಶ ನೀಡಿದ್ದೇನೆ. ಒಂದು ವೇಳೆ ದಾಖಲಾತಿ ನೀಡದಿದ್ದರೆ, ಲೋಕೇಶ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾರ್ಯಾಚರಣೆಯಲ್ಲಿ ಆಹಾರ ನಿರೀಕ್ಷಕ ಮಂಜುನಾಥ್, ರೆವಿನ್ಯೂ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಸೇರಿದಂತೆ ಸಿಬ್ಬಂದಿ ಇದ್ದರು.

ಚಿರತೆ ದಾಳಿ: ವ್ಯಕ್ತಿಗೆ ತೀವ್ರ ಗಾಯ

ಭಾರತೀನಗರ, ಮೇ 28(ಅ.ಸತೀಶ್)– ಚಿರತೆ ದಾಳಿಗೆ ವ್ಯಕ್ತಿ ತೀವ್ರ ಗಾಯಗೊಂಡಿರುವ ಘಟನೆ ಶನಿವಾರ ಸಂಜೆ ಇಲ್ಲಿಗೆ ಸಮೀಪದ ಹೆಚ್.ಹೊಸೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ದೊಡ್ಡೇಗೌಡ ಬಿನ್ ಜಗದೀಶ್ ಗಾಯಗೊಂಡವರು. ಇಂದು ಸಂಜೆ ಜಮೀನಿಗೆ ಹಿಪ್ಪುನೇರಳೆ ಸೊಪ್ಪು ತರಲು ಹೋದಾಗ ಚಿರತೆ ದಾಳಿ ನಡೆಸಿದೆ. ಈ ವೇಳೆ ತೀವ್ರ ಗಾಯಗೊಂಡ ಅವರನ್ನು ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಈ ಸಂಬಂಧ ಕೆ.ಎಂ.ದೊಡ್ಡಿ ಠಾಣೆಯಲ್ಲಿ ದೂರು ದಾಖಲಾಗಿದೆ.

ಆಗ್ರಹ: ಹೊಸೂರು, ಬೊಪ್ಪಸಮುದ್ರ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು, ಚಿರತೆ ಹಾವಳಿ ತಪ್ಪಿಸುವಂತೆ ಹಲವು ಬಾರಿ ಮನವಿ ಮಾಡಿದರೂ ಅರಣ್ಯ ಇಲಾಖೆ ಕ್ರಮ ಕೈಗೊಂಡಿಲ್ಲ. ಚಿರತೆ ಹಾವಳಿ ತಪ್ಪಿಸದಿದ್ದರೆ ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಅರಕೆರೆ ಸರ್ಕಾರಿ ಶಾಲೆ ಕಾಂಪೌಂಡ್ ನಿರ್ಮಾಣಕ್ಕೆ ತಡೆ ಕೋರಿದ್ದ ಅರ್ಜಿ ವಜಾ



ಶ್ರೀರಂಗಪಟ್ಟಣ, ಮೇ 28(ವಿನಯ್ ಕಾರೇಕುರ)– ತಾಲೂಕಿನ ಅರಕೆರೆ ಸರ್ಕಾರಿ ಶಾಲೆ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ತಡೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯ ಶುಕ್ರವಾರ ವಜಾಗೊಳಿಸಿದ್ದು, ಸರ್ಕಾರಕ್ಕೆ ಈವರೆಗೆ ತಗುಲಿರುವ ಖರ್ಚಿನ ಹಣ ಪಾವತಿಸುವಂತೆ ಅರ್ಜಿದಾರರಿಗೆ ಆದೇಶಿಸಿದೆ.

ವಿವರ: ತಾಲೂಕಿನ ಅರಕೆರೆ ಗ್ರಾಮದ ಸರ್ಕಾರಿ ಶಾಲಾ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿ ಕಾಮಗಾರಿ ಪ್ರಾರಂಭಿಸಲಾಗಿತ್ತು. ಆದರೆ ಶಾಲೆಗೆ ಕಾಂಪೌಂಡ್ ನಿರ್ಮಿಸಿ ಸರ್ಕಾರಿ ಶಾಲೆ ಉಳಿಸುವ ನಿಟ್ಟಿನಲ್ಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಹಾಗೂ ಬೆಂಬಲಿಗರು ಮುಂದಾದರೂ, ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಹಾಗೂ ಅವರ ಬೆಂಬಲಿಗರು ಶಾಲೆ ಪಕ್ಕದಲ್ಲಿ ರಸ್ತೆ ಬಿಟ್ಟು ಕಾಂಪೌಂಡ್ ನಿರ್ಮಿಸುವಂತೆ ಹಲವು ಬಾರಿ ಕಾಮಗಾರಿಗೆ ತಡೆಯೊಡ್ಡಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ಕಾಂಪೌಂಡ್ ನಿರ್ಮಾಣಕ್ಕೆ ಮುಂದಾದ ವೇಳೆ ಎರಡೂ ಗುಂಪಿನ ನಡುವೆ ಘರ್ಷಣೆಯೂ ಸಂಭವಿಸಿತ್ತು. ಈ ವೇಳೆ ಜಿಲ್ಲಾಡಳಿತ ಮಧ್ಯ ಪ್ರವೇಶಿಸಿ ಪ್ರಕರಣ ನ್ಯಾಯಾಲಯದಲ್ಲಿರುವ ಕಾರಣ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ತಿಳಿಸಿದ್ದರಿಂದ ಕಾಮಗಾರಿ ಸ್ಥಗಿತಗೊಳಿಸಲಾಗಿತ್ತು.

ವಿಚಾರಣೆ ವೇಳೆ ಅರ್ಜಿದಾರರು ನ್ಯಾಯಾಲಯಕ್ಕೆ ಸರಿಯಾದ ಸಾಕ್ಷ್ಯಾಧಾರ ಒದಗಿಸಲು ವಿಫಲರಾಗಿದ್ದರಿಂದ ನ್ಯಾಯಾಧೀಶರು, ಕಾಮಗಾರಿ ನಿಲ್ಲಿಸಲು ಕೋರಿದ್ದ ಅರ್ಜಿಯನ್ನು ವಜಾಗೊಳಿಸಿದ್ದಾರೆ.

ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಶಾಸಕರಾಗಿದ್ದ ವೇಳೆ ಶಾಲಾ ಆವರಣದ ಮೂಲ ನಕ್ಷೆಯಲ್ಲಿ ಯಾವುದೇ ರಸ್ತೆ ಇಲ್ಲದಿದ್ದರೂ, ಅವರ ಒಡೆತನದ ಗ್ಯಾಸ್ ಗೋಡೌನ್ ಹಾಗೂ ಅವರ ಮನೆಗೆ ತೆರಳಲು ಶಾಲಾ ಆವರಣದಲ್ಲಿ ಅನಧಿಕೃತವಾಗಿ ರಸ್ತೆ ಮಾಡಿಕೊಂಡು, ಇದೀಗ ಶಾಲಾ ಕಾಂಪೌಂಡ್ ನಿರ್ಮಾಣ ಮಾಡದಂತೆ ನ್ಯಾಯಾಲಯದ ಮೆಟ್ಟಿಲೇರಿದ್ದರು. ಅವರಿಗೆ ನ್ಯಾಯಾಲಯದಿಂದ ತಕ್ಕ ಉತ್ತರ ಸಿಕ್ಕಿದೆ. ಇನ್ನೆರಡು ದಿನಗಳಲ್ಲಿ ಕಾಂಪೌಂಡ್ ನಿರ್ಮಾಣ ಕಾಮಗಾರಿ ನಡೆಸಲಾಗುವುದು ಎಂದು ಜಿಪಂ ಮಾಜಿ ಸದಸ್ಯ ಮರೀಗೌಡ ತಿಳಿಸಿದ್ದಾರೆ.

ಏನಿದು ವಿವಾದ: ಈ ಹಿಂದೆ ಶಾಲೆ ನಿರ್ಮಾಣಕ್ಕಾಗಿ ಹೊನ್ನಪ್ಪ ಟ್ರಸ್ಟ್‌ನಿಂದ ದಾನವಾಗಿ ನೀಡಲಾಗಿದ್ದ ಜಮೀನಿನಲ್ಲಿ ಇದೀಗ ಕರ್ನಾಟಕ ಪಬ್ಲಿಕ್ ಶಾಲೆ ಆರಂಭಗೊಂಡಿದ್ದು, ಶಾಲೆಯಲ್ಲಿ 1ರಿಂದ 7ನೇ ತರಗತಿವರೆಗೆ 290 ಮಕ್ಕಳು, 8 ರಿಂದ 10ನೇ ತರಗತಿವರೆಗೆ 350 ಮಕ್ಕಳು ಹಾಗೂ 250 ಮಕ್ಕಳು ಪಿಯುಸಿ ವ್ಯಾಸಂಗ ಮಾಡುತ್ತಿದ್ದಾರೆ. ಖಾಸಗಿ ವ್ಯಕ್ತಿಗಳು ಅನಧಿಕೃತವಾಗಿ ಶಾಲಾ ಆವರಣಕ್ಕೆ ಪ್ರವೇಶ ಮಾಡುತ್ತಿದ್ದು, ಮಕ್ಕಳಿಗೂ ರಕ್ಷಣೆ ಒದಗಿಸುವ ಉದ್ದೇಶದಿಂದ ಶಾಲಾ ಆವರಣಕ್ಕೆ ಕಾಂಪೌಂಡ್ ನಿರ್ಮಿಸಲು ಕಾಮಗಾರಿ ಕೈಗೊಳ್ಳಲಾಗಿತ್ತು.

ಕಾಂಪೌಂಡ್ ನಿರ್ಮಾಣಕ್ಕೆ ಮುಂದಾಗುತ್ತಾ ಜಿಲ್ಲಾಡಳಿತ: ಈವರೆಗೆ ವಿವಾದ ನ್ಯಾಯಾಲಯದಲ್ಲಿದೆ ಎನ್ನುವ ಕಾರಣ ಹೇಳಿ ಕಾಂಪೌಂಡ್ ನಿರ್ಮಾಣ ಕಾಮಗಾರಿಯನ್ನು ಜಿಲ್ಲಾಡಳಿತ ಮುಂದೂಡುತ್ತಾ ಬಂದಿತ್ತು. ಜೊತೆಗೆ ಪೊಲೀಸ್ ಇಲಾಖೆ ಸಹ ಭದ್ರತೆ ಕೊಡಲು ಹಿಂದೇಟು ಹಾಕಿತ್ತು. ಇದೀಗ ನ್ಯಾಯಾಲಯ ತಡೆ ಅರ್ಜಿ ವಜಾಗೊಳಿಸಿರುವುದರಿಂದ ಕಾಂಪೌಂಡ್ ನಿರ್ಮಿಸಲು ಕ್ರಮ ವಹಿಸುವುದೇ ಕಾದು ನೋಡಬೇಕಿದೆ.

ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ

ಜಿಲ್ಲಾ ರೈತ ಸಂಘ ಪ್ರತಿಭಟನೆ



ಚಾಮರಾಜನಗರ, ಮೇ 28(ಎಸ್‌ಎಸ್)– ಖಾಸಗಿ ಸುದ್ದಿವಾಹಿನಿಯೊಂದರಲ್ಲಿ ಪ್ರಸಾರವಾಗಿರುವ ರೈತ ಹೋರಾಟಗಾರ ಕೋಡಿಹಳ್ಳಿ ಚಂದ್ರಶೇಖರ್ ಅವರದು ಎನ್ನಲಾದ ಆಡಿಯೋ ಸಂಬಂಧ ತನಿಖೆ ನಡೆಸುವಂತೆ ಒತ್ತಾಯಿಸಿ ಜಿಲ್ಲಾ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ನಗರದಲ್ಲಿ ಶನಿವಾರ ಪ್ರತಿಭಟಿಸಿದರು.

ನಗರದ ಜಿಲ್ಲಾಡಳಿತ ಭವನದ ಮುಂದೆ ಜಮಾಯಿಸಿದ ಸಂಘಟನೆಗಳ ಮುಖಂಡರು, ಕಾರ್ಯಕರ್ತರು, ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಘೋಷಣೆ ಕೂಗಿದರು. ಕೋಡಿಹಳ್ಳಿ ಚಂದ್ರಶೇಖರ್ ಅವ್ಯವಹಾರಗಳ ಬಗ್ಗೆ ಸಿಬಿಐ ಅಥವಾ ಉಚ್ಚನ್ಯಾಯಾಲಯದ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸುವಂತೆ ಒತ್ತಾಯಿಸಿದರು.

ಕೋಡಿಹಳ್ಳಿ ಚಂದ್ರಶೇಖರ್ ಅವ್ಯವಹಾರ ಹಾಗೂ ಅಕ್ರಮಗಳ ಸಂಬಂಧದ ಆಡಿಯೋವೊಂದನ್ನು ಖಾಸಗಿ ಸುದ್ದಿವಾಹಿನಿಯೊಂದು ಪ್ರಸಾರ ಮಾಡಿದ್ದು, ಈ ಬಗ್ಗೆ ಸೂಕ್ತ ತನಿಖೆ ನಡೆದು ಸತ್ಯಾಂಶ ಹೊರಬರಬೇಕು. ಈ ಹಣದಲ್ಲಿ ಸರ್ಕಾರದ ಪರ ಅಥವಾ ಯಾವುದೇ ಪಕ್ಷದ ಪರ ಕುಮ್ಮಕ್ಕು ನೀಡಿದ್ದರೆ ಕಾನೂನು ಪ್ರಕಾರ ಶಿಕ್ಷಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಕರ್ನಾಟಕದ ರೈತ ಚಳವಳಿ ಒಂದು ಚಾರಿತ್ರಿಕ ಹಿನ್ನೆಲೆಯಲ್ಲಿ ಹುಟ್ಟಿರುವ ಚಳವಳಿ. ರೈತಸಂಘವನ್ನು ವಿಶ್ವ ರೈತ ಚೇತನ ಪ್ರೊ.ಎಂ.ಡಿ.ನಂಜುಂಡಸ್ವಾಮಿ, ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎನ್.ರುದ್ರಪ್ಪ, ಎಂ.ಡಿ.ಸುಂದರೇಶ್, ಕೆ.ಎಸ್.ಪುಟ್ಟಣ್ಣಯ್ಯ, ಕಡಿದಾಳ್ ಶಾಮಣ್ಣ, ಸುರೇಶ್‌ಬಾಬು, ಗಣಪತಿ ಪಾಟೀಲ್, ರುದ್ರಪ್ಪ ಮೊಕಾಶಿ, ಚೆನ್ನಬಸಪ್ಪ ಬೆಟ್ಟದೂರ ಸೇರಿದಂತೆ ಇನ್ನು ಹಲವಾರು ಮಹನೀಯರು ಕಟ್ಟಿ ಬೆಳೆಸಿದ್ದಾರೆ. ಈ ರೈತ ಚಳವಳಿ ಹಳ್ಳಿಯಿಂದ–ದಿಲ್ಲಿಯವರೆಗೆ ಹಾಗೂ ದಿಲ್ಲಿಯಿಂದ ಪ್ರಪಂಚದ ನಾನಾ ಮೂಲೆಗಳಿಗೆ ವಿಸ್ತರಿಸಿದೆ. ಇಂತಹ ಪಾವಿತ್ರ್ಯತೆವುಳ್ಳ ಚಳವಳಿಯಲ್ಲಿ ಕೆಲ ವ್ಯಕ್ತಿಗಳು ನುಸುಳಿಕೊಂಡು ರೈತರ ಸ್ವಾಭಿಮಾನ ಸಂಕೇತವಾದ ಹಸಿರು ಟವಲ್ ಧರಿಸಿ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಚಳವಳಿಗಾರರು ದೂರಿದರು.

ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಭ್ರಷ್ಟಾಚಾರ ಹಿನ್ನೆಲೆಯಲ್ಲಿ ಚಳವಳಿಯಿಂದ ದೂರ ಇಡಲಾಗಿದೆ. ಆದರೆ ಅವರು ತಾನೇ ಅಧ್ಯಕ್ಷನೆಂದು ಸ್ವಯಂ ಘೋಷಿಸಿಕೊಂಡು ಚಳವಳಿ ಹಾಗೂ ಹಸಿರು ಟವಲ್‌ಗೆ ಅಪಮಾನ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಗೌಡೇಗೌಡ, ಮೂಡ್ನಕೂಡು ಮಹೇಶ್, ತಾಲೂಕು ಅಧ್ಯಕ್ಷ ಮಹದೇವಪ್ರಸಾದ್, ಸಿದ್ದರಾಜು, ಆಲೂರು ಸಂತೋಷ್, ನಾಗರಾಜು, ಭಾಸ್ಕರ್, ಮಹದೇವ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಪರ ಧ್ರುವನಾರಾಯಣ್ ಮತಯಾಚನೆ



ಚಾಮರಾಜನಗರ, ಮೇ28(ಎಸ್‌ಎಸ್)– ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರ ಪರ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನಗರದ ನಾನಾ ಶಾಲಾ, ಕಾಲೇಜುಗಳಿಗೆ ಭೇಟಿ ನೀಡಿ ಮತಯಾಚಿಸಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜು, ಮೆಡಿಕಲ್ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷಿ ಕಾಲೇಜು, ಸಂತ ಜೋಸೆಫ್ ಶಾಲೆ, ಸಂತ ಫ್ರಾನ್ಸಿಸ್ ಶಾಲೆ, ಸಂತಪೌಲರ ಶಾಲೆ, ಸಿದ್ದಾರ್ಥ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಮಹಿಳಾ ಕಾಲೇಜು ಸೇರಿದಂತೆ ಇನ್ನಿತರ ಶಾಲಾ– ಕಾಲೇಜುಗಳಿಗೆ ಭೇಟಿ ನೀಡಿ ಪದವೀಧರರಲ್ಲಿ ಮತಯಾಚಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರಿಗೆ ಮೊದಲ ಪ್ರಾಶಸ್ತ್ಯದ ಮತಗಳನ್ನು ಹಾಕುವ ಮೂಲಕ ಹೆಚ್ಚಿನ ಮತಗಳ ಅಂತರದಲ್ಲಿ ಗೆಲ್ಲಿಸಿ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿದೆ. ಕಡ್ಡಾಯ ಮತ್ತು ಉಚಿತ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದ್ದು ಅಲ್ಲದೆ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಮಾಡಿಕೊಟ್ಟಿದೆ. ಬೋಧಕ, ಬೋಧಕೇತರ ಜ್ವಲಂತ ಸಮಸ್ಯೆಗಳು, ಪದವೀಧರರ ನಿರುದ್ಯೋಗ ಸಮಸ್ಯೆಗಳ ನಿವಾರಣೆಗೆ ಮಧು ಜಿ.ಮಾದೇಗೌಡ ಅವರನ್ನು ಆಶೀರ್ವದಿಸಬೇಕು ಎಂದು ಕೋರಿದರು.

ಅಭ್ಯರ್ಥಿ ಮಧು ಜಿ.ಮಾದೇಗೌಡ ಮಾತನಾಡಿದರು. ಈ ಸಂದರ್ಭದಲ್ಲಿ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಆರ್.ನರೇಂದ್ರ, ಮಾಜಿ ಶಾಸಕರಾದಎ.ಆರ್.ಕೃಷ್ಣಮೂರ್ತಿ, ಎಸ್.ಜಯಣ್ಣ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಕಾಂಗ್ರೆಸ್ ಮುಖಂಡ ಗಣೇಶ್ ಪ್ರಸಾದ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಪಂ ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ, ಜಿಲ್ಲಾ ಮಾಧ್ಯಮ ಕಾರ್ಯದರ್ಶಿ ಅರುಣ್‌ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್, ಗುರುಸ್ವಾಮಿ, ಹೆಚ್.ವಿ.ಚಂದ್ರು, ಮಹಿಳಾ ಜಿಲ್ಲಾಧ್ಯಕ್ಷೆ ಲತಾ ಜತ್ತಿ ಇತರರಿದ್ದರು.

ಹಲ್ಲೆ, ಹತ್ಯೆ ಪ್ರಕರಣ: ಓರ್ವನಿಗೆ ಜೀವಾವಧಿ, ಇಬ್ಬರಿಗೆ ಸಾದಾ ಸಜೆ ಶಿಕ್ಷೆ

ಚಾಮರಾಜನಗರ, ಮೇ 28–ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ವ್ಯಕ್ತಿಯ ಸಾವಿಗೆ ಕಾರಣರಾದ ಹಾಗೂ ಜಗಳ ಬಿಡಿಸಲು ಹೋದ ಇನ್ನಿಬ್ಬರಿಗೆ ಹಲ್ಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವನಿಗೆ ಜೀವಾವಧಿ ಶಿಕ್ಷೆ ಹಾಗೂ ಇಬ್ಬರು ಆರೋಪಿಗಳಿಗೆ ತಲಾ 3 ತಿಂಗಳ ಸಾದಾ ಸಜೆ ವಿಧಿಸಿ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತೀರ್ಪು ನೀಡಿದೆ.

ಗುಂಡ್ಲುಪೇಟೆ ತಾಲೂಕಿನ ಹಳ್ಳದಮಾದಳ್ಳಿ ನಿವಾಸಿಗಳಾದ 1ನೇ ಆರೋಪಿ ಪ್ರಕಾಶ ಜೀವಾವಧಿ ಶಿಕ್ಷೆಗೆ ಹಾಗೂ 2ನೇ ಆರೋಪಿ ಹೆಚ್.ವಿ.ಬಸವರಾಜು ಹಾಗೂ 5ನೇ ಆರೋಪಿ ಹೆಚ್.ಎಂ.ಮಹದೇವಪ್ಪ 3 ತಿಂಗಳ ಸಾದಾ ಸಜೆಗೆ ಗುರಿಯಾದವರಾಗಿದ್ದಾರೆ.

ಪಿಎಲ್‌ಡಿ ಬ್ಯಾಂಕ್ ಚುನಾವಣಾ ವಿಚಾರವಾಗಿ ಉಂಟಾಗಿದ್ದ ದ್ವೇಷದಿಂದ 2015ರ ಫೆ.19ರಂದು ಹಳ್ಳದಮಾದಳ್ಳಿ ಗ್ರಾಮದಲ್ಲಿ ಗಲಾಟೆ ನಡೆಸಿದ ಆರೋಪಿ ಪ್ರಕಾಶ, ಗ್ರಾಮದವರೇ ಆದ ಚೆನ್ನಮಲ್ಲಪ್ಪ ಅವರಿಗೆ ಮಚ್ಚಿನಿಂದ ಹೊಡೆದು ಗಾಯಗೊಳಿಸಿದ್ದ. ಗ್ರಾಮದ ಹೆಚ್.ವಿ.ಬಸವರಾಜು, ಹೆಚ್.ಎಂ.ಬಸಪ್ಪ, ಶಂಕರ, ಮಹದೇವಪ್ಪ ಸಹ ಪ್ರಕಾಶನ ಜೊತೆಗೂಡಿ ಹಲ್ಲೆಗೆ ನಡೆಸಿದ್ದರು. ಜಗಳ ಬಿಡಿಸಲು ಹೋದ ಅದೇ ಗ್ರಾಮದ ಶಿವನಾಗಪ್ಪ ಹಾಗೂ ಬಸವಣ್ಣ ಅಲಿಯಾಸ್ ಕಾಡಪ್ಪ ಅವರ ಮೇಲೆ ಆರೋಪಿ ಬಸವರಾಜು ಸಹ ದೊಣ್ಣೆಯಿಂದ ಹಲ್ಲೆ ನಡೆಸಿದ್ದ. ಗಲಾಟೆ ವೇಳೆ ಚೆನ್ನಮಲ್ಲಪ್ಪ ಅವರ ಪುತ್ರ ಮಹೇಶ್, ಮಹದೇವಪ್ಪ ಸೇರಿದಂತೆ ಆರೋಪಿ ಶಂಕರ ಸಹ ಗಾಯಗೊಂಡಿದ್ದರು. ಚೆನ್ನಮಲ್ಲಪ್ಪ ಅವರು ತೀವ್ರವಾಗಿ ಗಾಯಗೊಂಡಿದ್ದು, ಮೈಸೂರು ಖಾಸಗಿ ಆಸ್ಪತ್ರೆಗೆ ಚಿಕಿತ್ಸೆ ಫಲಿಸದೆ 2015ರ ಮಾ.19ರಂದು ಮೃತಪಟ್ಟಿದ್ದರು.

ಆರೋಪಿಗಳ ವಿರುದ್ಧ ಬೇಗೂರು ಠಾಣೆಯಲ್ಲಿ ದೂರು ದಾಖಲಾಗಿತ್ತು. ಜಿಲ್ಲಾ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿತ್ತು. ಈ ಅವಧಿಯಲ್ಲಿ ಗಾಯಾಳು ಹೆಚ್.ಎಂ.ಚೆನ್ನಬಸಪ್ಪ ಮತ್ತು ಗಾಯಗೊಂಡಿದ್ದ ಆರೋಪಿ ಶಂಕರ್ ಮೃತಪಟ್ಟಿದ್ದರು. ಆರೋಪಿಗಳ ಕೃತ್ಯ ಸಾಬೀತಾದ ಕಾರಣ ಒಂದನೇ ಆರೋಪಿ ಪ್ರಕಾಶಗೆ ಜೀವವಧಿ ಶಿಕ್ಷೆ, 1 ಲಕ್ಷ ರೂ. ದಂಡ ಹಾಗೂ 1 ಲಕ್ಷ ರೂ. ಹಣವನ್ನು ಚೆನ್ನಮಲ್ಲಪ್ಪ ಕುಟುಂಬಕ್ಕೆ ಪರಿಹಾರ ರೂಪದಲ್ಲಿ ನೀಡುವಂತೆ ಆದೇಶಿಸಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಅವರು ತೀರ್ಪು ನೀಡಿದ್ದಾರೆ. ಎರಡನೇ ಆರೋಪಿ ಹೆಚ್.ವಿ. ಬಸವರಾಜು ಮತ್ತು ಐದನೇ ಆರೋಪಿ ಹೆಚ್.ಎಂ. ಮಹದೇವಪ್ಪ ಅವರಿಗೆ ತಲಾ 3 ತಿಂಗಳ ಸಾದಾ ಸಜೆ, 15 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರ ಅಭಿಯೋಜಕಿ ಟಿ.ಹೆಚ್.ಲೋಲಾಕ್ಷಿ ವಾದ ಮಂಡಿಸಿದ್ದರು.

ವೈ.ಕೆ.ಮೋಳೆಯಲ್ಲಿ ಭಗೀರಥ ಜಯಂತಿ



ಯಳಂದೂರು,ಮೇ 28 (ವಿ.ನಾಗರಾಜು)– ತಾಲೂಕಿನ ವೈ.ಕೆ.ಮೋಳೆ ಗ್ರಾಮದಲ್ಲಿ ಶ್ರೀ ಭಗೀರಥ ಮಹರ್ಷಿಯ ಜಯಂತಿಯನ್ನು ಶನಿವಾರ ಸಂಭ್ರಮ, ಸಡಗರದಿಂದ ಆಚರಿಸಲಾಯಿತು.

ಭಗೀರಥ ಮಹರ್ಷಿಯ ಭಾವಚಿತ್ರಕ್ಕೆ ವಿಶೇಷ ಹೂವಿನ ಅಲಂಕಾರ ಮಾಡಿ, ಪೂಜೆ ಸಲ್ಲಿಸಿ ಗ್ರಾಮದ ದೊಡ್ಡಮ್ಮತಾಯಿ ದೇಗುಲದಿಂದ ಸತ್ತಿಗೆ–ಸೂರಪಾನಿಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಮಂಗಳವಾದ್ಯ, ತಮಟೆ, ನಗಾರಿಗಳನ್ನು ಬಾರಿಸಿ, ಯುವಕರ ತಂಡವು ನೃತ್ಯವನ್ನು ಮಾಡುವ ಮೂಲಕ ಮೆರವಣಿಗೆಗೆ ಹೊಸ ಮೆರುಗನ್ನು ತಂದುಕೊಟ್ಟರು. ಯುವಕರ ತಂಡದ ಸದಸ್ಯರು ಗ್ರಾಮೀಣ ಸೊಗಡಿನ ಮಾರಿ ಕುಣಿತವನ್ನು ಮಾಡುವ ಮೂಲಕ ಗಮನ ಸೆಳೆದರು. ದಾರಿಯುದ್ದಕ್ಕೂ ಮಹಿಳೆಯರೂ ಸೇರಿದಂತೆ ತಮ್ಮ ಮನೆ ಮುಂದೆ ಮಹರ್ಷಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಭಕ್ತಿ ಮೆರೆದರು. ಈ ಸಂದರ್ಭದಲಿ ಉಪ್ಪಾರ ಜನಾಂಗದ ಯಜಮಾನರು, ಕುಲಸ್ಥರು ಹಾಗೂ ಗ್ರಾಮಸ್ಥರು ಹಾಜರಿದ್ದರು.



ಗುಂಡ್ಲುಪೇಟೆ ತಾಲೂಕಿನ ಬೇಗೂರು ಪೊಲೀಸ್ ಠಾಣೆಗೆ ದಕ್ಷಿಣವಲಯದ ಐಜಿಪಿ ಪವಾರ್ ಪ್ರವೀಣ್ ಮಧುಕರ್ ಭೇಟಿ ನೀಡಿದರು. ಇವರನ್ನು ಜಿಲ್ಲಾ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್, ಅಡಿಷನಲ್ ಎಸ್ಪಿ ಸುಂದರ್‌ರಾಜ್, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಬೇಗೂರು ವೃತ್ತ ನಿರೀಕ್ಷಕ ಕಿರಣ್‌ಕುಮಾರ್ ಪಿಎಸ್‌ಐ ಜಗದೀಶ್ ಧೂಳ್‌ಶೆಟ್ಟಿ ಹಾಗೂ ಸಿಬ್ಬಂದಿ ಸ್ವಾಗತಿಸಿ, ಅಭಿನಂದಿಸಿದರು. ಫೋಟೋ: ಕಿರಣ್ ಬೇಗೂರು.

ಅಪರಿಚಿತ ಕಾರು ಡಿಕ್ಕಿ: ಬೈಕ್ ಸವಾರರು ಸಾವು



ಕಾಂತಾಚಾರಿ



ವೆಂಕಟೇಶ್

ಬೇಗೂರು, ಮೇ 28(ಕಿರಣ್)–ಅಪರಿಚಿತ ಕಾರು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸವಾರರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಹಸಗೂಲಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದಿದೆ. ಆಲತ್ತೂರು ಗ್ರಾಮದ ಕಾಂತಾಚಾರಿ(50), ಅಳಿಯ ವೆಂಕಟೇಶ್(32) ಮೃತಪಟ್ಟವರು.

ಕಾಂತಾಚಾರಿ ಅವರು ಅಳಿಯ ವೆಂಕಟೇಶ್‌ನೊಡನೆ ಬೇಗೂರು ಆಸ್ಪತ್ರೆಯಲ್ಲಿದ್ದ ತಮ್ಮ ಸಂಬಂಧಿಕರನ್ನು ನೋಡಿಕೊಂಡು ಬೇಗೂರಿನಿಂದ ತಮ್ಮ ಸ್ವಗ್ರಾಮದತ್ತ ಬೈಕ್‌ನಲ್ಲಿ ತೆರಳುತ್ತಿದ್ದಾಗ ಹಸಗೂಲಿ ಗ್ರಾಮದ ಬಳಿ ಅಪರಿಚಿತ ಕಾರೊಂದು ಡಿಕ್ಕಿ ಹೊಡೆದು, ಕಾರು ಚಾಲಕ ಅಪಘಾತ ಬಳಿಕ ವಾಹನ ಸಮೇತ ಪರಾರಿಯಾಗಿದ್ದು, ಸ್ಥಳದಲ್ಲಿ ಕಾರಿನ ಕೆಲವು ಭಾಗಗಳು ಪತ್ತೆಯಾಗಿದೆ. ಈ ಬಗ್ಗೆ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಪತ್ನಿ ಕೊಂದು ಪೊಲೀಸರಿಗೆ ಶರಣಾದ ಪತಿ



ಚಾಮರಾಜನಗರ, ಮೇ 28(ಎಸ್‌ಎಸ್)–ಪತಿಯು ತನ್ನ ಪತ್ನಿಯನ್ನು ಕೊಲೆಗೈದು ಪೊಲೀಸರಿಗೆ ಶರಣಾಗಿರುವ ಘಟನೆ ತಾಲೂಕಿನ ಕಿಲಗೆರೆ ಬಳಿಯ ಬೆಲದಕುಪ್ಪೆ ಗ್ರಾಮದಲ್ಲಿ ಶನಿವಾರ ಬೆಳಗ್ಗೆ ನಡೆದಿದೆ. ಗ್ರಾಮದ ಮಹದೇವಪ್ಪ(52) ತನ್ನ ಪತ್ನಿ ಮಹದೇವಮ್ಮ ಉ.ಜಾನಕಮ್ಮ(45) ಅವರನ್ನು ಹತ್ಯೆ ಮಾಡಿದ್ದು, ಬಳಿಕ ತಾನೇ ಗ್ರಾಮದ ಬಳಿಯ ತೆರಕಣಾಂಬಿ ಠಾಣೆಗೆ ತೆರಳಿ ಪೊಲೀಸರಿಗೆ ಶರಣಾಗಿದ್ದಾನೆ.

ಕಿಲಗೆರೆ–ಮಾದಲವಾಡಿ ಗ್ರಾಮ ನಡುವಿನ ಬೇಲದಕುಪ್ಪೆ ಗ್ರಾಮಕ್ಕೆ ಸೇರುವ ಅವರ ಜಮೀನಲ್ಲಿ ಶೆಡ್ಡಿನ ಮನೆ ನಿರ್ಮಿಸಿಕೊಂಡು ಮಹದೇವಪ್ಪ–ಮಹದೇವಮ್ಮ ದಂಪತಿ ವಾಸವಾಗಿದ್ದರು. ದಂಪತಿಗೆ ಇಬ್ಬರು ಪುತ್ರಿಯರಿದ್ದು, ಇಬ್ಬರಿಗೂ ಮದುವೆಯಾಗಿದೆ. ಶನಿವಾರ ಬೆಳಗ್ಗೆ ದಂಪತಿ ನಡುವೆ ಗಲಾಟೆ ನಡೆದು ವಿಕೋಪಕ್ಕೆ ತಿರುಗಿ ಈ ದುರ್ಘಟನೆ ಸಂಭವಿಸಿದೆ ಎನ್ನಲಾಗಿದೆ. ಗಲಾಟೆಗೆ ನಿಖರ ಕಾರಣ ತಿಳಿದು ಬಂದಿಲ್ಲ ಆದರೆ ಮಹದೇವಪ್ಪ ಅವರ ಅಳಿಯ ಮಹದೇವಸ್ವಾಮಿ ತೆರಕಣಾಂಬಿ ಠಾಣೆಯಲ್ಲಿ ದೂರು ನೀಡಿದ್ದು, ನನ್ನ ಮಾವ ಅತ್ತೆ ಜೊತೆ ಆಗಾಗ ಜಗಳ ಮಾಡುತ್ತಿದ್ದರು. ಅವರ ಮೇಲೆ ಸಂಶಯಪಡುತ್ತಿದ್ದರು. ಇದರಿಂದಲೇ ಕೊಲೆ ನಡೆದಿದೆ. ನನ್ನ ಮಾವ ಮಹದೇವಪ್ಪ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ತಿಳಿಸಿದ್ದಾರೆ. ಎಸ್ಪಿ ಶಿವಕುಮಾರ್, ಎಎಸ್ಪಿ ಸುಂದರರಾಜು, ಡಿವೈಎಸ್ಪಿ ಪ್ರಿಯದರ್ಶಿ ಸಾಣೆಕೊಪ್ಪ, ತೆರಕಣಾಂಬಿ ಠಾಣೆ ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಬಗ್ಗೆ ತೆರಕಣಾಂಬಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಇಂದು ಹಿಂದೂ ಕಪ್ ಶೆಟಲ್ ಬ್ಯಾಡ್ಮಿಂಟನ್ ಫೈನಲ್ ಪಂದ್ಯ

ವಿರಾಜಪೇಟೆ, ಮೇ.28– ಕಾಕೋಟುಪರಂಬು ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಕ್ಲಬ್ ವತಿಯಿಂದ ಪುರುಷರು ಹಾಗೂ ಮಹಿಳೆಯರಿಗೆ ಮೇ 26 ರಿಂದ ನಡೆಯುತ್ತಿರುವ ಜಿಲ್ಲಾ ಮಟ್ಟದ ಪ್ರಥಮ ವರ್ಷದ ಹಿಂದೂ ಕಪ್ ಶೆಟಲ್ ಬ್ಯಾಡ್ಮಿಂಟನ್ ಫೈನಲ್ ಪಂದ್ಯವು ಮೇ 29ರಂದು ಸಂಜೆ 6 ಗಂಟೆಗೆ ಕಾಕೋಟೂಪರಂಬು ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆಯಲಿದೆ ಎಂದು ಕ್ಲಬ್ ಅಧ್ಯಕ್ಷ ಮೇವಡ ಚಿಣ್ಣಪ್ಪ ಹೇಳಿದರು

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 2008 ರಲ್ಲಿ ಪ್ರಾರಂಭಗೊಂಡ ಕ್ಲಬ್ ಉತ್ತಮವಾಗಿ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. 2013 ರಿಂದ 2019 ರವರೆಗೆ ಜಿಲ್ಲಾ ಮಟ್ಟದ ಹಾಕಿ ಪಂದ್ಯಾವಳಿಗಳನ್ನು ಯಶಸ್ವಿಯಾಗಿ ನಡೆಸಿದ ಹೆಗ್ಗಳಿಕೆ ಇದ್ದು, ಯುವ ಪೀಳಿಗೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ 30 ಲಕ್ಷ ವೆಚ್ಚದಲ್ಲಿ ವುಡನ್ ಶೆಟಲ್ ಕೋರ್ಟ್ ನಿರ್ಮಾಣ ಮಾಡಲಾಗಿದೆ. ಶೆಟಲ್ ಪಂದ್ಯಾಟವನ್ನು ಪುರುಷ ಕ್ರೀಡಾಪಟುಗಳ ವಯೋಮಿತಿಯ ಆಧಾರದ ಮೇಲೆ ಆಯೋಜಿಸಲಾಗಿದೆ ಎಂದರು.

ಆಟಗಾರರಿಂದ ಉತ್ತಮ ಸ್ಪಂದನೆ ದೊರೆತಿದೆ. ಪಂದ್ಯಾಟದ ಪ್ರಥಮ ಹಾಗು ದ್ವಿತೀಯ ವಿಜೇತರಿಗೆ ನಗದು ಹಾಗೂ ಆಕರ್ಷಕ ಟ್ರೋಫಿ ನೀಡಲಾಗುವುದು ಎಂದು ತಿಳಿಸಿದ ಅವರು ಮೇ 29 ರಾಜ್ಯ ಮಟ್ಟದ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ನಡೆಯಲಿದೆ.

ಸಮಾರೋಪ ಸಮಾರಂಭ ಫೈನಲ್ ಪಂದ್ಯಾಟದ ಸಂಜೆ ನಡೆಯಲಿದ್ದು ಸಭೆಯ ಅಧ್ಯಕ್ಷತೆಯನ್ನು ಕ್ಲಬ್ ಅಧ್ಯಕ್ಷ ಮೇವಡ ಚಿಣ್ಣಪ್ಪ ವಹಿಸಲಿದ್ದಾರೆ. ಗೋಷ್ಠಿಯಲ್ಲಿ ನಿರ್ದೇಶಕರಾದ ಮೇವಡ ಅಯ್ಯಣ್ಣ, ಐಚೇಟಿರ ಚಂಗಪ್ಪ ಉಪಸ್ಥಿತರಿದ್ದರು.

ಮಡಿಕೇರಿಯಲ್ಲಿ 'ಕ್ರಿಟಿಕಲ್ ಕೇರ್ ಸೆಂಟರ್' ನಿರ್ಮಾಣ

ಕೇಂದ್ರದಿಂದ 25 ಕೋಟಿ ರೂ. ಬಿಡುಗಡೆ, ಶೀಘ್ರ ಕಾಮಗಾರಿ ಆರಂಭ

- ಪ್ರಧಾನಿ ಆಯುಷ್ಮಾನ್ ಭಾರತ್ ಯೋಜನೆಯಡಿ ಮಂಜೂರು
- ನಾಳೆ ಉನ್ನತಾಧಿಕಾರಿಗಳು, ಆರ್ಕಿಟೆಕ್ಟ್‌ಗಳಿಂದ ಸ್ಥಳ ಪರಿಶೀಲನೆ



ಮಡಿಕೇರಿಯಲ್ಲಿ ನಿರ್ಮಾಣವಾಗಲಿರುವ ಕ್ರಿಟಿಕಲ್ ಕೇರ್ ಸೆಂಟರ್‌ನ ನೀಲ ನಕ್ಷೆ.

ಮಡಿಕೇರಿ, ಮೇ 28– ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಯೋಜನೆ ಅಡಿಯಲ್ಲಿ ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ನಿರ್ಣಾಯಕ ಆರೈಕೆ ಕೇಂದ್ರ(ಕ್ರಿಟಿಕಲ್ ಕೇರ್ ಸೆಂಟರ್) ಆಸ್ಪತ್ರೆ ನಿರ್ಮಾಣವಾಗಲಿದೆ. ಈ ಯೋಜನೆಗೆ ಕೇಂದ್ರ ಸರಕಾರ ಈಗಾಗಲೇ 25 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, ಮುಂದಿನ ದಿನಗಳಲ್ಲಿ ಆಸ್ಪತ್ರೆ ಕಟ್ಟಡ ಕಾಮಗಾರಿ ಆರಂಭವಾಗಲಿದೆ.

ಅಂದಾಜು ವೆಚ್ಚ: ಕೇಂದ್ರ ಸರಕಾರ ಬಿಡುಗಡೆ ಮಾಡಿರುವ ಮಾರ್ಗಸೂಚಿಯ ಪ್ರಕಾರ ಕೊಡಗು ಜಿಲ್ಲೆಯ ಒಟ್ಟು ಜನಸಂಖ್ಯೆ 5ರಿಂದ 20 ಲಕ್ಷದ ಒಳಗಿದ್ದು, ಈ ಪ್ರದೇಶದಲ್ಲಿ 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಸೆಂಟರ್ ಆರಂಭವಾಗಲಿದೆ. ಒಟ್ಟು 4250 ಚದರ ಅಡಿ ವಿಸ್ತೀರ್ಣದಲ್ಲಿ ಕಟ್ಟಡ ತಲೆ ಎತ್ತಲಿದ್ದು, ಕಟ್ಟಡಕ್ಕೆ 16.63 ಕೋಟಿ ರೂ. ಹಾಗೂ ಜೀವ ರಕ್ಷಕ ಉಪಕರಣ ಸಹಿತ ಇತರ ಮೂಲ ಸೌಕರ್ಯ ಸೇರಿದಂತೆ ಒಟ್ಟು 23.75 ಕೋಟಿ ರೂ.ಗಳ ವೆಚ್ಚ ತಗುಲಲಿದೆ ಎಂದು ಅಂದಾಜು ಮಾಡಲಾಗಿದೆ.

ಕೇಂದ್ರ ಮಾರ್ಗಸೂಚಿ: ಜಿಲ್ಲಾ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜಿನ ಅವಿಭಾಜ್ಯ ಅಂಗವಾಗಿ ಕ್ರಿಟಿಕಲ್ ಕೇರ್ ಸೆಂಟರ್ ಕಾರ್ಯಾಚರಣೆ ಮಾಡಲಿದ್ದು, ಜಿಲ್ಲಾ ಆರೋಗ್ಯ ಸಮಿತಿ ಈ ಕೇಂದ್ರದ ಮೇಲ್ವಿಚಾರಣೆ ನಡೆಸಲಿದೆ. ರಾಜ್ಯದಲ್ಲಿ ನಿರ್ಮಾಣವಾಗುವ ಕ್ರಿಟಿಕಲ್ ಕೇರ್ ಸೆಂಟರ್ ಕೇಂದ್ರಗಳ ನಿರ್ಮಾಣ ಮತ್ತು ಕಾರ್ಯ ನಿರ್ವಹಣೆಯ ಜವಾಬ್ದಾರಿಗಳನ್ನು ರಾಜ್ಯ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ಹೆಚ್ಚುವರಿ ಕಾರ್ಯದರ್ಶಿಗಳು ಮತ್ತು ಆ ಹುದ್ದೆಗೆ ಸಮನಾದ ಹುದ್ದೆಯ ಅಧಿಕಾರಿಗಳು ವಹಿಸಬೇಕು ಎಂದು ಕೇಂದ್ರ ಸರಕಾರ ಮಾರ್ಗಸೂಚಿಯಲ್ಲಿ ಪ್ರಕಟಿಸಿದೆ.

ಕಟ್ಟಡ ನಿರ್ಮಾಣ, ಅಗ್ನಿ ಶಾಮಕ ದಳದ ನಿರಾಕ್ಷೇಪಣಾ ಪತ್ರ, ಉದ್ದೇಶಿತ ಕಟ್ಟಡಕ್ಕೆ ಭೂಮಿ ನೀಡುವ ಜವಾಬ್ದಾರಿಯನ್ನು ಆಯಾ ರಾಜ್ಯ ಸರಕಾರವೇ ಹೊರಬೇಕಿದೆ. ಜಿಲ್ಲಾಸ್ಪತ್ರೆ, ಮೆಡಿಕಲ್ ಕಾಲೇಜು ಹೊಂದಿಕೊಂಡಂತೆ ಈ ಕ್ರಿಟಿಕಲ್ ಕೇರ್ ಸೆಂಟರ್ ನಿರ್ಮಾಣವಾಗಲಿದ್ದು, ಜನ ಸಂಖ್ಯೆ ಆಧರಿಸಿ 50, 75 ಹಾಗೂ ಗರಿಷ್ಠ 100 ಬೆಡ್‌ಗಳ ನಿರ್ಣಾಯಕ ಆರೋಗ್ಯ ಕೇಂದ್ರ ಸ್ಥಾಪನೆ ಮಾಡಲಾಗುತ್ತದೆ. ಉದ್ದೇಶಿತ ಕಟ್ಟಡದ ನೀಲನಕ್ಷೆ, ಮತ್ತು ಮೂಲ ಸೌಕರ್ಯಗಳಿಗೆ ರಾಜ್ಯ ಸರಕಾರವೇ ಕೇಂದ್ರ ಸರಕಾರಕ್ಕೆ ವಿಸ್ತೃತ ಯೋಜನಾ ಪಟ್ಟಿಯನ್ನು ಸಲ್ಲಿಸಬೇಕು ಎಂದು ಮಾರ್ಗಸೂಚಿಯಲ್ಲಿ ಕೇಂದ್ರ ಸರಕಾರ ಸ್ಪಷ್ಟಪಡಿಸಿದೆ.

ರಾಜ್ಯ ಮಟ್ಟದಲ್ಲಿ ಆರೋಗ್ಯ ಇಲಾಖೆ ಹಾಗೂ ರಾಷ್ಟ್ರ ಮಟ್ಟದಲ್ಲಿ ರಾಷ್ಟ್ರೀಯ ಆರೋಗ್ಯ ಮಿಷನ್ (ಎನ್‌ಹೆಚ್‌ಎಂ) ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಿವೆ. ದೇಶದ 274 ಜಿಲ್ಲೆಗಳು 5ರಿಂದ 20 ಲಕ್ಷ ಜನ ಸಂಖ್ಯೆ ಹೊಂದಿದ್ದು, ಈ ಭಾಗಗಳಲ್ಲಿ 50 ಬೆಡ್‌ಗಳ ನಿರ್ಣಾಯಕ ಆರೋಗ್ಯ ಕೇಂದ್ರ ತೆರೆಯಲು ಕೇಂದ್ರ ಸರಕಾರ ನಿರ್ಧರಿಸಿದೆ ಎಂದು ತಿಳಿದು ಬಂದಿದೆ.

ನಿರ್ಣಾಯಕ ಆರೈಕೆ ಕೇಂದ್ರದ ಕುರಿತು "ಮೈಸೂರು ಮಿತ್ರ"ನೊಂದಿಗೆ ಮಾಹಿತಿ ಹಂಚಿಕೊಂಡ ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್, 'ಕ್ರಿಟಿಕಲ್ ಕೇರ್ ಸೆಂಟರ್' ಅನ್ನು ಕೊಡಗು ಜಿಲ್ಲೆಗೆ ನೀಡಿದ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಆರೋಗ್ಯ ಸಚಿವರು, ರಾಜ್ಯ ಆರೋಗ್ಯ ಸಚಿವರು ಹಾಗೂ ಕೊಡಗು–ಮೈಸೂರು ಸಂಸದ ಪ್ರತಾಪ್ ಸಿಂಹ ಅವರಿಗೆ ಧನ್ಯವಾದ ತಿಳಿಸುವುದಾಗಿ ಹೇಳಿದರು.

ಈ ಹಿಂದೆ ದೆಹಲಿಗೆ ತೆರಳಿದ್ದ ಸಂದರ್ಭ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕೊಡಗು ಜಿಲ್ಲೆಗೆ ನೀಡಬೇಕೆಂದು ಪ್ರಧಾನ ಮಂತ್ರಿ, ಕೇಂದ್ರ ಆರೋಗ್ಯ ಸಚಿವರಿಗೆ ಮನವಿ ಪತ್ರ ಸಲ್ಲಿಸಲಾಗಿತ್ತು. ಈ ಸಂದರ್ಭ ಸಂಸದ ಪ್ರತಾಪ್ ಸಿಂಹ ಕೂಡ ಕೇಂದ್ರ ಸರಕಾರದ ಗಮನ ಸೆಳೆದಿದ್ದರು. ಇದೀಗ ಪ್ರಧಾನ ಮಂತ್ರಿ ಆಯುಷ್ ಮಾನ್ ಭಾರತ್ ಯೋಜನೆ ಅಡಿಯಲ್ಲಿ 'ಕ್ರಿಟಿಕಲ್ ಕೇರ್ ಸೆಂಟರ್' ತೆರೆಯಲು ಕೇಂದ್ರ ಸರಕಾರ ನಿರ್ಧರಿಸಿದ್ದು, 25 ಕೋಟಿ ರೂ.ಗಳ ಅನುದಾನ ನೀಡಿದೆ ಎಂದು ಮಾಹಿತಿ ನೀಡಿದರು.

ಭೂಮಿ ಹಾಗೂ ಕಟ್ಟಡ: ಉದ್ದೇಶಿತ ಯೋಜನೆಗಾಗಿ ಈಗಾಗಲೇ ಭೂಮಿಯನ್ನು ಗುರುತು ಮಾಡಲಾಗಿದೆ. ನಗರದ ಜನರಲ್ ತಿಮ್ಮಯ್ಯ ವೃತ್ತದ ಬಳಿ ಇರುವ ಲೋಕೋಪಯೋಗಿ ಇಲಾಖೆಯ ಕಟ್ಟಡವಿದೆ. ಆ ಪ್ರದೇಶ 94 ಸೆಂಟ್ ವಿಸ್ತೀರ್ಣ ಹೊಂದಿದೆ. ಆ ಕಟ್ಟಡವನ್ನು ಒಡೆದು ನೂತನ ಕ್ರಿಟಿಕಲ್ ಕೇರ್ ಸೆಂಟರ್ ನಿರ್ಮಾಣ ಮಾಡಲಾಗುತ್ತದೆ. ಲೋಕೋಪಯೋಗಿ ಇಲಾಖೆಗೆ ಪರ್ಯಾಯ ಜಾಗ ನೀಡಲಾಗುತ್ತದೆ. ಈ ಕುರಿತು ರಾಜ್ಯ ಲೋಕೋಪಯೋಗಿ ಸಚಿವರೊಂದಿಗೆ ಮಾತುಕತೆ ನಡೆಸಿದ್ದು, ಅವರೂ ಒಪ್ಪಿಗೆ ಸೂಚಿಸಿದ್ದಾರೆ.

ಸೋಮವಾರ ಉನ್ನತ ಅಧಿಕಾರಿಗಳು ಮತ್ತು ಆರ್ಕಿಟೆಕ್ಟ್‌ಗಳು ಸ್ಥಳ ಪರಿಶೀಲನೆ ನಡೆಸಿ, ಭೂಮಿ ಹಸ್ತಾಂತರ ಕಾರ್ಯ ನಡೆಸುತ್ತಾರೆ. ಬಳಿಕ ಆಸ್ಪತ್ರೆ ಕಟ್ಟಡ ಕಾಮಗಾರಿಯನ್ನು ನಡೆಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಒಟ್ಟು 4 ಮಹಡಿಗಳ ಕಟ್ಟಡ ನಿರ್ಮಾಣವಾಗಲಿದ್ದು, ನೆಲ ಅಂತಸ್ತು ವಾಹನಗಳ ಪಾರ್ಕಿಂಗ್‌ಗೆ ಬಳಸಲಾಗುತ್ತದೆ. ಇನ್ನುಳಿದ 3 ಮಹಡಿಗಳನ್ನು ಆಸ್ಪತ್ರೆಗಾಗಿ ಬಳಸಲಾಗುತ್ತದೆ ಎಂದು ಅಪ್ಪಚ್ಚು ರಂಜನ್ ಹೇಳಿದರು. ಈ ಆಸ್ಪತ್ರೆ ನಿರ್ಮಾಣವಾದಲ್ಲಿ ಹೃದಯ ಹಾಗೂ ಕಿಡ್ನಿ ಸಂಬಂಧಿತ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಉಪಯೋಗವಾಗಲಿದೆ ಎಂದು ಹೇಳಿದರು. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೂ 200 ಕೋಟಿ ರೂ. ನೀಡುವಂತೆ ಮನವಿ ಮಾಡಿದ್ದೇನೆ. ಈ ಆಸ್ಪತ್ರೆ ಕೂಡ ಲಭಿಸಿದಲ್ಲಿ ಮಂಗಳೂರು, ಮೈಸೂರು ಆಸ್ಪತ್ರೆಯನ್ನು ಅವಲಂಬಿಸುವುದು ತಪ್ಪಲಿದೆ ಎಂದು ಶಾಸಕ ಅಪ್ಪಚ್ಚು ರಂಜನ್ ಅಭಿಪ್ರಾಯ ವ್ಯಕ್ತಪಡಿಸಿದರು.


ಮೇ 31, ಪ್ರಧಾನಿ ಸಂವಾದ ಕಾರ್ಯಕ್ರಮ

ಮಡಿಕೇರಿ, ಮೇ 28– ಭಾರತ ಸ್ವಾತಂತ್ರ್ಯಾಚರಣೆಯ 75ನೇ ವಾರ್ಷಿಕೋತ್ಸವದ ಪ್ರಯುಕ್ತ ಆಜಾದಿ ಕಾ ಅಮೃತ ಮಹೋತ್ಸವ ಆಚರಿಸಲಾಗುತ್ತಿದ್ದು, ಈ ಸಂಬಂಧ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಮೇ 31 ರಂದು ಹಿಮಾಚಲ ಪ್ರದೇಶದ ಶಿಮ್ಲಾ ನಗರದಲ್ಲಿ ಕಾರ್ಯಕ್ರಮ ನಡೆಯಲಿದೆ.

ಮೇ 31 ರಂದು ರಾಷ್ಟ್ರಾದ್ಯಂತ ಕೇಂದ್ರ ಪುರಸ್ಕೃತ ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಪ್ರಧಾನಮಂತ್ರಿ ಅವರು ಸಂವಾದ ನಡೆಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಪಂಚಾಯತ್ ರಾಜ್ ಸಂಸ್ಥೆ ಪ್ರತಿನಿಧಿಗಳು, ನಾಗರಿಕ ಸಮಾಜ ಸಂಸ್ಥೆಗಳು, ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಗಳು ಭಾಗವಹಿಸಲಿದ್ದಾರೆ.

ಈ ಕಾರ್ಯಕ್ರಮದ ಪ್ರಯುಕ್ತ ಮೇ 31 ರಂದು ಬೆಳಗ್ಗೆ 10 ಗಂಟೆಗೆ ನಗರದ ಜಿಪಂ ಸಭಾಂಗಣದಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಕೇಂದ್ರ ಪುರಸ್ಕೃತ ಯೋಜನೆಗಳ ಫಲಾನುಭವಿಗಳೊಂದಿಗೆ ವರ್ಚುವಲ್ ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಜಿ.ಪಂ ಸಿಇಒ ಭನ್ವರ್‌ಸಿಂಗ್ ಮೀನಾ ಅವರು ತಿಳಿಸಿದ್ದಾರೆ.

ಶಂಭು ತಮ್ಮಯ್ಯ ನಿಧನ



ಪೊನ್ನಂಪೇಟೆ, ಮೇ 28– ಸಮೀಪ ಮುಗುಟಗೇರಿ ಗ್ರಾಮದ ನಿವೃತ್ತ ಕ್ಯಾಪ್ಟನ್ ಮಲಚೀರ ಶಂಭು ತಮ್ಮಯ್ಯ(86) ನಿನ್ನೆ ನಿಧನರಾದರು.

ಮೃತರ ಅಂತ್ಯಕ್ರಿಯೆ ಶುಕ್ರವಾರ ಸಂಜೆ ಮುಗುಟಗೇರಿ ಗ್ರಾಮದಲ್ಲಿ ನಡೆಯಿತು. ಮೃತರು ಸೊಸೆಯಂದಿರು, ಮೊಮ್ಮಕ್ಕಳನ್ನು ಅಗಲಿದ್ದಾರೆ.

'ಅಮೃತ ಭಾರತಿಗೆ ಕನ್ನಡದ ಆರತಿ ಅಭಿಯಾನ'

ಭಾರತ ಸ್ವಾತಂತ್ರ್ಯಕ್ಕೆ ಹಲವು ಮಹನೀಯರ ಕೊಡುಗೆ ಸ್ಮರಣೀಯ



ಮಡಿಕೇರಿ, ಮೇ 28– ಭಾರತ ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧಿ, ಬಾಲಗಂಗಾಧರನಾಥ ತಿಲಕ್, ಸರ್ದಾರ್ ವಲ್ಲಭಬಾಯಿ ಪಟೇಲ್, ಚಂದ್ರಶೇಖರ್ ಆಜಾದ್, ವೀರ ಸಾವರ್ಕರ್ ಹೀಗೆ ಹಲವು ಮಹನೀಯರು ಶ್ರಮಿಸಿದ್ದಾರೆ ಎಂದು ಶಾಸಕ ಎಂ.ಪಿ. ಅಪ್ಪಚ್ಚುರಂಜನ್ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ನಗರದ ಕ್ರಿಸ್ಟಲ್ ಕೋರ್ಟ್‌ನಲ್ಲಿ ಶನಿವಾರ ನಡೆದ 'ಅಮೃತ ಭಾರತಿಗೆ ಕನ್ನಡದ ಆರತಿ' ಅಭಿಯಾನದ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಪೂರ್ಣಗೊಂಡಿರುವ ಹಿನ್ನೆಲೆ ಸರ್ಕಾರ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಮಹನೀಯರನ್ನು ಸ್ಮರಿಸುವ ನಿಟ್ಟಿನಲ್ಲಿ ಅಮೃತ ಭಾರತಿಗೆ ಕನ್ನಡದ ಆರತಿ ಕಾರ್ಯಕ್ರಮ ಆಯೋಜಿಸಿದೆ. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ರಾಷ್ಟ್ರ ಅಭಿಮಾನ ಬೆಳೆಸಿಕೊಳ್ಳುವುದರ ಜೊತೆಗೆ, ಸ್ವಾತಂತ್ರ್ಯಕ್ಕಾಗಿ ದುಡಿದ ಮಹನೀಯರನ್ನು ಸದಾ ಸ್ಮರಿಸಿಕೊಳ್ಳಬೇಕು ಎಂದು ಶಾಸಕರು ಕರೆ ನೀಡಿದರು.

ಮೇ 28 ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಅವರ 139ನೇ ಜನ್ಮ ದಿನವಾಗಿದ್ದು, ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಜೈಲು ಶಿಕ್ಷೆ ಅನುಭವಿಸಿದ ಇಂತಹ ಮಹನೀಯರನ್ನು ಸ್ಮರಿಸಬೇಕು ಎಂದರು.

ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷರಾದ ಶಾಂತೆಯಂಡ ರವಿಕುಶಾಲಪ್ಪ ಮಾತನಾಡಿ 1857 ರಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ರಾಷ್ಟ್ರದೆಲ್ಲೆಡೆ ಹಬ್ಬಿತ್ತು. ಆ ನಿಟ್ಟಿನಲ್ಲಿ ಕೊಡಗು ಭಾಗದಲ್ಲಿಯೂ ಸಹ ಗುಡ್ಡೆಮನೆ ಅಪ್ಪಯ್ಯಗೌಡ ಸೇರಿದಂತೆ ಹಲವರು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದರು ಎಂದು ಅವರು ಸ್ಮರಿಸಿದರು.

ಮಹಾತ್ಮ ಗಾಂಧೀಜಿ ಅವರು ಅಸ್ಪೃಶ್ಯತೆ ನಿವಾರಣೆಗೆ ರಾಷ್ಟ್ರದ ಹಲವು ಕಡೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕೊಡಗು ಜಿಲ್ಲೆಯ ಗುಂಡುಕುಟ್ಟಿ ಮಂಜುನಾಥ ಅವರ ಮನೆಗೆ ಭೇಟಿ ನೀಡಿದಾಗ ಕೊಡಗಿನ ಗೌರಮ್ಮ ಅವರು ತಮ್ಮಲ್ಲಿದ್ದ ಒಡವೆಯನ್ನೆಲ್ಲಾ ಸ್ವಾತಂತ್ರ್ಯ ಚಳವಳಿಗಾಗಿ ಅರ್ಪಿಸಿದರು ಎಂದು ರವಿಕುಶಾಲಪ್ಪ ಸ್ಮರಿಸಿದರು.

'ಸ್ವಾತಂತ್ರ್ಯ ದೊರೆತಿದೆ ಎಂದು ಯಾರೇ ಆದರೂ, ಹೇಗೆ ಬೇಕಾದಲ್ಲಿ ನಡೆದುಕೊಳ್ಳುವುದಲ್ಲ. ಸಮಾಜಕ್ಕೆ, ರಾಷ್ಟ್ರಕ್ಕೆ ಒಳ್ಳೆಯದು ಮಾಡಬೇಕು. ಪ್ರಜಾಪ್ರಭುತ್ವವನ್ನು ಬಲಪಡಿಸಲು ಶ್ರಮಿಸಬೇಕು. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ರವಿಕುಶಾಲಪ್ಪ ಅವರು ಕರೆ ನೀಡಿದರು.'

ಅಮೃತ ಭಾರತಿಗೆ ಕನ್ನಡದ ಆರತಿ ಕುರಿತು ಉಪನ್ಯಾಸ ನೀಡಿದ ಚಿಕ್ಕಮಗಳೂರು ಜಿಲ್ಲೆಯ ಸಾಮಾಜಿಕ ಕಾರ್ಯಕರ್ತರಾದ ಸಿ.ಆರ್.ಪ್ರೇಮ್‌ಕುಮಾರ್ ಭಾರತ ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧಿ ಸೇರಿದಂತೆ ಹಲವು ಮಹನೀಯರು ಶ್ರಮಿಸಿದ್ದಾರೆ ಎಂದರು. ಭಾರತ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಎಲ್ಲರನ್ನು ಸ್ಮರಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ರಾಷ್ಟ್ರದ ಯುವ ಜನರು ಸಾಹಿತ್ಯ, ಇತಿಹಾಸ ತಿಳಿಯುವುದು ಅತ್ಯಗತ್ಯ. ಇದರಿಂದ ರಾಷ್ಟ್ರದ ಬಗ್ಗೆ ಪ್ರೀತಿ, ಗೌರವ ಮೂಡಿಸಲು ಸಾಧ್ಯ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.


ಸ್ವಾತಂತ್ರ್ಯ ಹೋರಾಟಗಾರರ ಸ್ಮರಣಾರ್ಥ ನಿರ್ಮಿಸಲಾಗಿರುವ 'ಶಿಲಾ ಫಲಕ'ವನ್ನು ಇದೇ ಸಂದರ್ಭದಲ್ಲಿ ಶಾಸಕ ಎಂ.ಪಿ. ಅಪಚ್ಚುರಂಜನ್ ಹಾಗೂ ಗಣ್ಯರು ಅನಾವರಣ ಮಾಡಿದರು. ಇದೇ ಸಂದರ್ಭದಲ್ಲಿ ಕಿರು ಹೊತ್ತಿಗೆ ಬಿಡುಗಡೆ ಮಾಡಿದರು.

ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ, ಉಪಾಧ್ಯಕ್ಷರಾದ ಸವಿತಾ ರಾಕೇಶ್, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಮೇಶ್ ಹೊಳ್ಳ, ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಜಿ.ಪಂ.ಸಿಇಒ ಭನ್ವರ್‌ಸಿಂಗ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ನಗರಸಭಾ ಸದಸ್ಯರು ಇತರರು ಇದ್ದರು.

ಅಮೃತ ಸ್ವಸಹಾಯ ಗುಂಪುಗಳಿಗೆ 1 ಲಕ್ಷ ರೂ.ಗಳ ಸಹಾಯಧನದ ಚೆಕ್‌ನ್ನು ಇದೇ ಸಂದರ್ಭದಲ್ಲಿ ವಿತರಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಟಿ.ದರ್ಶನಾ ಸ್ವಾಗತಿಸಿದರು. ಉಪನ್ಯಾಸಕ ಕುಮಾರ ನಿರೂಪಿಸಿದರು. ರಾಘವೇಂದ್ರ ಮತ್ತು ತಂಡದವರು ನಾಡಗೀತೆ ಹಾಡಿದರು. ಮಣಜೂರು ಮಂಜುನಾಥ್ ವಂದಿಸಿದರು.

ಪ್ರಪಾತಕ್ಕೆ ಉರುಳಿದ ಕಾರು: ಸುಧಾಕರ್ ಶೆಟ್ಟಿ ಪಾರು

ಸುಳ್ಯ, ಮೇ 28(ಎಂಕೆ)– ಜೆಡಿಎಸ್ ರಾಜ್ಯ ಉಪಾಧ್ಯಕ್ಷರೂ ಆದ ಉದ್ಯಮಿ ಸುಧಾಕರ್ ಎಸ್.ಶೆಟ್ಟಿ ಪ್ರಯಾಣಿಸುತ್ತಿದ್ದ ಕಾರು ಸುಳ್ಯ ಬಳಿ 100 ಅಡಿ ಆಳದ ಪ್ರಪಾತಕ್ಕೆ



ಇಂದು ಮಧ್ಯರಾತ್ರಿ ಉರುಳಿ ಬಿದ್ದಿದ್ದು, ಅದೃಷ್ಟವಶಾತ್ ಅವರು ಮತ್ತು ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಂಗಳೂರಿಗೆ ತೆರಳುತ್ತಿದ್ದ ವೇಳೆ ಸುಳ್ಯ-ಪುತ್ತೂರು ಮಾರ್ಗದ ಕಾಪು ಬಳಿ ದುರಂತ ಸಂಭವಿಸಿದೆ. ತಾವು ತಂದೆ–ತಾಯಿ ಹಾಗೂ ದೇವರ ದಯೆಯಿಂದ ಪಾರಾಗಿರುವುದಾಗಿ ಸ್ವತಃ ಸುಧಾಕರ್ ಶೆಟ್ಟಿಯವರೇ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೊಂಡಿದ್ದಾರೆ.

ಒಂದನೇ ಪುಟದಿಂದ

ಮೊಹಮದ್ ಖಾನ್ ಹೆಸರು ಚಲಾವಣೆಗೆ

ಹೆಸರು ಕೇಳಿಬರುತ್ತಿದ್ದು, ಒಂದು ಸುತ್ತಿನ ಮಾತುಕತೆಯೂ ನಡೆದಿದೆ. ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ನಿರ್ಮಲಾ ಸೀತಾರಾಮನ್ ಅವರ ಹೆಸರು ಬಿಜೆಪಿ ಹೈಕಮಾಂಡ್ ಮಟ್ಟದಲ್ಲಿ ಮುನ್ನೆಲೆಗೆ ಬಂದಿದೆ. ಜುಲೈನಲ್ಲಿ ಅವರ ರಾಜ್ಯಸಭಾ ಅವಧಿಯು ಪೂರ್ಣಗೊಳ್ಳಲಿದ್ದು, ಈ ಎರಡು ಸ್ಥಾನಗಳ ಪೈಕಿ ಒಂದು ಸ್ಥಾನ ಕಲ್ಪಿಸುವ ಬಗ್ಗೆಯೂ ಚರ್ಚೆಗಳಾಗಿವೆ. ಗುಲಾಂ ನಬಿ ಅಜಾದ್ ಕಾಂಗ್ರೆಸ್‌ನಿಂದ ದೂರ ಸರಿಯುತ್ತಿದ್ದು, ಪ್ರಧಾನಿ ಹಾಗೂ ಬಿಜೆಪಿಗೆ ಹತ್ತಿರವಾಗುತ್ತಿದ್ದಾರೆ. ಅಲ್ಪಸಂಖ್ಯಾತರಿಗೆ ಅವಕಾಶ ಮಾಡಿಕೊಡುವುದೇ ಆದರೆ ಗುಲಾಂ ನಬಿ ಆಜಾದ್ ಇಲ್ಲವೇ ಕೇರಳದ ರಾಜ್ಯಪಾಲ ಆರೀಫ್ ಮೊಹಮದ್ ಖಾನ್ ಅವರನ್ನು ಕಣಕ್ಕಿಳಿಸುವ ಉದ್ದೇಶವಿದೆ.

ಮಹಿಳೆಯರಿಗೆ ಅವಕಾಶ ನೀಡಿದರೆ, ಡಾ. ಸುಧಾಮೂರ್ತಿ ಅಥವಾ ನಿರ್ಮಲಾ ಸೀತರಾಮನ್ ಅವರಿಗೆ ಅವಕಾಶ ನೀಡುವ ಸಾಧ್ಯತೆಗಳು ಹೆಚ್ಚಾಗಿವೆ.

ಉಪರಾಷ್ಟ್ರಪತಿಗೆ ಬಡ್ತಿ ನೀಡಿದರೆ, ಆಂಧ್ರಪ್ರದೇಶ ಮೂಲದ ಹಾಗೂ ಕರ್ನಾಟಕದೊಂದಿಗೆ ಒಡನಾಟವಿರುವ ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಅವರಿಗೆ ದೊರೆಯುವ ಸಂಭವವಿದೆ. ಹಿಂದೆಲ್ಲಾ ಉಪ ರಾಷ್ಟ್ರಪತಿಯಾದವರೇ ರಾಷ್ಟ್ರಪತಿಯಾಗಿ ಆಯ್ಕೆಯಾಗಿರುವ ನಿದರ್ಶನವಿದೆ. ರಾಷ್ಟ್ರಪತಿ ಸ್ಥಾನ ಅಲ್ಪಸಂಖ್ಯಾತರಿಗೆ ನೀಡಿದರೆ, ಉಪರಾಷ್ಟ್ರಪತಿ ಸ್ಥಾನ ಮಹಿಳೆಗೆ ದೊರಕಲಿದೆ. ಮಹಿಳೆಯರಿಗೆ ರಾಷ್ಟ್ರಪತಿ ಸ್ಥಾನ ಕಲ್ಪಿಸಿದರೆ, ಅಲ್ಪಸಂಖ್ಯಾತರಿಗೆ ಉಪರಾಷ್ಟ್ರಪತಿ ಸ್ಥಾನ ನೀಡಬೇಕೆಂಬ ಲೆಕ್ಕಚಾರ ಬಿಜೆಪಿ ಹೈಕಮಾಂಡ್ ಹಾಗೂ ಪ್ರಧಾನಿ ಅಂಗಳದಲ್ಲಿ ಚರ್ಚಿತವಾಗುತ್ತಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ರಾಷ್ಟ್ರದ ಈ 2 ಉನ್ನತ ಸ್ಥಾನಗಳ ಅಭ್ಯರ್ಥಿಗಳ ಹುಡುಕಾಟವನ್ನು ಕರ್ನಾಟಕ, ಆಂಧ್ರಪ್ರದೇಶ ಹಾಗೂ ಕೇರಳ ಸೇರಿದಂತೆ ದಕ್ಷಿಣ ಭಾರತದಲ್ಲಿ ನಡೆಯುತ್ತಿರುವುದು ವಿಶೇಷ. ಕರ್ನಾಟಕದ ಮೂಲಕ ದಕ್ಷಿಣ ಭಾರತದಲ್ಲಿ ಬಿಜೆಪಿಯ ಹೆಬ್ಬಾಗಿಲನ್ನು ತೆರೆದ ಬಿಜೆಪಿಗೆ ಕೋಮುವಾದಿ ಎಂಬ ಹಣೆಪಟ್ಟಿಯಿಂದ ಹೊರಬರಬೇಕಿದೆ. ಅದಕ್ಕಾಗಿ ರಾಷ್ಟ್ರದ ಐಕ್ಯತೆ ಪ್ರತಿಪಾದಿಸುವ ಉದ್ದೇಶದಿಂದ ಈ ರೀತಿಯಲ್ಲಿ ಅಯ್ಕೆ ಮಾಡುವ ಉದ್ದೇಶವನ್ನಿಟ್ಟುಕೊಂಡಿದೆ.

ಮತ್ತೆ ಸಿಎಂ ಆಗಲೇಬೇಕು

ಭೈರತಿ ಸುರೇಶ್ ಮಾತನಾಡುತ್ತಾ, ಸಿದ್ದರಾಮಯ್ಯ ಅವರ ಕೈ ಬಲಪಡಿಸುವ ನಿಟ್ಟಿನಲ್ಲಿ ತುಮಕೂರಿನಲ್ಲಿ ಇಂದು ಊದಿರುವ ರಣಕಹಳೆ ರಾಜ್ಯಾದ್ಯಂತ ಮೊಳಗಲಿ ಎಂದರು. 2023ರಲ್ಲಿ ಮತ್ತೆ ಮುಖ್ಯಮಂತ್ರಿ ಆಗಬೇಕು ಎಂಬುದು ಸಿದ್ದರಾಮಯ್ಯ ಅವರ ಮನಸ್ಸಿನಲ್ಲಿ ಇಲ್ಲ. ಆದರೆ ನಮ್ಮ-ನಿಮ್ಮ ಮನಸ್ಸಿನಲ್ಲಿದೆ. ಇಡೀ ರಾಜ್ಯದ ಜನತೆಯ ಮನಸ್ಸಿನಲ್ಲಿ ಮತ್ತೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಬೇಕು ಎಂಬ ಭಾವನೆ ಇದೆ. ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಆಗಬೇಕೆಂದರೆ ಅವರ ಜೊತೆ ಇರುವವರ ಹಾಗೂ ಸಿದ್ದರಾಮಯ್ಯನವರ ಕೈ ಬಲಪಡಿಸಲೇಬೇಕು ಎಂದು ಕರೆ ನೀಡಿದರು.

ಸಿದ್ದರಾಮಯ್ಯ ಕೇವಲ ಕುರುಬರ ನಾಯಕರಲ್ಲ. ಅಹಿಂದ ವರ್ಗಕ್ಕೆ ಮಾತ್ರ ಸೀಮಿತರಾದವರೂ ಅಲ್ಲ. ಅವರು ಇಡೀ ರಾಜ್ಯದ ಎಲ್ಲಾ ಜಾತಿ, ಜನಾಂಗದ ನಾಯಕರಾಗಿದ್ದಾರೆ. ಅವರಿಗೆ ರಾಜಕಾರಣದಲ್ಲಿ ಏನೂ ಆಗಬೇಕಾಗಿಲ್ಲ. ಈಗಾಗಲೇ ಒಮ್ಮೆ ಮುಖ್ಯಮಂತ್ರಿ ಆಗಿದ್ದಾರೆ. 13 ಬಾರಿ ಬಜೆಟ್ ಮಂಡಿಸುವ ಮೂಲಕ ಇಡೀ ದೇಶದಲ್ಲಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ ಕೀರ್ತಿಗೂ ಪಾತ್ರರಾಗಿದ್ದಾರೆ. ಮತ್ತೆ ಸಿಎಂ ಆಗಬೇಕೆಂಬ ಆಸೆ ಸಿದ್ದರಾಮಯ್ಯ ಅವರಿಗೆ ಇಲ್ಲದಿದ್ದರೂ ನಮಗೆ ಹಾಗೂ ನಿಮಗಾಗಿ ಮತ್ತು ರಾಜ್ಯದ ಅಭಿವೃದ್ಧಿಗಾಗಿ ಅವರು ಮತ್ತೆ ಸಿಎಂ ಆಗಲೇಬೇಕು. ಆ.3ರಂದು 10 ಲಕ್ಷ ಜನರನ್ನು ಸೇರಿಸಿ ದಾವಣಗೆರೆಯಲ್ಲಿ ಅವರ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದರು. ಮಾಜಿ ಸಚಿವ ಹೆಚ್.ಎಂ.ರೇವಣ್ಣ ಹಾಗೂ ಮಾಜಿ ಶಾಸಕ ಕೆ.ಎನ್.ರಾಜಣ್ಣ ಕೂಡ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಆಗಬೇಕು ಎಂದು ಬಲವಾಗಿ ಪ್ರತಿಪಾದಿಸಿದರು.

ಅಭಿಯಾನಕ್ಕೆ ಚಾಲನೆ

ವರ್ಗ ಬ್ರಿಟಿಷರ ವಿರುದ್ಧ ತಿರುಗಿಬಿತ್ತು. ಈ ಹೋರಾಟಗಳಲ್ಲಿ ಪಾಲ್ಗೊಂಡವರಿಗೆ ಸಲಾಂ ಎಂದರು. ಮೊಘಲರು, ಬ್ರಿಟಿಷರಿಗೆ 1 ಸಾವಿರ ವರ್ಷ ಕಾಲ ನಮ್ಮ ಸ್ವಾಭಿಮಾನ ಬಿಟ್ಟು ಕೊಟ್ಟಿದ್ದೆವು. ಸ್ವಾತಂತ್ರ್ಯ ಹೋರಾಟಕ್ಕೆ ಕನ್ನಡ ನಾಡಿನ ಕೊಡುಗೆ ದೊಡ್ಡದಿದೆ. ಅನಾಮಧೇಯ ಹೋರಾಟಗಾರರ ಪುಸ್ತಕವನ್ನು ಆಗಸ್ಟ್ 15ರಂದು ಪ್ರಕಟಿಸುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಂಸದ ಪಿ.ಸಿ.ಮೋಹನ್, ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಪಠ್ಯದಲ್ಲಿ ಪಾಠ ಸೇರಿಸಿ. ಕರ್ನಾಟಕದ ಮೂಲದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಎಲ್ಲರಿಗೂ ಗೊತ್ತಾಗಬೇಕಿದೆ. ಬೆಂಗಳೂರಿನ ಕೆಲ ಸ್ಥಳಗಳಿಗೆ ಬ್ರಿಟಿಷರ ಹೆಸರುಗಳಿವೆ. ಕೆಲ ಆಸ್ಪತ್ರೆಗಳಿಗೂ ಬ್ರಿಟಿಷರ ಹೆಸರುಗಳಿವೆ. ಅವು ಬದಲಿಸುವ ಕೆಲಸ ಆಗಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಬೇಟೆ ಆಡೋದನ್ನೂ ಮರೆಯಲ್ಲ!

ಹೊಡೆದರು. ಎಷ್ಟೇ ನೋವನ್ನು ತಿಂದು ಮನಸ್ಸು ಗಟ್ಟಿ ಮಾಡಿಕೊಂಡರು. ಜನರ ಆಶೀರ್ವಾದದಿಂದ 4 ಬಾರಿ ಸಿಎಂ ಆದರು. ಬಿಎಸ್‌ವೈ ಹೋರಾಟ ಸಣ್ಣ ವಯಸ್ಸಿನಿಂದಲೂ ನೋಡಿದ್ದೇನೆ. ಶಿಕಾರಿಪುರದಂತೆ ಅಭಿವೃದ್ಧಿಯಾದ ತಾಲೂಕು ಯಾವುದು ಇಲ್ಲ ಎಂದು ಯಡಿಯೂರಪ್ಪ ಅವರನ್ನು ಗುಣಗಾನ ಮಾಡಿದರು. ಕಾಡಿನಲ್ಲಿ ಬೇಟೆಯಾಡುವ ಹುಲಿ ಹಿಡಿದು ಬೋನಿಗೆ ಹಾಕಿದರೆ ಅದು ಹುಲ್ಲು ತಿನ್ನಲ್ಲ. ಜತೆಗೆ ಬೇಟೆ ಆಡೋದನ್ನೂ ಮರೆಯಲ್ಲ ಎಂದರು. ಪರಿಷತ್ ಚುನಾವಣೆ ಟಿಕೆಟ್ ಕೈ ತಪ್ಪಿದ್ದಕ್ಕೆ ಬೇಸರ ಇಲ್ಲ ಎನ್ನುತ್ತಲೇ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧವಿದ್ದೇನೆ. ಪಕ್ಷದ ನಾಯಕರು ತೀರ್ಮಾನಿಸಬೇಕು. ಒಂದು ವೇಳೆ ಟಿಕೆಟ್ ನೀಡದಿದ್ದರೂ ಪಕ್ಷಕ್ಕಾಗಿ ದುಡಿಯುವೆ ಎಂದರು.

ಪಲ್ಲಕ್ಕಿಯಲ್ಲಿ ಶ್ರೀಗಳ ಉತ್ಸವ


ತುತ್ತಾಗಿ ಕಂಗಾಲಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಈ ಭಕ್ತರು, ಎಲ್ಲರೂ ಶೀಘ್ರ ಗುಣಮುಖರಾದರೆ, ಆಶ್ರಮಕ್ಕೆ ಪಲ್ಲಕ್ಕಿ ಮಾಡಿಸಿಕೊಡುವುದಾಗಿ ಹರಸಿಕೊಂಡಿದ್ದರು. ಅದರಂತೆ ಕುಟುಂಬಸ್ಥರು ಶೀಘ್ರ ಗುಣಮುಖರಾದ ಹಿನ್ನೆಲೆಯಲ್ಲಿ ಸದರಿ ಭಕ್ತರು ಆಶ್ರಮಕ್ಕೆ ಪಲ್ಲಕ್ಕಿ ಮಾಡಿಸಿಕೊಟ್ಟು ತಮ್ಮ ಹರಕೆ ತೀರಿಸಿದರು. ಆದರೆ ಸ್ವಾಮೀಜಿಯವರು ಆ ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುವುದಿಲ್ಲವೆಂದು ಹಠ ಹಿಡಿದಿದ್ದರು. ನಂತರ ಭಕ್ತರು ನಿಮ್ಮಲ್ಲೇ ನಾವು ದೇವರನ್ನು ಕಾಣುತ್ತೇವೆ. ನೀವು ಪಲ್ಲಕ್ಕಿಯಲ್ಲಿ ಕುಳಿತು ಸಾಗಲೇಬೇಕು. ಇದು ಕೂಡ ನಮ್ಮ ಸೇವೆ ಎಂದು ಮನವೊಲಿಸಿದ ನಂತರ ಸ್ವಾಮೀಜಿ ಪಲ್ಲಕ್ಕಿಯಲ್ಲಿ ಸಾಗಿದರು.

ಸೇವಾ ಕಾರ್ಯಗಳಿಗೆ ಆದ್ಯತೆ ನೀಡುವ ಶ್ರೀಗಳು, ಪ್ರತಿ ವರ್ಷ ತಮ್ಮ ಜನ್ಮದಿನದ ಅಂಗವಾಗಿ ಆಶ್ರಮದಿಂದ ಸೇವಾ ಕಾರ್ಯ ನಡೆಸುವುದನ್ನು ತಪ್ಪದೇ ಮುಂದುವರೆಸಿದ್ದಾರೆ. ಅಂತೆಯೇ ಇಂದು ಒಟ್ಟು 12.5 ಲಕ್ಷ ರೂ. ಮೌಲ್ಯದಲ್ಲಿ ವಿಶೇಷಚೇತನರಿಗೆ ಅಗತ್ಯ ಉಪಕರಣಗಳು ಹಾಗೂ ಹಿಂದುಳಿದವರಿಗೆ ವಿವಿಧ ಸಲಕರಣೆಗಳನ್ನು ಆಶ್ರಮದ ನಾದ ಮಂಟಪದಲ್ಲಿ ನೀಡಿದರು. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಶಿಫಾರಸ್ಸಿನಂತೆ ಬುದ್ಧಿಮಾಂದ್ಯ ಮಕ್ಕಳಿಗೆ ತಲಾ 1ರಂತೆ 10 ಮಲ್ಟಿ ಸೆನ್ಸರಿ ಇನ್‌ಕ್ಲೂಸಿವ್ ಎಜುಕೇಶನ್ ಕಿಟ್ (ಎಂಆರ್ ಕಿಟ್) ಸೇರಿದಂತೆ 20 ಸೆರೆಬ್ರಲ್ ಪಾಲ್ಸಿ ಕುರ್ಚಿ, 20 ಸ್ಟ್ಯಾಂಡಿಂಗ್ ಫ್ರೇಮ್, 11 ವ್ಹೀಲ್‌ಚೇರ್, 5 ವಾಕರ್ಸ್, 5 ಗೈಟರ್ಸ್, 10 ಜೊತೆ ಆಕ್ಸಿಲರಿ ಊರುಗೋಲು ಗಳು, 20 ವಾಕಿಂಗ್ ಸ್ಟಿಕ್‌ಗಳನ್ನು ವಿತರಣೆ ಮಾಡಲಾಯಿತು. ಅಲ್ಲದೆ, ಚನ್ನಪಟ್ಟಣ ತಾಲೂಕಿನ ಸೊಗಲ ಗ್ರಾಮದ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ತಲಾ 1ರಂತೆ 80 ಹೊಲಿಗೆ ಯಂತ್ರಗಳನ್ನು ವಿತರಣೆ ಮಾಡಲಾಯಿತು. ಮಾಜಿ ಸಚಿವರಾದ ಆರ್.ವಿ. ದೇಶಪಾಂಡೆ, ಸಿ.ಹೆಚ್.ವಿಜಯಶಂಕರ್, ಬೆಂಗಳೂರಿನ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ಸದಸ್ಯರು, ಮೈಸೂರಿನ ಹಜ್ ಕಮಿಟಿ ಸದಸ್ಯರು, ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಸದಸ್ಯರು ಸೇರಿದಂತೆ ಗಣ್ಯರು ಮತ್ತು ಭಕ್ತರು, ಶ್ರೀಗಳಿಗೆ ಜನ್ಮದಿನದ ಶುಭಾಶಯ ಕೋರಿ, ಆಶೀರ್ವಾದ ಪಡೆದರು.

ಇದಕ್ಕೂ ಮುನ್ನ ಶ್ರೀಗಳು ಅಂತಾರಾಷ್ಟ್ರೀಯ ದತ್ತಜ್ಞಾನ ಬೋಧಸಭಾ ಮತ್ತು ದತ್ತಯೋಗ ಕೇಂದ್ರಗಳ ಸಮ್ಮೇಳನ ಉದ್ಘಾಟಿಸಿದರು. ದೇಶದ ವಿವಿಧ ಭಾಗಗಳಲ್ಲಿರುವ 85 ದತ್ತಜ್ಞಾನ ಬೋಧ ಸಭಾಗಳು ಸೇರಿದಂತೆ ವಿದೇಶದಲ್ಲಿರುವ 16 ಸಭಾಗಳು ಹಾಗೂ ವಿಶ್ವದಾದ್ಯಂತ ಇರುವ 16 ದತ್ತಯೋಗ ಕೇಂದ್ರಗಳ (ಡಿವೈಸಿ) ಪ್ರತಿನಿಧಿಗಳು ವಾರ್ಷಿಕ ಲೆಕ್ಕಪತ್ರಗಳು ಮತ್ತು ಅವರು ನಡೆಸಿದ ಚಟುವಟಿಕೆಗಳ ವರದಿಯನ್ನು (ಕೋವಿಡ್ ಹಿನ್ನೆಲೆ–3 ವರ್ಷಗಳ ವರದಿ) ಸ್ವಾಮೀಜಿಯವರಿಗೆ ಸಮ್ಮೇಳನದಲ್ಲಿ ಸಮರ್ಪಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಸ್ವತಃ ಆಂಗ್ಲ ಭಾಷೆಯಲ್ಲಿ ಬರೆದಿರುವ 1,800 ಸಂದೇಶಗಳುಳ್ಳ 'ಸ್ಕ್ರಿಪ್ಟ್ ಫಾರ್ ಸಕ್ಸಸ್' ಎಂಬ ಪುಸ್ತಕವನ್ನು ಬಾಲಕಿ ರಾಧೆ ಅಗ್ನಿ ಶ್ರೀಗಳ ಸಮ್ಮುಖದಲ್ಲಿ ಬಿಡುಗಡೆ ಮಾಡಿದಳು. ಶ್ರೀಗಳ ಹಸ್ತಾಕ್ಷರದಲ್ಲೇ ಮುದ್ರಿಸಿರುವುದು ಈ ಪುಸ್ತಕದ ವಿಶೇಷ. ಇದಕ್ಕೂ ಮುನ್ನ ಶ್ರೀದತ್ತ ಹ್ಯೂಮನ್ ಸರ್ವಿಸಸ್ ಸ್ವಯಂ ಸೇವಕರಿಂದ ಪಥಸಂಚಲನ ನಡೆಯಿತು. ಅಲ್ಲದೆ, ಶ್ರೀಚಕ್ರ ಪೂಜೆ ಮತ್ತು ಸುದರ್ಶನ ಹೋಮ ಸೇರಿದಂತೆ ಹಲವು ಪೂಜಾ ಕೈಂಕರ್ಯಗಳು ನಡೆದವು. ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ಕಬಳಿಸಿರುವ ದೇವಾಲಯಗಳ ವಾಪಸ್ ಪಡೆಯುತ್ತೇವೆ

ಮೈಸೂರಲ್ಲಿ ಶ್ರೀರಾಮಸೇನೆ ಮುಖ್ಯಸ್ಥ ಮುತಾಲಿಕ್ ಸವಾಲು



ಮೈಸೂರು,ಮೇ 28(ಎಂಟಿವೈ)– ದೇವಾಲಯವನ್ನು ಕಬಳಿಸಿ ಅಕ್ರಮವಾಗಿ ಪ್ರಾರ್ಥನಾ ಮಂದಿರ ಕಟ್ಟಿಕೊಂಡಿರುವ ಎಲ್ಲಾ ದೇವಾಲಯಗಳನ್ನು ಕಾನೂನು ಮೂಲಕವೇ ಹಿಂಪಡೆಯುತ್ತೇವೆ ಎಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಸವಾಲು ಹಾಕಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೇಶದ ಉದ್ದಗಲಕ್ಕೂ 30 ಸಾವಿರ ದೇವಾಲಯಗಳನ್ನು ಆಕ್ರಮಿಸಿ ಮಸೀದಿ ನಿರ್ಮಿಸಲಾಗಿದೆ ಎಂಬ ಮಾಹಿತಿ ಇದೆ. ಅವುಗಳನ್ನು ಪುನರ್ ಪಡೆಯುವುದೇ ನಮ್ಮ ಉದ್ದೇಶ. ನಾವು ದೇವಾಲಯಗಳನ್ನು ಮತ್ತೆ ನಮ್ಮ ವಶಕ್ಕೆ ಪಡೆಯಲು ದಾಳಿ ಮಾಡುವುದಿಲ್ಲ. ಕಾನೂನು ಹೋರಾಟದ ಮೂಲಕವೇ ನಮ್ಮ ದೇವಾಲಯಗಳನ್ನು ಪುನರ್ ಪಡೆದುಕೊಳ್ಳುತ್ತೇವೆ. ಸಂವಿಧಾನದ ಆಧಾರದ ಮೇಲೆ, ನ್ಯಾಯಾಲಯದ ಮೂಲಕವೇ ಪಡೆಯುತ್ತೇವೆ ಎಂದರು.

ದೇಶದಲ್ಲಿನ ಮುಸ್ಲಿಂರಲ್ಲಿ ಹಿಂದೂ ರಕ್ತ ಇದೆ. ನಿಮ್ಮನ್ನು ಎಲ್ಲಾದರೂ ಹೋಗಿ ಎಂದು ಹೇಳುತ್ತಿಲ್ಲ. ನೀವು ಎಲ್ಲಿಯೂ ಹೋಗಬೇಡಿ. ಆದರೆ ಹಿಂದೂಗಳ ಭಾವನೆ ಮತ್ತು ಸಂಸ್ಕೃತಿಗೆ ಗೌರವ ಕೊಟ್ಟು ಜೀವಿಸಿ. ನಮ್ಮ ಭೂಮಿ ಮೇಲೆ ನೀವು ಇದ್ದೀರಾ ಎನ್ನುವುದನ್ನು ಮರೆಯಬೇಡಿ ಎಂದು ಕಿಡಿಕಾರಿದರು.

ಸೊಕ್ಕಿನ ಮಾತು ಸಹಿಸಲ್ಲ: ಮಳಲಿ ಮಸೀದಿಯ ವಿಚಾರಕ್ಕೆ ಸಂಬಂಧಿಸಿದಂತೆ ಎಸ್‌ಡಿಪಿಐ ಅಧ್ಯಕ್ಷ ಅಬ್ದುಲ್ ಮಜೀದ್ ಸೊಕ್ಕಿನ ಹೇಳಿಕೆ ನೀಡಿದ್ದಾರೆ. ಮಳಲಿ ಮಸೀದಿಯನ್ನು ದೇವಸ್ಥಾನ ಮಾಡುವುದು ಕನಸಿನ ಮಾತು. ಒಂದು ಹಿಡಿ ಮರಳು ಕೊಡುವುದಿಲ್ಲ ಎಂದಿದ್ದಾರೆ. ನಾವು ಕೇವಲ ಒಂದು ಹಿಡಿ ಮರಳು ಮಾತ್ರ ಪಡೆಯಲ್ಲ. ಮಳಲಿಯ ಸಂಪೂರ್ಣ ದೇವಸ್ಥಾನ ಪಡೆದೇ ಪಡೆಯುತ್ತೇವೆ. ತಾಕತ್ತಿದರೆ ನೀವು ತಡೆಯಿರಿ. ದೇವಸ್ಥಾನವನ್ನು ಕಾನೂನಿನ ಪ್ರಕಾರವೇ ಪಡೆಯುತ್ತೇವೆ. ನಿಮಗೆ ನಾಚಿಕೆ, ಮಾನ, ಮರ್ಯಾದೆ ಇದ್ದರೆ ಸೌಹಾರ್ದತೆಯಿಂದ ಬದುಕುವ ಆಸೆ ಇದ್ದರೆ ಕಬಳಿಸಿರುವ ದೇವಸ್ಥಾನ ವಾಪಾಸ್ಸು ನೀಡಬೇಕು ಎಂದು ಆಗ್ರಹಿಸಿದರು.

ಸರ್ವನಾಶವಾಗುತ್ತೀರಿ ಜೋಕೆ: ಹಿಂದೂ ಧರ್ಮದ ಸಂಪ್ರದಾಯದಲ್ಲಿ ತಾಂಬೂಲ ಶಾಸ್ತ್ರ ಅತ್ಯಂತ ಮಹತ್ವದ ಪಾತ್ರವಹಿಸಿದೆ. ತಾಂಬೂಲಶಾಸ್ತ್ರಕ್ಕೆ ಶಕ್ತಿ ಹೆಚ್ಚು. ಅದರ ಬಗ್ಗೆ ಹಗುರವಾಗಿ ಮಾತನಾಡಿದವರು ಸರ್ವನಾಶವಾಗಲಿದ್ದಾರೆ. ತಾಂಬೂಲ ಪ್ರಶ್ನೆ ಬಗ್ಗೆ ಕೆಟ್ಟದಾಗಿ ಮಾತಾಡಿದರೆ ನಾಲಿಗೆ ಸೀಳಿ ಹಾಕುತ್ತೇವೆ. ಇಂತಹ ಮಾತು ಆಡುತ್ತಿರುವ ವ್ಯಕ್ತಿ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಮಳಲಿಯ ಮಸೀದಿ ಜಾಗದಲ್ಲಿ ಹಿಂದೂ ದೇವಾಲಯ ಹಾಗೂ ವೀರಶೈವ ಮಠ ಇತ್ತು. ಗಲಭೆ ಮಾಡಲು ಪ್ರಚೋದನೆಗಾಗಿ ಜನರನ್ನು ಕೆರಳಿಸುವ ಹೇಳಿಕೆ ನಿಲ್ಲಿಸಬೇಕು ಎಂದು ಪ್ರಮೋದ್ ಮುತಾಲಿಕ್ ಸೂಚಿಸಿದರು.

ಎಸ್‌ಡಿಪಿಐ ಮುಖಂಡ ಅಬ್ದುಲ್ ಮಜೀದ್ ಮಳಲಿ ಮಸೀದಿಯನ್ನು ಯಾರ ಅಪ್ಪನ ಆಸ್ತಿಯಲ್ಲ ಎಂದಿದ್ದಾರೆ. ಅದು ನಮ್ಮ ಅಪ್ಪನದ್ದೇ ಆಸ್ತಿ ಎಂದು ಈಗ ಹೇಳುತ್ತೇನೆ. ಏನು ಈಗ? ಎಂದು ಪ್ರಶ್ನಿಸಿದರಲ್ಲದೆ, ಗೊಡ್ಡು ಬೆದರಿಕೆ ಜಗ್ಗುವುದಿಲ್ಲ. ಮೋದಿ ಸರ್ಕಾರ ಮುಸ್ಲಿಮರು ಕಬಳಿಸಿ ಮಸೀದಿ ಕಟ್ಟಿರುವ ಎಲ್ಲಾ ಹಿಂದೂ ದೇವಾಲಯಗಳನ್ನು ಹಿಂಪಡೆಯಲಿದ್ದಾರೆ. ಎರಡನೇ ಹಂತಹ ಕಾರ್ಯಾಚರಣೆ ಆರಂಭವಾಗಲಿದೆ. ಅಯೋಧ್ಯೆ ಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ವಾಗುತ್ತಿರುವಂತೆ ಎಲ್ಲಾ ದೇವಾಲಯ ಗಳನ್ನು ಮತ್ತೆ ನಾವು ಪಡೆದೇ ತೀರುತ್ತೇವೆ ಎಂದರು.

ಮಂಗಳೂರು ಹಿಜಾಬ್ ಸಂಘರ್ಷ: ಹಿಜಾಬ್ ವಿಚಾರ ಮುಗಿದಿತ್ತು ಇದರ ಹಿಂದೆ ಹಿಡನ್ ಅಜೆಂಡಾ ಇದೆ. ಮುಂದಿನ ದಿನದಲ್ಲಿ ಗಲಭೆಗೆ ಷಡ್ಯಂತರ ಇದೆ. ಪಿಎಫ್‌ಐ, ಎಸ್‌ಡಿಪಿಐ ಮೇಲೆ ಕ್ರಮ ಕೈಗೊಳ್ಳಬೇಕು. ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಹಾಳು ಮಾಡುವ ನೀಚರು ಇವರು. ನ್ಯಾಯಾಲಯದ ಆದೇಶ ಪಾಲಿಸದೆ ಮತ್ತೆ ಸೊಕ್ಕಿನಿಂದ ಮಾತಾಡುತ್ತಿದ್ದಾರೆ. ಮುಗ್ಧರನ್ನು ಬ್ರೈನ್ ವಾಶ್ ಮಾಡಿ ಅವರನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಕಿಡಿಕಾರಿದರು.

ಸಾವರ್ಕರ್–ಟಿಪ್ಪು ಹೋಲಿಕೆ ಖಂಡನೀಯ: ಟಿಪ್ಪು ಒಬ್ಬ ಮತಾಂಧ, ದೇಶ ದ್ರೋಹಿ, ಕನ್ನಡ ದ್ರೋಹಿ. ಆತ ತನ್ನ ಅಧಿಕಾರಾವಧಿಯಲ್ಲಿ ಹಿಂದೂ ದೇವಾಲಯಗಳನ್ನು ಒಡೆದು ಹಾಕಿದ್ದಾನೆ. ಮತಾಂಧ ದೇಶ ದ್ರೋಹಿಯೊಬ್ಬನೊಂದಿಗೆ ಸ್ವಾತಂತ್ರ್ಯ ಹೋರಾಟಗಾರ ಸಾವರ್ಕರ್ ಜೊತೆ ಹೋಲಿಕೆ ಮಾಡುವುದು ಸರಿ ಅಲ್ಲ. ಸಾವರ್ಕರ್‌ನ ಒಂದು ಕೂದಲಿಗೂ ಟಿಪ್ಪು ಸಮನಲ್ಲ. ಟಿಪ್ಪುಗೆ ನನ್ನ ಧಿಕ್ಕಾರವಿದೆ. ಇದೇ ಕಾರಣಕ್ಕೆ ಟಿಪ್ಪುವಿನ ಕೆಲ ವಿಷಯ ಪಠ್ಯಕ್ರಮದಿಂದ ಕೈ ಬಿಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸುಳ್ಳು ಮಾಹಿತಿಗಳನ್ನು ತೆಗೆದು ಹಾಕುವ ಕೆಲಸ ಮುಂದುವರೆಯಲಿದೆ ಎಂದು ತಿಳಿಸಿದರು.

ಮಾವು ಮೇಳದಲ್ಲಿ ಮೊದಲ ದಿನ 12 ಟನ್ ಮಾವು ಮಾರಾಟ

● ರಸಪುರಿ, ಬಾದಾಮಿ, ಮಲ್ಲಿಕಾ ತಳಿಯ ಹಣ್ಣಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು ● ಪಾರ್ಕಿಂಗ್ ಶುಲ್ಕ ರದ್ದು ಮಾಡಿದ್ದರಿಂದ ಜನಜಂಗುಳಿ ಹೆಚ್ಚು ● ನಿರೀಕ್ಷೆಗಿಂತ ಹೆಚ್ಚಿನ ಜನರು ಭೇಟಿ



ಮೈಸೂರು,ಮೇ 28(ಎಂಟಿವೈ)– ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ನಡೆಯುತ್ತಿರುವ ಮಾವು ಮೇಳಕ್ಕೆ ನಿರೀಕ್ಷೆಗೂ ಮೀರಿದ ಬೆಂಬಲ ವ್ಯಕ್ತವಾಗುತ್ತಿದ್ದು, ಮೊದಲ ದಿನ 12 ಟನ್ ಮಾವಿನ ಹಣ್ಣು ಮಾರಾಟವಾಗಿದೆ.

ಯಾವುದೇ ರಾಸಾಯನಿಕ ಬಳಸದೇ ನೈಸರ್ಗಿಕ ಪದ್ಧತಿಯಲ್ಲಿ ಮಾಗಿದ ಹಣ್ಣನ್ನೇ ಮೇಳದಲ್ಲಿ ಮಾರಾಟ ಮಾಡುತ್ತಿರುವುದರಿಂದ ಗ್ರಾಹಕರು ಮಾವಿನ ಮೇಳಕ್ಕೆ ಆಗಮಿಸಿ ತಮಗಿಷ್ಟ ಬಂದ ತಳಿಯ ಹಣ್ಣನ್ನು ಖರೀದಿಸುತ್ತಿದ್ದಾರೆ. ಮೇಳದಲ್ಲಿರುವ 24 ಮಳಿಗೆಯಲ್ಲಿ ಒಟ್ಟು 12 ಬಗೆಯ ಮಾವಿನ ಹಣ್ಣನ್ನು ಮಾರಾಟ ಮಾಡಲಾಗುತ್ತಿದ್ದು, ಅದರಲ್ಲಿ ರಸಪುರಿ, ಬಾದಾಮಿ, ಮಲ್ಲಿಕಾ ತಳಿಯ ಹಣ್ಣುಗಳೇ ಹೆಚ್ಚಾಗಿ ಮಾರಾಟವಾಗುತ್ತಿದೆ. ತೋಟಗಾರಿಕೆ ಇಲಾಖೆಯಿಂದ ಆಯೋಜಿಸಿರುವ ಮೂರು ದಿನಗಳ ಈ ಮೇಳಕ್ಕೆ ಜನರು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿರುವುದರಿಂದ ಮೇಳ ಆಯೋಜಕರಿಗೆ ಖುಷಿಯಾಗಿದೆ.

ಪೊಲೀಸ್ ಪಹರೆ: ಮಾವು ಮೇಳದಲ್ಲಿ ಶುಕ್ರವಾರ ಸಂಜೆ ಜನಜಂಗುಳಿ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಪಿಕ್‌ಪಾಕೆಟರ್‌ಗಳು ಕೈಚಳಕ ತೋರಿದ್ದರು. ಜೊತೆಗೆ ಕೆಲವು ಗ್ರಾಹಕರಿಂದ ಮೊಬೈಲ್ ಕದ್ದಿದ್ದರು. ಇದರಿಂದ ಇಂದಿನಿಂದ ಮಾವು ಮೇಳದಲ್ಲಿ ಬಿಗಿ ಪೊಲೀಸ್ ಪಹರೆ ಮಾಡಲಾಗಿದೆ. ಮಫ್ತಿಯಲ್ಲಿ ಪೊಲೀಸರ ಗಸ್ತನ್ನು ನಿಯೋಜಿಸಲಾಗಿದ್ದು, ಕಳ್ಳರನ್ನು ಹೆಡೆಮುರಿ ಕಟ್ಟಲು ಪೊಲೀಸರು ಮುಂದಾಗಿದ್ದಾರೆ. ಮೇಳದಲ್ಲಿ ಪೊಲೀಸರ ಗಸ್ತು ಹೆಚ್ಚಾಗಿರುವುದರಿಂದ ಶನಿವಾರ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಇಂದು ಮತ್ತು ನಾಳೆ ವಾರಾಂತ್ಯದ ರಜೆ ದಿನವಾಗಿರುವುದರಿಂದ ಮಾವು ಮೇಳಕ್ಕೆ ಭೇಟಿ ನೀಡುವವರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ.

ಪಾರ್ಕಿಂಗ್ ಚಾರ್ಜ್ ಮುಂದುವರೆಸಬೇಕಾಗಿತ್ತು: ಮಾವು ಮೇಳದ ಮೊದಲ ದಿನ ಗ್ರಾಹಕರಿಂದ ವಾಹನಗಳ ಪಾರ್ಕಿಂಗ್ ಶುಲ್ಕ ಸಂಗ್ರಹಿಸಲಾಗುತ್ತಿತ್ತು. ಸರ್ಕಾರದ ಸೂಚನೆ ಮೇರೆಗೆ ತೋಟಗಾರಿಕಾ ಇಲಾಖೆ ವತಿಯಿಂದಲೇ ಪಾರ್ಕಿಂಗ್ ಶುಲ್ಕ ಸಂಗ್ರಹಿಸಲಾಗುತ್ತಿತ್ತು. ಆದರೆ ಸಾರ್ವಜನಿಕರಿಂದ ಶುಲ್ಕ ಪರಿಷ್ಕರಣೆಗೆ ಒತ್ತಾಯ ಬಂದಿದ್ದ ಹಿನ್ನೆಲೆಯಲ್ಲಿ ತೋಟಗಾರಿಕಾ ಇಲಾಖಾ ಅಧಿಕಾರಿಗಳು ಪಾರ್ಕಿಂಗ್ ಶುಲ್ಕ ಸಂಗ್ರಹಿಸುವುದನ್ನು ಕೈಬಿಟ್ಟಿದ್ದರು.

ಇದರಿಂದಲೇ ಸಂಜೆ ವೇಳೆ ಮೇಳಕ್ಕೆ ನಿರೀಕ್ಷೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರು. ಜನಜಂಗುಳಿ ಲಾಭ ಪಡೆದು ಕಳ್ಳರು ಮೊಬೈಲ್ ಕಳ್ಳತನ ಮಾಡಿದ್ದರು. ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವ ಹಿನ್ನೆಲೆಯಲ್ಲಿ ನಿಯಂತ್ರಿಸಲು ತೋಟಗಾರಿಕಾ ಇಲಾಖೆಯ ವಿವಿಧ ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಗಿದೆ. ಜನರ ನಿಯಂತ್ರಣಕ್ಕೆ ಪಾರ್ಕಿಂಗ್ ಶುಲ್ಕ ಸಂಗ್ರಹ ಮುಂದುವರೆಸುವುದು ಸೂಕ್ತ ಎಂಬ ಅಭಿಪ್ರಾಯ ಮತ್ತೆ ಸಾರ್ವಜನಿಕ ವಲಯದಿಂದಲೇ ಕೇಳಿ ಬಂದಿದೆ. ತೋಟಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕ ನವೀನ್ ಕುಮಾರ್ ನೇತೃತ್ವದಲ್ಲಿ ಕೆಲವು ಸಿಬ್ಬಂದಿಗಳನ್ನು ಮೇಲ್ವಿಚಾರಣೆ ನಿಯೋಜಿಸಲಾಗಿದೆ.

ಪ್ರಾಣಾಯಾಮ, ಧ್ಯಾನ ಶಿಬಿರ

ಮೈಸೂರು, ಮೇ 28– ಮೈಸೂರಿನ ನಿಮಿಷಾಂಬ ನಗರದಲ್ಲಿರುವ ಬ್ರಹ್ಮಶ್ರೀ ನಾರಾಯಣಗುರು ಯೋಗ ಮಂದಿರ ಟ್ರಸ್ಟ್‌ನಿಂದ ಒಂದು ತಿಂಗಳ ಪ್ರಾಣಾಯಾಮ ಹಾಗೂ ಧ್ಯಾನ ಶಿಬಿರವನ್ನು ಜೂ.6ರಿಂದ ನಡೆಸಲಾಗುತ್ತದೆ. ಪ್ರತಿದಿನ ಬೆಳಗ್ಗೆ 6.30ರಿಂದ 7.30ರ ವರೆಗೆ ಯೋಗಾಚಾರ್ಯ ಬಿ. ಶಾಂತ ಅವರು ತರಬೇತಿ ನೀಡಲಿದ್ದಾರೆ. ಆಸಕ್ತರು ಹೆಸರು ನೋಂದಣಿ ಹಾಗೂ ಹೆಚ್ಚಿನ ವಿವರಗಳಿಗಾಗಿ ಮೊ. 9449696998ಗೆ ಸಂಪರ್ಕಿಸಲು ಕೋರಲಾಗಿದೆ.

ಬೇರೊಬ್ಬರ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿ ಮಾರಾಟ: ತಾಯಿ, ಮಕ್ಕಳ ವಿರುದ್ಧ ಕೇಸ್

ಪಾಂಡವಪುರ, ಮೇ 28–ಬೇರೊಬ್ಬರ ಜಮೀನನ್ನು ತಮ್ಮದೇ ಎಂದು ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡುವ ಮೂಲಕ ವಂಚಿಸಿರುವ ಆರೋಪದ ಮೇರೆಗೆ ತಾಯಿ ಮತ್ತು ಇಬ್ಬರು ಮಕ್ಕಳ ವಿರುದ್ಧ ನ್ಯಾಯಾಲಯದ ಆದೇಶದ ಮೇರೆಗೆ ಪಾಂಡವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪಾಂಡವಪುರ ತಾಲೂಕು ಟಿ.ಎಸ್.ಛತ್ರ ಗ್ರಾಮದ ಟಿ.ಕೆ.ಸತೀಶ್ ಎಂಬುವರು ವಂಚನೆಗೊಳಗಾದವರಾಗಿದ್ದು, ಇದೇ ತಾಲೂಕು ಪಟ್ಟಸೋಮನಹಳ್ಳಿ ಗ್ರಾಮದ ಲಕ್ಷ್ಮಮ್ಮ(61) ಅವರ ಪುತ್ರಿ ಲತಾ(38), ಪುತ್ರ ಯೋಗರಾಜ್(35) ಆರೋಪಕ್ಕೆ ಗುರಿಯಾಗಿರುವವರು.

ವಿವರ: ಪಾಂಡವಪುರ ತಾಲೂಕು ತಿರುಮಲಾಪುರ ಗ್ರಾಮದ ಸರ್ವೆ ನಂ. 42/3ರಲ್ಲಿ 1.29 ಎಕರೆ ಜಮೀನು ದೇವಮ್ಮ ಹೆಸರಿನಲ್ಲಿದೆ. ಆದರೆ ಆರೋಪಿ ಲಕ್ಷ್ಮಮ್ಮ ತಾನೇ ದೇವಮ್ಮ ಎಂದು ಹೇಳಿಕೊಂಡು 2016ರ ಏ.21ರಂದು ಸತೀಶ್ ಅವರಿಗೆ ಈ ಜಮೀನನ್ನು 5.05 ಲಕ್ಷ ರೂ.ಗಳಿಗೆ ಮಾರಾಟ ಮಾಡಿದ್ದಾರೆ. ತಾಯಿ ಮತ್ತು ಇಬ್ಬರು ಮಕ್ಕಳು ಸೇರಿಕೊಂಡು ಸದರಿ ಜಮೀನಿನ ಮಾಲೀಕರು ದೇವಮ್ಮ ಎಂದು ಲಕ್ಷ್ಮಮ್ಮನವರನ್ನೇ ಬಿಂಬಿಸಿ ಜಮೀನಿಗೆ ಸೇರಿದ ದಾಖಲೆಗಳನ್ನು ನಕಲಿಯಾಗಿ ಸೃಷ್ಟಿಸಿದ್ದಲ್ಲದೇ ದೇವಮ್ಮ ಹೆಸರಿನ ಓಟರ್ ಐಡಿ ಕಾರ್ಡ್‌ಗಳನ್ನೂ ಕೂಡ ನಕಲಿಯಾಗಿಯೇ ಸೃಷ್ಟಿಸಿ ಜಮೀನನ್ನು ಸತೀಶ್ ಅವರಿಗೆ ನೋಂದಣಿ ಮಾಡಿಕೊಟ್ಟಿದ್ದಾರೆ. ನಕಲಿ ದಾಖಲೆಗಳ ಮೂಲಕ ತಮಗೆ ಜಮೀನು ಮಾರಾಟ ಮಾಡಿರುವ ಬಗ್ಗೆ ಸತೀಶ್ ಅವರು ಪಾಂಡವಪುರ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ದೇವಮ್ಮ ಎಂದು ತಿದ್ದಿರುವ ಲಕ್ಷ್ಮಮ್ಮನವರ ಓಟರ್ ಐಡಿ ಕಾರ್ಡ್‌ನ ಜೆರಾಕ್ಸ್ ಕಾಪಿ ಕೂಡ ನಕಲಿ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಲಕ್ಷ್ಮಮ್ಮ ಮತ್ತು ಆಕೆಯ ಇಬ್ಬರು ಮಕ್ಕಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕೆಂಬ ನ್ಯಾಯಾಲಯದ ಆದೇಶದ ಮೇರೆಗೆ ಪಾಂಡವಪುರ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 420, 465, 467, 468, 471, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ರಿಂಗ್ ರಸ್ತೆಯಲ್ಲಿ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ: ಯುವಕ ಸಾವು


ಮೈಸೂರು, ಮೇ 28(ಆರ್‌ಕೆ)– ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಯುವಕನೋರ್ವ ಸಾವನ್ನಪ್ಪಿರುವ ಘಟನೆ ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿ ಕಳೆದ ರಾತ್ರಿ ಸಂಭವಿಸಿದೆ. ಕೆ.ಆರ್.ನಗರ ತಾಲೂಕು ಅಂಕನಹಳ್ಳಿ ಗ್ರಾಮದ ನಿವಾಸಿ ಜಿ. ನಾರಾಯಣಸ್ವಾಮಿ ಅವರ ಮಗ ಎ.ಎನ್. ಉಲ್ಲಾಸ್(25) ದುರಂತ ಸಾವಿಗೀಡಾದ ಯುವಕ. ಆರ್‌ಎಂಪಿ ನಿವಾಸಿಯಾದ ಉಲ್ಲಾಸ್, ಶುಕ್ರವಾರ ರಾತ್ರಿ ಹೆಬ್ಬಾಳದ ಹೋಟೆಲೊಂದರಲ್ಲಿ ಊಟ ಮಾಡಿ ತನ್ನ ಕರಿಷ್ಮಾ ಬೈಕ್‌ನಲ್ಲಿ ತೆರಳುತ್ತಿದ್ದಾಗ ಭಾರತ್ ಕ್ಯಾನ್ಸರ್ ಆಸ್ಪತ್ರೆ ಮತ್ತು ಶೇಷಾದ್ರಿಪುರಂ ಕಾಲೇಜು ನಡುವೆ ರಿಂಗ್‌ಯ ರಸ್ತೆ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದ್ದಾನೆ.



ಅಪಘಾತದಲ್ಲಿ ತಲೆ ಮತ್ತು ಮುಖಕ್ಕೆ ಗಾಯಗಳಾಗಿ ತೀವ್ರ ರಕ್ತಸ್ರಾವದ ಕಾರಣ ಉಲ್ಲಾಸ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ವಿವಿಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನಕುಮಾರ್ ಹಾಗೂ ಸಿಬ್ಬಂದಿ, ಮೃತ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ವಾಹನ ವಶಕ್ಕೆ ಪಡೆದಿದ್ದಾರೆ.

ನೇಣು ಹಾಕಿಕೊಂಡು ಪೊಲೀಸ್ ಕಾನ್‌ಸ್ಟೇಬಲ್ ಆತ್ಮಹತ್ಯೆ

ಮೈಸೂರು, ಮೇ 28(ಆರ್‌ಕೆ)– ಜೀವನದಲ್ಲಿ ಜಿಗುಪ್ಸೆಗೊಂಡು, ಪೊಲೀಸ್ ಕಾನ್‌ಸ್ಟೇಬಲ್ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ನಜರ್‌ಬಾದ್‌ನಲ್ಲಿರುವ ಜಲಪುರಿ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ಶುಕ್ರವಾರ ಸಂಜೆ ಸಂಭವಿಸಿದೆ.



ಮೈಸೂರಿನ ದೇವರಾಜ ಪೊಲೀಸ್ ಠಾಣೆ ಕಾನ್‌ಸ್ಟೇಬಲ್ ಪರಸಪ್ಪ ಕರಿಯಪ್ಪ ಕೊನ್ನೂರ(27) ಆತ್ಮಹತ್ಯೆ ಮಾಡಿಕೊಂಡವರು. ಮೂಲತಃ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕು ಕಂಕನವಾಡಿ ಗ್ರಾಮದ ಕರಿಯಪ್ಪ ಕೊನ್ನೂರ ಅವರ ಮಗನಾದ ಪರಸಪ್ಪ 2016ರಲ್ಲಿ ಪೊಲೀಸ್ ಇಲಾಖೆಗೆ ನೇಮಕಗೊಂಡು ಮೈಸೂರಿನ ದೇವರಾಜ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು. ಎರಡೂವರೆ ವರ್ಷಗಳ ಹಿಂದೆ ಮದುವೆಯಾಗಿದ್ದ ಅವರು, ಶುಕ್ರವಾರ ಸಂಜೆ 6.30ರ ಸಮಯದಲ್ಲಿ ಪತ್ನಿ ಛಾಯಾ ವಾಯುವಿಹಾರಕ್ಕೆ ತೆರಳಿದ್ದಾಗ ಜಲಪುರಿ ಪೊಲೀಸ್ ಕ್ವಾರ್ಟರ್ಸ್ ಮನೆಯ ಕಬ್ಬಿಣದ ಸಲಾಕೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಛಾಯಾ ವಾಯುವಿಹಾರದಿಂದ ಹಿಂದಿರುಗಿದಾಗ ಪರಸಪ್ಪ ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಅವರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದರು. ತಕ್ಷಣ ಸ್ಥಳಕ್ಕೆ ಧಾವಿಸಿದ ನಜರ್‌ಬಾದ್ ಇನ್ಸ್‌ಪೆಕ್ಟರ್ ಜಿ.ಎನ್. ಶ್ರೀಕಾಂತ್ ಹಾಗೂ ಸಿಬ್ಬಂದಿ ಮಹಜರು ನಡೆಸಿ ಮೃತ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮರಣೋತ್ತರ ಪರೀಕ್ಷೆ ನಂತರ ದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಿದರು. ಪರಸಪ್ಪ ಅವರ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಅವರ ನಿಧನಕ್ಕೆ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಸೇರಿದಂತೆ ಇಲಾಖಾ ಅಧಿಕಾರಿಗಳು ಹಾಗೂ ಸಿಬ್ಬಂದಿ ತೀವ್ರ ಸಂತಾಪ ಸೂಚಿಸಿದ್ದಾರೆ.

ಮೈದನಹಳ್ಳಿಯಲ್ಲಿ ಒಂದೇ ದಿನ ಎರಡು ಮನೆಯಲ್ಲಿ ಕಳವು

ಮೈಸೂರು, ಮೇ 28–ಮೈಸೂರು ತಾಲೂಕು ಇಲವಾಲ ಹೋಬಳಿ ಮೈದನಹಳ್ಳಿ ಗ್ರಾಮದಲ್ಲಿ ಒಂದೇ ದಿನ ಹಾಡು ಹಗಲೇ 2 ಮನೆಗಳ ಬಾಗಿಲು ಮೀಟಿ ಚಿನ್ನಾಭರಣ ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ಮೈದನಹಳ್ಳಿ ನಿವಾಸಿ ಎಂ.ಎಲ್.ಪರಶುರಾಂ(56) ಅವರು ಮೇ 26ರಂದು ಮಧ್ಯಾಹ್ನ 3 ಗಂಟೆ ವೇಳೆಯಲ್ಲಿ ತಮ್ಮ ಪತ್ನಿ ಮತ್ತು ಮಗಳನ್ನು ರೈಲ್ವೆ ನಿಲ್ದಾಣಕ್ಕೆ ಬಿಟ್ಟು ಸಂಜೆ 5.45ಕ್ಕೆ ವಾಪಸ್ಸಾದಾಗ ಅವರ ಮನೆಯ ಬಾಗಿಲನ್ನು ಮೀಟಿ ಒಳ ನುಗ್ಗಿದ ಖದೀಮರು 300 ಗ್ರಾಂ ತೂಕದ ಚಿನ್ನಾಭರಣ ಹಾಗೂ 25 ಗ್ರಾಂ ತೂಕದ ಬೆಳ್ಳಿ ಸಾಮಾನುಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಕಳುವಾಗಿರುವ ಪದಾರ್ಥಗಳ ಮೌಲ್ಯ 8.27 ಲಕ್ಷ ರೂ. ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಇದೇ ಗ್ರಾಮದ ಪುನೀತ್(34) ಎಂಬುವರು ಮೇ 26ರಂದು ಮಧ್ಯಾಹ್ನ 12.40ಕ್ಕೆ ಮನೆ ಬೀಗ ಹಾಕಿಕೊಂಡು ಹೋಗಿದ್ದು, ಸಂಜೆ 5.30ಕ್ಕೆ ವಾಪಸ್ಸಾದಾಗ ಅವರ ಮನೆಯ ಬಾಗಿಲನ್ನು ಮೀಟಿ 10 ಗ್ರಾಂ ತೂಕದ ಚಿನ್ನದ ಸರವನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಎರಡೂ ಪ್ರಕರಣಗಳನ್ನು ದಾಖಲಿಸಿಕೊಂಡಿರುವ ಇಲವಾಲ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೈಸೂರಲ್ಲಿ ಪ್ರವಾಸಿಗರಿಗೆ 'ಅಂಬಾರಿ' ಸಂಭ್ರಮ

● ವಾರಾಂತ್ಯದ ರಜೆಗಳಲ್ಲಿ ಮೈಸೂರಿನ ಪ್ರವಾಸಿ ತಾಣಗಳಲ್ಲಿ ಅಧಿಕ ಪ್ರವಾಸಿಗರ ಸಡಗರ ● ಫೆ.18ರಿಂದ ಮೇ 27ರವರೆಗೆ 3,724 ಮಂದಿ ಸವಾರಿ, ಕೆಎಸ್‌ಟಿಡಿಸಿಗೆ 5,58,600 ರೂ. ವರಮಾನ



ಮೈಸೂರು, ಮೇ 28(ಆರ್‌ಕೆ)– ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ)ವು ಆಯೋಜಿಸಿರುವ 'ಅಂಬಾರಿ' ಡಬಲ್ ಡೆಕ್ಕರ್ ಬಸ್‌ನಲ್ಲಿ ಸವಾರಿ ಮಾಡಲು ಮೈಸೂರಲ್ಲಿ ಪ್ರವಾಸಿಗರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ.

ಬಸ್ಸಿನ ರೂಫ್‌ಟಾಪ್‌ನಲ್ಲಿ ಸವಾರಿ ಮಾಡಲು ಬೇಡಿಕೆ ಹೆಚ್ಚಾಗಿದೆ. ಅದರಲ್ಲೂ ಸಂಜೆ ಹಾಗೂ ರಾತ್ರಿ ಟ್ರಿಪ್‌ನಲ್ಲಿ ಮೈಸೂರಿನ ಸೌಂದರ್ಯ ವೀಕ್ಷಿಸಲು ಪ್ರವಾಸಿಗರು ಬಯಸುತ್ತಿದ್ದಾರೆ. ಈ ಹಿಂದೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಹೋಟೆಲ್ ಮಯೂರ ಆವರಣದಿಂದ ಹೊರಡುತ್ತಿದ್ದ 'ಅಂಬಾರಿ' ಬಸ್ ಸೇವೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗುತ್ತಿತ್ತು.

ಕೋವಿಡ್ –19 ನಿರ್ಬಂಧದ ಹಿನ್ನೆಲೆಯಲ್ಲಿ ಕೆಲ ತಿಂಗಳ ಕಾಲ ಅಂಬಾರಿ ಬಸ್ ಸಂಚಾರವೇ ಸ್ಥಗಿತಗೊಂಡಿತ್ತು. ಕೋವಿಡ್ ಪ್ರಕರಣಗಳು ಸಂಪೂರ್ಣವಾಗಿ ಕಡಿಮೆಯಾದ ನಂತರ ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಜಿ. ಜಗದೀಶ್, ಮಯೂರ ಹೊಯ್ಸಳ ಹೋಟೆಲ್‌ನಿಂದ ಸಂಚರಿಸುತ್ತಿದ್ದ ಅಂಬಾರಿ ಬಸ್‌ಗಳನ್ನು ಫೆ.18 ರಿಂದ ಅರಮನೆ ದಕ್ಷಿಣ ದ್ವಾರಕ್ಕೆ ಸ್ಥಳಾಂತರಿಸಿದರು.

ನಂತರ ಫೆಬ್ರವರಿ ಮಾಹೆಯಲ್ಲಿ 282 ಮಂದಿ ಪ್ರಯಾಣಿಸಿದರೆ, ಮಾರ್ಚ್‌ನಲ್ಲಿ 774, ಏಪ್ರಿಲ್‌ನಲ್ಲಿ 1,170 ಹಾಗೂ ಮೇ 27ರ ವರೆಗೆ 1,498 ಮಂದಿ ಸೇರಿ ಫೆ. 18ರಿಂದ ಮೇ 27ರ ವರೆಗೆ ಒಟ್ಟು 3,724 ಮಂದಿ ಅಂಬಾರಿ ಬಸ್‌ನಲ್ಲಿ ಸವಾರಿ ಸಾಗಿದ್ದಾರೆ ಒಬ್ಬರಿಗೆ 150 ರೂ. ನಂತೆ ಒಟ್ಟು 5,58,600 ರೂ. ಆದಾಯ ಗಳಿಸಿರುವ ಕೆಎಸ್‌ಟಿಡಿಸಿಯು ಪ್ರತಿದಿನ ಎರಡು ಅಂಬಾರಿ ಬಸ್‌ಗಳನ್ನು ಆಪರೇಟ್ ಮಾಡುತ್ತಿದೆ.

ಶುಕ್ರವಾರ, ಶನಿವಾರ, ಭಾನುವಾರ ಹಾಗೂ ಸರ್ಕಾರಿ ರಜಾ ದಿನಗಳಲ್ಲಿ ಮೈಸೂರಿಗೆ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಬರುತ್ತಿರುವುದರಿಂದ ಡಬಲ್ ಡೆಕ್ಕರ್ ಬಸ್ ಸವಾರಿಗೆ ಭಾರೀ ಬೇಡಿಕೆ ಇರುತ್ತದೆ.

ಅರಮನೆ ದಕ್ಷಿಣ ದ್ವಾರದಿಂದ ಹೊರಡುವ ಬಸ್, ಹಾರ್ಡಿಂಜ್ ಸರ್ಕಲ್, ಕಾರಂಜಿ ಕೆರೆ, ಚಾಮುಂಡಿ ವಿಹಾರ ಕ್ರೀಡಾಂಗಣ, ಸರ್ಕಾರಿ ಅತಿಥಿಗೃಹ, ಸೆಂಟ್ ಫಿಲೋಮಿನಾ ಚರ್ಚ್, ಬನ್ನಿ ಮಂಟಪ, ಹೈವೇ ಸರ್ಕಲ್, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಡಿಸಿ ಕಚೇರಿ, ರಾಮಸ್ವಾಮಿ ಸರ್ಕಲ್, ಸಂಸ್ಕೃತ ಪಾಠಶಾಲೆ ಸರ್ಕಲ್ ಮೂಲಕ ಅಂಬಾರಿ ಬಸ್ ಮರಳಿ ಅರಮನೆ ದಕ್ಷಿಣ ದ್ವಾರದ ಬಳಿಗೆ ತಲುಪಲಿದೆ.

ಒಂದೂವರೆ ಗಂಟೆಯಲ್ಲಿ ಸುಮಾರು 25 ಕಿ.ಮೀ. ಅಂತರದ ಟ್ರಿಪ್ ಕ್ರಮಿಸಲಿರುವ 40 ಆಸನಗಳಿರುವ ಬಸ್ಸಿನಲ್ಲಿ ರೂಫ್ ಟಾಪ್‌ನಲ್ಲಿ 20 ಮಂದಿ ಸವಾರಿ ಮಾಡುತ್ತಿದ್ದು, ಬೇಡಿಕೆ ಜಾಸ್ತಿಯಾದಂತೆ ಹೆಚ್ಚುವರಿ ಬಸ್ ಒದಗಿಸಲು ನಿಗಮವು ಸಜ್ಜಾಗಿದೆ.

ಅರಮನೆ ವೀಕ್ಷಣೆಗಾಗಿ ಬರುವ ಪ್ರವಾಸಿಗರ ಪೈಕಿ ಬಹುತೇಕ ಮಂದಿ ಡಬಲ್ ಡೆಕ್ಕರ್ ಬಸ್ಸಿನಲ್ಲಿ ಮೈಸೂರಿನ ಸೌಂದರ್ಯ ವೀಕ್ಷಿಸಲು ಬಯಸುತ್ತಿರುವುದರಿಂದ ನಿಗಮಕ್ಕೆ ಹೆಚ್ಚಿನ ವರಮಾನವೂ ಬರತೊಡಗಿದೆ.



ಮೈಸೂರು ಮಿತ್ರ ಭಾನುವಾರ 29 ಮೇ 2022

ನಂ.ಗೂಡಲ್ಲಿ ಅದ್ದೂರಿ ಹನುಮ ಉತ್ಸವ

- ನಗರದೆಲ್ಲೆಡೆ ಭಜರಂಗಿಯ ಸ್ಮರಣೆ
- ಸಾವಿರಾರು ಭಕ್ತರು ಭಾಗಿ
- ಮಿನಿ ದಸರಾ ಮಾದರಿಯಲ್ಲಿ ನಡೆದ ಅದ್ದೂರಿ ಮೆರವಣಿಗೆ
- ಬೃಹತ್ ಆಂಜನೇಯಸ್ವಾಮಿ ಮೂರ್ತಿಗೆ ಭಕ್ತರಿಂದ ಪುಷ್ಪನಮನ





ನಂಜನಗೂಡು, ಮೇ 28(ಸುದರ್ಶನ್)– ನಗರದಲ್ಲಿ ಹನುಮ ಜಯಂತಿ ಉತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶನಿವಾರ ಸಂಭ್ರಮ, ಸಡಗರದಿಂದ ನಡೆಯಿತು.

ನಗರದ ಶ್ರೀವೀರಾಂಜನೇಯ ಧರ್ಮ ಜಾಗೃತಿ ಬಳಗದಿಂದ ಆಯೋಜಿಸಲಾಗಿದ್ದ ಹನುಮ ಜಯಂತಿ ಉತ್ಸವವನ್ನು ಶ್ರೀಕಂಠೇಶ್ವರಸ್ವಾಮಿ ದೇವಾಲಯ ಮುಂಭಾಗದ ಆವರಣದಲ್ಲಿ ಶಾಸಕ ಬಿ.ಹರ್ಷವರ್ಧನ್, ಮಲ್ಲನಮೂಲೆಯ ಮಠಾಧೀಶ ಶ್ರೀಚೆನ್ನಬಸವ ಸ್ವಾಮೀಜಿ, ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಅವರು ಬೃಹತ್ ಶ್ರೀಆಂಜನೇಯ ಸ್ವಾಮಿ ಮೂರ್ತಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಬೃಹತ್ ಹನುಮನ ಮೂರ್ತಿ: ನಗರದಲ್ಲಿ ನಡೆದ ಹನುಮ ಜಯಂತಿ ಉತ್ಸವದಲ್ಲಿ ಸುಮಾರು 8 ಅಡಿ ಎತ್ತರದ ಹನುಮನ ಮೂರ್ತಿ ಹಾಗೂ ಮೂರ್ತಿಯ ಹಿಂಭಾಗ 12 ಅಡಿ ಎತ್ತರದ 'ಓಂ' ಚಿಹ್ನೆ ಪ್ರಮುಖ ಆಕರ್ಷಣೆಯಾಗಿತ್ತು. ಮೂರ್ತಿಗೆ ವಿಶೇಷ ಹೂವಿನಿಂದ ಹಾಗೂ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಅಲ್ಲದೆ ಮತ್ತೊಂದು 4.5 ಅಡಿ ಎತ್ತರದ ಕಂಚಿನ ಆಂಜನೇಯ ಮೂರ್ತಿ, ಹನುಮಾನ್ ಟ್ಯಾಬ್ಲೋಗಳು ಮೆರವಣಿಗೆಗೆ ಮೆರಗು ನೀಡಿದವು.

ಜಾನಪದ ಕಲಾತಂಡಗಳ ಮೆರಗು: ಮೆರವಣಿಗೆಯಲ್ಲಿ ಚೆಂಡೆವಾದ್ಯ, ನಾದಸ್ವರ, ನಂದಿಧ್ವಜ, ತಮಟೆ, ನಗಾರಿ, ವೀರಗಾಸೆ, ಪೂಜಾ ಕುಣಿತ, ಕಂಸಾಳೆ ಕುಣಿತ, ದೇವರ ಕುಣಿತ, ಡೊಳ್ಳು ಕುಣಿತ, ಗಾರುಡಿ ಗೊಂಬೆ, ಗೊರವರ ಕುಣಿತ, 10 ಅಡಿಯ ಹನುಮಂತನ ವಿಶೇಷ ವೇಷಧಾರಿ, ಸೇರಿದಂತೆ ಅನೇಕ ಜಾನಪದ ಕಲಾತಂಡಗಳು ಪಾಲ್ಗೊಂಡು ಜನಾಕರ್ಷಣೆಯಾಗಿತ್ತು. ಮಿನಿ ದಸರಾ ಮಾದರಿಯಲ್ಲಿ ನಡೆದ ಅದ್ಧೂರಿ ಮೆರವಣಿಗೆಯು ನಗರದ ಆರ್‌ಪಿ ರಸ್ತೆ, ಹುಲ್ಲಹಳ್ಳಿ ವೃತ್ತ ಮಾರ್ಗವಾಗಿ ಎಂಜಿಎಸ್ ರಸ್ತೆ ಮೂಲಕ ಸಾಗಿ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಅಂತ್ಯಗೊಂಡಿತು.

ನಗರದೆಲ್ಲೆಡೆ ಸಂಭ್ರಮ: ಮೆರವಣಿಗೆಯಲ್ಲಿ ಸಾವಿರಾರು ಕಾರ್ಯಕರ್ತರು ತಲೆಗೆ ಕೇಸರಿ ಬಣ್ಣದ ಪಟ್ಟಿ ಕಟ್ಟಿಕೊಂಡು ಸಂಭ್ರಮಿಸಿದರು. 'ಜೈ ಭಜರಂಗಿ', 'ಜೈ ಹನುಮ', 'ಜೈ ಶ್ರೀರಾಮ' ಎಂಬಿತ್ಯಾದಿ ಘೋಷಣೆಗಳನ್ನು ಕೂಗಿ ಉತ್ಸಾಹದಿಂದ ಕುಣಿದು ಕುಪ್ಪಳಿಸಿದರು.

ಹನುಮ ಜಯಂತಿ ಅಂಗವಾಗಿ ನಗರದಾದ್ಯಂತ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ನಗರದ ಪ್ರಮುಖ ರಸ್ತೆಯಲ್ಲಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಕೇಸರಿ ಬಣ್ಣದ ಬ್ಯಾನರ್, ಬಂಟಿಂಗ್ಸ್, ಕಟ್ಟಲಾಗಿತ್ತು. ಭಕ್ತರು ಶ್ರದ್ಧಾಭಕ್ತಿಯಿಂದ ಶ್ರೀಆಂಜನೇಯ ಮೂರ್ತಿಯನ್ನು ಬರಮಾಡಿಕೊಂಡರು.

ಬಿಗಿ ಬಂದೋಬಸ್ತ್: ಮುನ್ನೆಚ್ಚರಿಕೆ ಕ್ರಮವಾಗಿ ಡಿವೈಎಸ್‌ಪಿ ಗೋವಿಂದರಾಜು, ವೃತ್ತ ನಿರೀಕ್ಷಕ ಲಕ್ಷ್ಮೀಕಾಂತ ತಳವಾರ್, ಪಿಎಸ್‌ಐಗಳಾದ ವಿಜಯರಾಜು, ಪುಟ್ಟ ನಂಜಶೆಟ್ಟಿ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು. ಅಲ್ಲದೇ ಹನುಮ ಜಯಂತಿ ಮೆರವಣಿಗೆ ಹಿನ್ನೆಲೆಯಲ್ಲಿ ನಗರದ 2 ಮುಖ್ಯ ರಸ್ತೆಗಳಲ್ಲಿ ಅರೆಸೇನಾ ಪಡೆ ಸೇರಿದಂತೆ 150ಕ್ಕೂ ಹೆಚ್ಚುವರಿ ಪೊಲೀಸ್ ನಿಯೋಜಿಸಲಾಗಿತ್ತು.

ವಿಶೇಷ ಪೂಜಾ ಕೈಂಕರ್ಯ: ಇದಕ್ಕೂ ಮೊದಲು ಮಹದೇವನಗರದ ಬಳಿಯ ಮಾರುತಿ ಗುಡ್ಡದ ಶ್ರೀಪರ್ವತ ಆಂಜನೇಯಸ್ವಾಮಿ ದೇವಾಲಯದಲ್ಲಿ ಪುರೋಹಿತ್ ಕೃಷ್ಣಜೊಯೀಸ್ ನೇತೃತ್ವದ ಋತ್ವಿಕರ ತಂಡ ಲೋಕ ಕಲ್ಯಾಣಾರ್ಥವಾಗಿ ನವಗ್ರಹ, ಗಣಪತಿ, ಶ್ರೀಆಂಜನೇಯಸ್ವಾಮಿ ಹೋಮ ಮತ್ತು ಸಂಕಲ್ಪ ಸೇವೆಯನ್ನು ಮಾಡಿದರು. ಹನುಮೋತ್ಸವ ನಿರ್ವಿಘ್ನವಾಗಿ ನೆರವೇರಲಿ ಹಾಗೂ ಎಲ್ಲಾ ಜನತೆಯು ನೆಮ್ಮದಿ, ಸೌಖ್ಯದಿಂದ ಬಾಳುವೆ ಮಾಡಲಿ ಎಂದು ಸಂಕಲ್ಪ ಮಾಡಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಶಾಸಕ ಬಿ.ಹರ್ಷವರ್ಧನ್ ಹಾಜರಿದ್ದು, ದೇವರ ದರ್ಶನ ಪಡೆದರು. ನಂತರ ಮಾತನಾಡಿದ ಅವರು, ಮಾರುತಿ ಗುಡ್ಡವನ್ನು ಚಿಕ್ಕದೇವಮ್ಮ ಬೆಟ್ಟದ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಜೊತೆಗೆ, ಕುಡಿಯುವ ನೀರು, ವಿದ್ಯುತ್‌ಚ್ಛಕ್ತಿ ಸೌಲಭ್ಯ ಸೇರಿದಂತೆ ಮೂಲ ಸೌಕರ್ಯ ಒದಗಿಸುತ್ತೇನೆ ಎಂದು ಭರವಸೆ ನೀಡಿದರು.

ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸಲು ಸಲಹೆ



ತಿ.ನರಸೀಪುರ, ಮೇ 28(ಎಸ್‌ಕೆ)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯು ಮುಂಬರುವ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಿ ರುವುದರಿಂದ ಕಾರ್ಯಕರ್ತರು ಆಲಸ್ಯ ಮಾಡದೇ ಸಂಘಟಿತರಾಗಿ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಬೇಕು ಎಂದು ವರುಣಾ ವಿಧಾನಸಭಾ ಕ್ಷೇತ್ರದ ಮಾಜಿ ಅಧ್ಯಕ್ಷ ತೋಟದಪ್ಪ ಬಸವರಾಜು ಹೇಳಿದರು.

ಪದವೀಧರರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಶನಿವಾರ ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ, ಟಿ.ನರಸೀಪುರ ಟೌನ್, ಬೈರಾಪುರ ಮಹಾಶಕ್ತಿ ಕೇಂದ್ರದಿಂದ ಪದವೀಧರರನ್ನು ಭೇಟಿ ಮಾಡಿ, ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಪರವಾಗಿ ಮತಯಾಚಿಸಿ ಅವರು ಮಾತನಾಡಿದರು.

ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವು ನಿಶ್ಚಿತವಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಜನಪರ ಯೋಜನೆಗಳನ್ನು ಪ್ರತಿ ಮತದಾರನಿಗೆ ತಲುಪಿಸಿ ಅವರ ಮನವೊಲಿಸಿ ಮತ ಯಾಚಿಸುವ ಕೆಲಸ ಮಾಡಬೇಕಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗುನಾಯಕ ಮಾತನಾಡಿ, ಕಳೆದ ಬಾರಿ ನಡೆದ ಪದವೀಧರ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಕೇವಲ 160 ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಮತ್ತೆ ಸೋಲು ಮರುಕಳಿಸದಂತೆ ಎಚ್ಚರವಹಿಸಬೇಕು. ಪಕ್ಷದ ಅಭ್ಯರ್ಥಿಯನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ ಕ್ಷೇತ್ರದಲ್ಲಿ ಬಿಜೆಪಿ ಶಾಸಕರಿಲ್ಲ ಎಂಬ ಕೊರಗನ್ನು ನೀಗಿಸಲು ಪಣತೊಟ್ಟು ಕೆಲಸ ಮಾಡುವಂತೆ ಕಾರ್ಯಕರ್ತರಿಗೆ ಮನವಿ ಮಾಡಿದರು. ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಎಂ.ಮಿಥುನ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಗಣೇಶ್, ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷ ಮಂಜುಕುಮಾರ್, ಯುವ ಮೋರ್ಚಾ ಅಧ್ಯಕ್ಷ ಮೋಹನ್‌ಕುಮಾರ್, ಸ್ಟಾರ್ ಮಲ್ಲೇಶ್, ಬೈರಾಪುರ ಬಾಲು, ಮಹದೇವ, ಅರವಿಂದ, ಪುಟ್ಟರಾಜು ಮತ್ತಿತರಿದ್ದರು.

ಎಸ್‌ಎಸ್‌ಎಲ್‌ಸಿ: ರೋಚನಾಗೆ ಅತ್ಯುನ್ನತ ಶ್ರೇಣಿ



ಮಲ್ಲುಂಡಿ, ಮೇ 28– ನಂಜನಗೂಡಿನ ಕಾರ್ಮೆಲ್ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿನಿ ರೋಚನಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 596 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ.

ಬೈಲಕುಪ್ಪೆಯಲ್ಲಿ ದೊಡ್ಡಮ್ಮತಾಯಿ ಹಬ್ಬ ಆಚರಣೆ

ಬೈಲಕುಪ್ಪೆ, ಮೇ 28(ರಾಜೇಶ್)– ಗಣಪತಿ ದೇವಸ್ಥಾನ ಸಮಿತಿಯಿಂದ ಗ್ರಾಮದೇವತೆ ದೊಡ್ಡಮ್ಮತಾಯಿ ಹಬ್ಬ ಶುಕ್ರವಾರ ಆಚರಿಸಲಾಯಿತು. ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಗಣಪತಿ ದೇವಸ್ಥಾನದ ವಾರ್ಷಿಕೋತ್ಸವ ಬರುತ್ತಿರುವುದರಿಂದ, ಮುಂಚಿತವಾಗಿ ದೊಡ್ಡಮ್ಮ ತಾಯಿ ಹಬ್ಬವನ್ನು ಆಚರಿಸುವುದು



ವಾಡಿಕೆ. ಅದರಂತೆ ದೊಡ್ಡಮ್ಮತಾಯಿ ಹಬ್ಬವನ್ನು ಸಡಗರ–ಸಂಭ್ರಮದಿಂದ ಗ್ರಾಮಸ್ಥರೊಂದಿಗೆ ಆಚರಿಸಿ ದೇವರಿಗೆ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಗಣಪತಿ ಸೇವಾ ಸಮಿತಿ ಅಧ್ಯಕ್ಷ ವಿಜಯ್‌ಕುಮಾರ್, ಉಪಾಧ್ಯಕ್ಷ ಡಿ.ಸುಬ್ರಮಣ್ಯ, ಕಾರ್ಯದರ್ಶಿ ಡಿ.ಜೆ.ಮಂಜುನಾಥ್, ಸದಸ್ಯರಾದ ನಿಸರ್ಗಸ್ವಾಮಿ, ಟೈಲರ್ ಮಂಜುನಾಥ್, ಸುರೇಶ್, ಮರಿನಾಯಕ, ಕೆ.ರಮೇಶ್, ವಾಟರ್ ರಾಜೇಶ್, ವೇಣುಗೋಪಾಲ್, ಕಾಂತರಾಜು, ಜಗದೀಶ್, ಪಿರಿಯಾಪಟ್ಟಣ ತಾಲೂಕಿನ ಹಿರಿಯ ವಕೀಲ ಜವರೇಗೌಡ, ಗ್ರಾಪಂ ಸದಸ್ಯರಾದ ಬಾಲಾಜಿ, ರಘು, ಹಳೆಯೂರು ರಘು, ಮಂಚದೇವನಹಳ್ಳಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಎನ್.ಬಿ.ಮಂಜುನಾಥ್ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಇದ್ದರು.

ಶಾಲೆಗೆ ಚಕ್ಕರ್ ಹಾಕಿ ಈಜಲು ಹೋದ ವಿದ್ಯಾರ್ಥಿ ಸಾವು

ಹುಣಸೂರು, ಮೇ 28(ಕೆಕೆ)– ಶಾಲೆಗೆ ಚಕ್ಕರ್ ಹಾಕಿ ಕೆರೆಯಲ್ಲಿ ಈಜಲು ತೆರಳಿದ



ವಿದ್ಯಾರ್ಥಿಯೊಬ್ಬ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ತಿಪ್ಪಲಾಪುರ ಬಳಿಯ ಬೆಳ್ತೂರು ಕೆರೆಯಲ್ಲಿ ಶನಿವಾರ ನಡೆದಿದೆ. ಚಿಲ್ಕುಂದ ಗ್ರಾಮದ ನಿವಾಸಿ ಮಂಜುನಾಥ್ ಹಾಗೂ ಶೈಲಜಾ ದಂಪತಿಯ ಪುತ್ರ ಹರ್ಷ(14) ಮೃತಪಟ್ಟ ವಿದ್ಯಾರ್ಥಿ.


ಘಟನೆಯ ವಿವರ: ಹರ್ಷ ಪಟ್ಟಣದ ಸೆಂಟ್‌ಜೋಸೆಫರ್ ಪ್ರೌಢಶಾಲೆಯಲ್ಲಿ 9ನೇ ತರಗತಿ ವ್ಯಾಸಂಗ ಮಾಡುತ್ತಿದ್ದನು. ಶನಿವಾರ ಶಾಲೆಗೆ ಗೈರಾಗಿ ಐವರು ಸ್ನೇಹಿತರೊಂದಿಗೆ ಕೆ.ಆರ್.ನಗರ ರಸ್ತೆಯ ಕರ್ನಾಟಕ ಉಲ್ಲನ್ ಫ್ಯಾಕ್ಟರಿ ಹಿಂಭಾಗದಲ್ಲಿರುವ ಬೆಳ್ತೂರು ಕೆರೆಗೆ ತೆರಳಿ, ಈಜಲು ನೀರಿಗೆ ಇಳಿದಿದ್ದಾನೆ. ಈ ವೇಳೆ ನೀರಿನ ಸೆಳೆತದಿಂದ ಕೆರೆಯಲ್ಲಿ ಮುಳುಗಿದ್ದಾನೆ. ಇದನ್ನು ಕಂಡ ದಡದಲ್ಲಿದ್ದ ಸ್ನೇಹಿತರು ಹೆದರಿಕೊಂಡು ದಡದಲ್ಲೇ ಶಾಲೆಯ ಸಮವಸ್ತ್ರವನ್ನು ಬಿಟ್ಟು ಓಡಿ ಹೋಗಿದ್ದಾರೆ. ಕೆರೆ ಕಡೆಯಿಂದ ವಿದ್ಯಾರ್ಥಿಗಳು ಓಡುತ್ತಿರುವುದನ್ನು ಕಂಡ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ತಿಪ್ಪಲಾಪುರದ ರೈತರು ಕೆರೆ ದಡಕ್ಕೆ ಬಂದು ನೋಡಿದ ವೇಳೆ ಶಾಲಾ ಸಮವಸ್ತ್ರವನ್ನು ಕಂಡು ತಕ್ಷಣವೇ ಅಗ್ನಿಶಾಮಕ ದಳ ಹಾಗೂ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಸ್ಥಳಕ್ಕೆ ಬಂದ ಪೊಲೀಸರು ಶಾಲಾ ಗುರುತಿನ ಕಾರ್ಡ್‌ನಲ್ಲಿದ್ದ ಮೊಬೈಲ್ ನಂಬರ್‌ಗೆ ಕರೆಮಾಡಿ ಪೋಷಕರಿಗೆ ಮಾಹಿತಿ ನೀಡಿದ್ದಾರೆ. ಅಗ್ನಿಶಾಮಕ ದಳದ ಅಧಿಕಾರಿ ಸತೀಶ್ ನೇತೃತ್ವದಲ್ಲಿ ಸಿಬ್ಬಂದಿ ಕೆರೆಯಲ್ಲಿ ಹುಡುಕಾಟ ನಡೆಸಿ ವಿದ್ಯಾರ್ಥಿಯ ಶವವನ್ನು ಮೇಲೆತ್ತಿದ್ದಾರೆ. ಸ್ಥಳಕ್ಕೆ ಗ್ರಾಮಾಂತರ ಠಾಣೆ ಎಸ್‌ಐ ಜಮೀರ್ ಅಹಮದ್ ಭೇಟಿ ನೀಡಿ ಮಹಜರ್ ನಡೆಸಿ, ಶವವನ್ನು ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಲಾಗಿದೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುಟ್ಟಸ್ವಾಮಿನಾಯಕ ನಿಧನ



ಹೆಡತಲೆ, ಮೇ 28– ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದ ನಿವಾಸಿ ಪುಟ್ಟಸ್ವಾಮಿನಾಯಕ (62) ಶನಿವಾರ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಳಗವನ್ನು ಅಗಲಿದ್ದಾರೆ. ಮಧ್ಯಾಹ್ನ 2ಗಂಟೆಗೆ ಸ್ವಗ್ರಾಮದಲ್ಲಿ ಅಂತ್ಯಕ್ರೀಯೆ ನೆರವೇರಿತು ಎಂದು ಕುಟುಂಬ ವರ್ಗದವರು ತಿಳಿಸಿದರು.

ನಂಜುಂಡಸ್ವಾಮಿ



ಹುಲ್ಲಹಳ್ಳಿ, ಮೇ 28– ಗ್ರಾಮದ ನಿವಾಸಿ ಎಚ್.ಕೆ.ನಂಜುಂಡಸ್ವಾಮಿ (92) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಮತ್ತು ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಕಪಿಲಾ ನದಿ ದಡದಲ್ಲಿ ನೆರವೇರಿತು ಎಂದು ಕುಟುಂಬ ವರ್ಗದವರು ತಿಳಿಸಿದರು.

ನಟರಾಜ



ಕೆ.ಆರ್.ನಗರ, ಮೇ 28–ನಗರದ ಉಪ್ಪಾರ ಶ್ರೀರಾಮ ಮಂದಿರ ಟ್ರಸ್ಟ್‌ನ ಅಧ್ಯಕ್ಷ ನಟರಾಜ ಶನಿವಾರ ನಿಧನರಾದರು. ಮೃತರು ಪತ್ನಿ ನಾಗರತ್ನ, ಮಗ ರಘು, ಮಗಳು ಸೌಮ್ಯ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ 9 ಗಂಟೆಗೆ ನಗರದ ರುದ್ರಭೂಮಿಯಲ್ಲಿ ನಡೆಯಲಿದೆ.

ಕಲಿಕಾ ತರಬೇತಿ ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕ

ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ



ಸರಗೂರು, ಮೇ 28(ನಾಗೇಶ್)– ಕಲಿಕಾ ತರಬೇತಿ ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕ ಎಂದು ಲಯನ್ಸ್ ಶಾಲೆ ಆಡಳಿತ ಮಂಡಳಿ ಕಾರ್ಯದರ್ಶಿ ಎಸ್.ಎಸ್. ಪ್ರಭುಸ್ವಾಮಿ ಅಭಿಪ್ರಾಯಪಟ್ಟರು.

ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆಯಲ್ಲಿ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕೊರೊನಾ ಹಿನ್ನೆಲೆಯಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿ ಕುಂಠಿತವಾಗಿತ್ತು. ಈ ವೇಳೆ ಶಿಕ್ಷಕರು ಮಕ್ಕಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವ ಮೂಲಕ ಅವರಿಗೆ ಧೈರ್ಯದಿಂದ ಪರೀಕ್ಷೆ ಎದುರಿಸಲು ಮಾರ್ಗದರ್ಶನ ಮಾಡಿದ ಫಲವಾಗಿ ಇಂದು ಮಕ್ಕಳು ಹೆಚ್ಚು ಅಂಕ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ ಎಂದರು.

ಲಯನ್ಸ್ ಅಕಾಡೆಮಿ ಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದ್ದು, ಮನೀತ್ 606 ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾನೆ. ಅಂಜುಮಾನ್ ಭಾನು, ಮೋಮಿನಾ ಭಾನು ತಲಾ 603, ಎನ್.ಸಂಜನಾ 589, ಸುಮನ್ ಸಿರ್ವಿ 584, ಗಂಧರ್ವ 569 ಅಂಕ ಪಡೆದಿದ್ದು, ಇದೇ ವೇಳೆ ವಿದ್ಯಾರ್ಥಿಗಳನ್ನು ಶಾಲೆ ವತಿಯಿಂದ ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಲಯನ್ಸ್ ಅಧ್ಯಕ್ಷ ಬ್ರಹ್ಮದೇವಯ್ಯ, ಕಾರ್ಯದರ್ಶಿ ಎಸ್.ಎಸ್. ಪ್ರಭುಸ್ವಾಮಿ, ಖಜಾಂಚಿ ಎಸ್.ಬಿ.ನಾಗರಾಜು, ನಿರ್ದೇಶಕರಾದ ಎಸ್.ನಾರಾಯಣ್, ಸೋಮಪ್ರಭ, ಸುರೇಶ್ ಜೈನ್, ಶ್ರೀಕಂಠಸ್ವಾಮಿ, ಎಸ್.ಪಿ.ಪ್ರಸಾದ್, ಮುಖ್ಯಶಿಕ್ಷಕರಾದ ಬಿ.ಡಿ.ದಾಸಚಾರ್, ಪದ್ಮಶ್ರೀ, ಸಹ ಶಿಕ್ಷಕರಾದ ಮಾನಸ ಎ. ರೋಜಾ, ಕುಮಾರ್, ರಮೇಶ್ ಕುಮಾರ್, ಶಿಲ್ಪಶ್ರೀ, ಶಾಲಾ ಮಕ್ಕಳಿದ್ದರು.

ಜಿ.ಎಂ.ಮಧು ಪರ ಧ್ರುವನಾರಾಯಣ್ ಪ್ರಚಾರ



ಹೆಚ್.ಡಿ.ಕೋಟೆ, ಮೇ 28(ಮಂಜು)– ಬಿಜೆಪಿ ಸರ್ಕಾರದ ಸತತ ವೈಫಲ್ಯದಿಂದ ಜನತೆ ರೋಸಿ ಹೋಗಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಮತ ಯಾಚಿಸಿ ಮಾತನಾಡಿದ ಅವರು, ಮಧು ಜಿ.ಮಾದೇಗೌಡರು ಶಿಕ್ಷಣ ಪ್ರೇಮಿಯಾಗಿ ಶೈಕ್ಷಣಿಕ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. 36 ಶಿಕ್ಷಣ ಸಂಸ್ಥೆ ಹೊಂದಿರುವ ಅವರು ಒಂದು ಸಾವಿರ ಪದವೀಧರರಿಗೆ ಉದ್ಯೋಗ ನೀಡಿದ್ದಾರೆ. ಅಲ್ಲದೇ ಗ್ರಾಮೀಣ ಭಾಗದ ಲಕ್ಷಾಂತರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಲು ಕಾರಣರಾಗಿದ್ದಾರೆ. ಶೈಕ್ಷಣಿಕ ಹಿನ್ನೆಲೆ ಇರುವ ಮಧು ಜಿ.ಮಾದೇಗೌಡರನ್ನು ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪದವೀಧರರ ಚುನಾವಣೆಗೆ ಒಮ್ಮತದ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ಹೀಗಾಗಿ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಿ ಎಂದು ಮನವಿ ಮಾಡಿದರು.

ಈ ವೇಳೆ ಶಾಸಕ ಅನಿಲ್ ಚಿಕ್ಕಮಾದು, ಎಂಎಲ್‌ಸಿ ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಮಾದಪ್ಪ, ಜಿಪಂ ಮಾಜಿ ಸದಸ್ಯರಾದ ಚಿಕ್ಕವೀರನಾಯಕ, ಎಚ್.ಸಿ.ಮಂಜುನಾಥ್ ಭಾಗ್ಯಲಕ್ಷ್ಮಿ, ಮುಖಂಡರಾದ ಹೆಚ್.ಸಿ. ನರಸಿಂಹಮೂರ್ತಿ, ಸತೀಶ್‌ಗೌಡ, ಸೋಮೇಶ್, ಪ್ರದೀಪ್, ನಯಾಸ್, ರಾಜು, ಕೃಷ್ಣೇಗೌಡ, ಸಿದ್ದರಾಮ, ಹೇಮಂತ, ಮಲ್ಲೇಶ, ಕಾಳಪ್ಪ, ರವಿಗೌಡ, ವೆಂಕಟೇಶ್, ಭೈರಪ್ಪ, ಕಲ್ಲೇಶಗೌಡ, ನಂದಿನಿ, ರಾಮಚಂದ್ರ, ಸಂತೋಷ ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ: ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ತಿ.ನರಸೀಪುರ, ಮೇ 28(ಎಸ್‌ಕೆ)– ಪಟ್ಟಣದ ವಿದ್ಯೋದಯ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ವಿದ್ಯೋದಯ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಸಕ್ತ ಸಾಲಿನ ಎಸ್‌ಎಸ್ ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ವಿಷಯವಾರು 100ಕ್ಕೆ 100 ಹಾಗೂ ಕನ್ನಡ ಭಾಷೆಯಲ್ಲಿ 125ಕ್ಕೆ 125 ಅಂಕ ಪಡೆದ ಸಂಸ್ಥೆಯ ಅಧೀನದ ಎಲ್ಲಾ ಪ್ರೌಢಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ಆಡಳಿತ ಸಹಾಯಾಧಿಕಾರಿ ಎಸ್.ಶಿವನಂಜಪ್ಪ, ಪ್ರಾಚಾರ್ಯರಾದ ಎ.ಎಸ್. ನಟರಾಜು, ಎನ್.ಕಲ್ಪನಾ, ಟಿ.ಎಸ್. ಬಸವಣ್ಣಸ್ವಾಮಿ, ಮುಖ್ಯ ಶಿಕ್ಷಕರಾದ ಪುಟ್ಟಬುದ್ಧಿ, ಬಿ.ಉಮೇಶ್, ಜ್ಯೋತಿ, ನಾಗೇಂದ್ರ ಪ್ರಭು, ಡಿ.ಪ್ರಕಾಶ್, ಬಿ.ಎಸ್.ಸುನಿತಾ, ಎಂ.ಸುರೇಶ್, ಸಿದ್ದರಾಜು, ಶ್ರೀದೇವಿ, ಉಪನ್ಯಾಸಕ ಮೂಗೂರು ಕುಮಾರ ಸ್ವಾಮಿ, ಹಿರಿಯೂರು ಶಿವಶಂಕರ್, ದೊಡ್ಡನ ಹುಂಡಿ ಪ್ರದೀಪ್, ಪೋಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಹಳ್ಳದಕೇರಿ ಶಾಲೆ ವಿದ್ಯಾರ್ಥಿಗಳಿಗೆ ಸನ್ಮಾನ



ನಂಜನಗೂಡು, ಮೇ 28(ಸುದರ್ಶನ್)– ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಹಳ್ಳದಕೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಾದ ಸಿಂಚನಾ, ಗಗನಾ, ಕೀರ್ತನಾ, ಧನುಷ್ಟ, ವರ್ಷಿಣಿ, ಪ್ರಮೋದ್, ಯಶಸ್ವಿನಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಶಿಕ್ಷಣಾಧಿಕಾರಿ ರಾಜು ಮಾತನಾಡಿ, ಖಾಸಗಿ ಶಾಲೆಗಿಂತ ಸರ್ಕಾರಿ ಶಾಲೆ ವಿದ್ಯಾರ್ಥಿಗಳು ಯಾವುದಕ್ಕೂ ಕಡಿಮೆ ಇಲ್ಲ ಎಂಬುದನ್ನು ಈ ವಿದ್ಯಾರ್ಥಿಗಳನ್ನು ನೋಡಿದರೆ ತಿಳಿಯುತ್ತದೆ. ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ದಾಖಲಾತಿ ಹೆಚ್ಚಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಡಿಡಿಪಿಐ ರಾಮಚಂದ್ರ ರಾಜೇ ಅರಸ್, ಮುಖ್ಯಶಿಕ್ಷಕಿ ಕೆ.ಗೀತಾ ಹಾಜರಿದ್ದರು.



ಮೈಸೂರಿನ ಭಾರತೀಯ ವಿದ್ಯಾಭವನ (ಬಿವಿಬಿ) ಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಗಳಿಸಿದ ಹಿನ್ನೆಲೆಯಲ್ಲಿ ಭಾರತೀಯ ವಿದ್ಯಾಭವನದ ಮೈಸೂರು ಕೇಂದ್ರದ ಅಧ್ಯಕ್ಷರಾದ ಕೆ.ಬಿ. ಗಣಪತಿ ಹಾಗೂ ಗೌರವ ಕಾರ್ಯದರ್ಶಿ ಪಿ.ಎಸ್. ಗಣಪತಿ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಅರಮನೆ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಹಾಗೂ ಬಿವಿಬಿಯ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

'ಸರಸ್ವತಿ ಸದನಂ', 'ವಿದ್ಯಾನಂದಿನಿ ಗುರುಕುಲಂ' ಇಂದು ಉದ್ಘಾಟನೆ

ಮೈಸೂರು, ಮೇ 28(ಎಂಟಿವೈ)– ಮೈಸೂರಿನ ಹೊರ ವಲಯ ಉತ್ತನಹಳ್ಳಿಯಲ್ಲಿರುವ ಭಾರತೀ ಯೋಗಧಾಮದಲ್ಲಿ ನಿರ್ಮಿಸಿರುವ 'ಸರಸ್ವತಿ ಸದನಂ' ಹಾಗೂ ಮತ್ತು 'ವಿದ್ಯಾನಂದಿನಿ ಗುರುಕುಲಂ' ಕಟ್ಟಡಗಳ ಉದ್ಘಾಟನೆ ಹಾಗೂ ವಿದ್ವಾಂಸರಿಗೆ ಸನ್ಮಾನ ಸಮಾರಂಭ ನಾಳೆ (ಮೇ 29) ಸಂಜೆ 4 ಗಂಟೆಗೆ ಜರುಗಲಿದೆ ಎಂದು ಯೋಗಧಾಮದ ಟ್ರಸ್ಟಿ ಗಣಪತಿ ಭಟ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ಪ್ರವಾಸೋದ್ಯಮ ಮತ್ತು ಬಂದರು ರಾಜ್ಯ ಸಚಿವ ಶ್ರೀಪಾದ ಯಶೋ ನಾಯ್ಕ್ ಮತ್ತು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ನೂತನ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ. ಭಾರತೀ ಯೋಗಧಾಮದ ಸಂಸ್ಥಾಪಕ ಡಾ.ಕೆ.ಎಲ್.ಶಂಕರನಾರಾಯಣ ಜೋಯ್ಸ್ ಅಧ್ಯಕ್ಷತೆ ವಹಿಸಲಿರುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ ಸಿಂಹ, ಶಾಸಕರಾದ ಜಿ.ಟಿ. ದೇವೇಗೌಡ, ಎಸ್.ಎ.ರಾಮದಾಸ್ ಹಾಗೂ ಇತರರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಜ್ಯೋತಿಷಿ ಡಾ. ವಿಷ್ಣುಪ್ರಸಾದ ಹೆಬ್ಬಾರ್, ವಾಸ್ತು ತಜ್ಞ ಡಾ. ಮಹೇಶ ಮುನಿಯಂಗಳ ಅವರನ್ನು ಸನ್ಮಾನಿಸಲಾಗುತ್ತದೆ ಎಂದರು.

ಸರಸ್ವತಿ ಸದನಂ ಕಟ್ಟಡದಲ್ಲಿ ಭಾರತೀಯ ಶಾಸ್ತ್ರ ವಿದ್ಯೆ, ಕಲೆಗಳ ಕುರಿತು ಅಧ್ಯಯನ ಮತ್ತು ಸಂಶೋಧನೆಗಳನ್ನು ನಡೆಸಲಾಗುವುದು. ಇದಕ್ಕೆ ಅಗತ್ಯವಾದ ಗ್ರಂಥಗಳು ಹಾಗೂ ಸೌಲಭ್ಯಗಳು ಕಟ್ಟಡದಲ್ಲಿ ಇದೆ. ಸರಸ್ವತಿ ಸದನಂ ಕಟ್ಟಡವು 1 ರಿಂದ 10ನೇ ತರಗತಿ ಮಕ್ಕಳಿಗೆ ಆಧುನಿಕ ಶಿಕ್ಷಣದ ಜತೆಗೆ ಭಾರತೀಯ ವಿದ್ಯೆಗಳ ಕುರಿತು ಪರಿಚಯ ಮಾಡುವ ಗುರುಕುಲವಾಗಿದೆ ಎಂದರು. ಗೋಷ್ಠಿಯಲ್ಲಿ ಭಾರತೀ ಯೋಗಧಾಮದ ಟ್ರಸ್ಟಿಗಳಾದ ಶ್ರೀನಿವಾಸ್ ಭಟ್, ಆದರ್ಶ್ ಇದ್ದರು.

ಸಂಸದ ಅನಂತಕುಮಾರ್ ಹೆಗ್ಡೆ ಸಂಬಂಧಿ ಎಂದು ಹೇಳಿಕೊಂಡು 4.5 ಲಕ್ಷ ವಂಚನೆ: ಮಹಿಳೆ ದೂರು

ಮೈಸೂರು, ಮೇ 28–ಸಂಸದ ಅನಂತಕುಮಾರ್ ಹೆಗ್ಡೆ ತಮ್ಮ ಸೋದರಮಾವ ಎಂದು ಹೇಳಿಕೊಂಡ ಮಹಿಳೆಯೋರ್ವಳು ತಾನು ಬಾಡಿಗೆಗಿದ್ದ ಮನೆ ಮಾಲೀಕರಿಂದ ಸಾಲ ಪಡೆದು 4.5 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ದೂರು ದಾಖಲಾಗಿದೆ. ಉತ್ತರ ಕನ್ನಡ ಜಿಲ್ಲೆ ಶಿರಸಿ ನಿವಾಸಿ ರೇಖಾ ಹೆಗ್ಡೆ ಅಲಿಯಾಸ್ ಮೈತ್ರಿ(33) ಎಂಬುವರು 2021ರ ಆಗಸ್ಟ್ 12 ರಿಂದ 2022ರ ಫೆ.11ರವರೆಗೆ ಕುವೆಂಪುನಗರದ ನವಿಲು ರಸ್ತೆಯಲ್ಲಿರುವ ಮಂಜುಳಾ ಸುಧೀರ್ ಎಂಬುವರ ಮನೆಯಲ್ಲಿ ಬಾಡಿಗೆಗಿದ್ದರು. ಈ ವೇಳೆ ಸಂಸದ ಅನಂತ ಕುಮಾರ್ ಹೆಗ್ಡೆ ತಮ್ಮ ಸೋದರಮಾವ ಎಂದು ಹೇಳಿಕೊಂಡಿದ್ದ ಆಕೆ ಮೈಸೂರಿನಲ್ಲಿ ಮನೆ ಖರೀದಿ ಮಾಡುವುದಾಗಿ ತಿಳಿಸಿ ನೋಂದಣಿಗಾಗಿ ಎಂದು 7 ಲಕ್ಷ ರೂ.ಗಳನ್ನು ಮಂಜುಳಾ ಅವರಿಂದ ಸಾಲ ಪಡೆದಿದ್ದರು. ನಂತರ ಅನಂತಕುಮಾರ ಹೆಗ್ಡೆ ಮನೆ ಖರೀದಿಗೆ ನಾಲ್ಕೂವರೆ ಕೋಟಿ ರೂ.ಗಳನ್ನು ನೀಡುವುದಾಗಿ ಹೇಳಿದ್ದರು. ಆದರೆ ಹಣ ಕೊಡದೇ ಇದ್ದ ಕಾರಣ ಬ್ಯಾಂಕ್‌ನಲ್ಲಿ ಸಾಲ ಪಡೆಯುತ್ತಿರುವುದಾಗಿ ಸಬೂಬು ಹೇಳಿ, ರೇಖಾ ಹೆಗ್ಡೆ ಫೆ.11ರಂದು ಮನೆ ಖಾಲಿ ಮಾಡಿಕೊಂಡು ಹೋಗಿದ್ದಾರೆ.

ಅದಾದ 10 ದಿನಗಳ ನಂತರ ರೇಖಾ ಹೆಗ್ಡೆ ತಂದೆ ನರಸಿಂಹ ಹೆಗ್ಡೆ ಅವರ ಖಾತೆಯಿಂದ ಮಂಜುಳಾ ಅವರ ಖಾತೆಗೆ 2.5 ಲಕ್ಷ ರೂ. ವರ್ಗಾವಣೆ ಆಗಿದ್ದು, ಉಳಿಕೆ 4.5 ಲಕ್ಷ ರೂ. ಕೇಳಿದಾಗ ಜೀವ ಬೆದರಿಕೆ ಹಾಕಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೈಸೂರಿನ ಕುವೆಂಪುನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು